



# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 7 ಗುರುವಾರ 2024

ಸಂಪುಟ: 44 | ಸಂಚಿಕೆ: 319 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com










# ಫ್ಯಾಷನ್‌ಗಾಗಿ ಯಾತ್ರಾ ಸ್ಥಳಗಳಿಗೆ ಹೋಗಬೇಡಿ; ದೇವಸ್ಥಾನಗಳ ಐತಿಹಾಸಿಕ ಹಿನ್ನೆಲೆ ಅರಿಯಿರಿ

## ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಸಲಹೆ

ಮೈಸೂರು, ಮಾ.6(ಬಿಎಲ್‌ಯು)– ತಾವು ಭೇಟಿ ನೀಡುವ ಯಾತ್ರಾ ಸ್ಥಳಗಳಲ್ಲಿನ ದೇವಸ್ಥಾನಗಳ ಐತಿಹಾಸಿಕ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕು. ಅದು ಬಿಟ್ಟು ಫ್ಯಾಷನ್‌ಗಾಗಿ ಯಾತ್ರಾ ಸ್ಥಳಗಳಿಗೆ ಹೋಗಬಾರದು ಎಂದು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದಸ್ವಾಮೀಜಿ ಸಲಹೆ ನೀಡಿದರು. ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಡಾ.ವಿಕ್ರಂ ಸಂಪತ್ ಅವರ 'ವೇಟಿಂಗ್ ಫಾರ್ ಶಿವ: ಅನ್‌ಅರ್ಥಿಂಗ್ ದ ಟ್ರುಥ್ ಆಫ್ ಕಾಶಿಸ್ ಜ್ಞಾನವ್ಯಾಪಿ (Waiting for Shiva: Unearthing the truth of Kashi's Gyan Vapi) ● 10ನೇ ಪುಟಕ್ಕೆ



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಬುಧವಾರ ಡಾ.ವಿಕ್ರಂ ಸಂಪತ್ ಅವರ ವೇಟಿಂಗ್ ಫಾರ್ ಶಿವ: ಅನ್ ಅರ್ಥಿಂಗ್ ದ ಟ್ರುಥ್ ಆಫ್ ಕಾಶಿಸ್ ಜ್ಞಾನವ್ಯಾಪಿ (Waiting for Shiva: Unearthing the truth of Kashi's Gyan Vapi) ಪುಸ್ತಕವನ್ನು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಬಿಡುಗಡೆ ಮಾಡಿದರು.

### 'ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ 1947ರಲ್ಲಿ ಸಿಕ್ಕಿದರೂ, ದೇಶದ ದೇವರುಗಳಿಗೆ ಸ್ವಾತಂತ್ರ್ಯ ಸಿಗಲಿಲ್ಲ'!: ಕೆಬಿಜಿ

ಮೈಸೂರು, ಮಾ.6(ಬಿಎಲ್‌ಯು)– ಹಿಂದೂಗಳ ಪವಿತ್ರ ಯಾತ್ರಾ ಸ್ಥಳ ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ನಿಯೋಜಿಸಿರುವ ಭಾರಿ ಭದ್ರತೆಯನ್ನು ಗಮನಿಸಿದರೆ ದೇವಸ್ಥಾನದ ನೆಲೆ ಹಾಗೂ ಪಾವಿತ್ರ್ಯತೆಗೆ ಧಕ್ಕೆಯಾಗುತ್ತದೇನೋ ಎಂಬ ಭಾವನೆ ಭಕ್ತರಲ್ಲಿ ಬರಬಹುದು ಅನ್ನಿಸುತ್ತದೆ ಎಂದು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಡಾ.ವಿಕ್ರಂ ಸಂಪತ್ ಬರೆದಿರುವ ವೇಟಿಂಗ್ ಫಾರ್ ಶಿವ: ಅನ್ ಅರ್ಥಿಂಗ್ ದ ಟ್ರುಥ್ ಆಫ್ ಕಾಶಿಸ್ ಜ್ಞಾನ್‌ವ್ಯಾಪಿ (Waiting for Shiva: Unearthing the truth of Kashi's Gyan Vapi) ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಉಪಸ್ಥಿತರಿದ್ದು ಮಾತನಾಡಿದ ಅವರು, ಕಾಶಿಗೆ ಎರಡು ಬಾರಿ ತಾವು ಭೇಟಿ ನೀಡಿದ್ದು, ಅಲ್ಲಿನ ಭಾರಿ ಭದ್ರತೆ ನೋಡಿ ನನಗೆ ಅಚ್ಚರಿಯಾಯಿತು ಎಂದು ಹೇಳಿದರು. ದೇವಸ್ಥಾನದ ಸುತ್ತ ನಿಯೋಜನೆಗೊಂಡಿರುವ ಭದ್ರತಾ ಸಿಬ್ಬಂದಿ ಹಾಗೂ ಅದಕ್ಕೆ ಹೊಂದಿಕೊಂಡಿರುವ ಜ್ಞಾನವ್ಯಾಪಿ ನೋಡಿದಾಗ ಬೇಸರವಾಗುತ್ತೆ. ದೇವಸ್ಥಾನದ ಪಾವಿತ್ರ್ಯತೆಗೆ ಇದರಿಂದ ಧಕ್ಕೆ ಆಗಿದೆ ಎಂದು ಡಾ.ಕೆ.ಬಿ.ಗಣಪತಿಯವರು ಅಭಿಪ್ರಾಯಪಟ್ಟರು.

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು. ಅದು ರಾಜಕೀಯ ಸ್ವಾತಂತ್ರ್ಯ ಮಾತ್ರ ಆದರೆ, ನಮ್ಮ ದೇಶದ ದೇವರಿಗೆ ಮಾತ್ರ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ಅದು 2014ರ ನಂತರವೇ ಸಾಧ್ಯವಾಯಿತು ಎಂದು ಗಣಪತಿಯವರು ಸೂಕ್ಷ್ಮವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.



# 5, 8, 9, 11ನೇ ತರಗತಿಗೆ ಉದ್ದೇಶಿತ ಪಬ್ಲಿಕ್ ಪರೀಕ್ಷೆ ರದ್ದು

● ರಾಜ್ಯ ಹೈಕೋರ್ಟ್ ಮಹತ್ವದ ನಿರ್ಧಾರ ● ಸರ್ಕಾರ ಈ ಸಂಬಂಧ ಹೊರಡಿಸಿದ್ದ ಅಧಿಸೂಚನೆ ರದ್ದು ● ಸರ್ಕಾರದ ಈ ನಿರ್ಧಾರ ಪ್ರಶ್ನಿಸಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ಹೈಕೋರ್ಟ್ ಮೊರೆ ಹೋಗಿದ್ದವು ● ಈ ಬಾರಿಯಿಂದಲೇ ಈ ತರಗತಿಗಳಿಗೆ ಪಬ್ಲಿಕ್ ಪರೀಕ್ಷೆ ಇಲ್ಲ ● ಜೊತೆಗೆ 9ನೇ ತರಗತಿವರೆಗೆ ವಿದ್ಯಾರ್ಥಿಗಳ ಅನುತ್ತೀರ್ಣಗೊಳಿಸುವಂತಿಲ್ಲ ● ಇನ್ನು ಮುಂದೆ ಕೇವಲ 10 ಹಾಗೂ 12ನೇ ತರಗತಿಗೆ ಮಾತ್ರ ಪಬ್ಲಿಕ್ ಪರೀಕ್ಷೆ

ಬೆಂಗಳೂರು, ಮಾ.6(ಕೆಎಂಶಿ)– ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ 5, 8, 9 ಹಾಗೂ 11ನೇ ತರಗತಿಗಳಿಗೆ ರಾಜ್ಯ ಸರ್ಕಾರ ನಡೆಸಲು ಉದ್ದೇಶಿಸಿದ್ದ ಪಬ್ಲಿಕ್ ಪರೀಕ್ಷೆಯನ್ನು ಕರ್ನಾಟಕ ಹೈಕೋರ್ಟ್ ಇಂದಿಲ್ಲಿ ರದ್ದುಪಡಿಸಿದೆ.

ರಾಜ್ಯ ಪಠ್ಯ ಕ್ರಮ ಅನುಸರಿಸುವ ಶಾಲೆಗಳಲ್ಲಿನ ಈ ತರಗತಿಗಳಿಗೆ ರಾಜ್ಯ ಮಟ್ಟದ ಬೋರ್ಡ್ ಪರೀಕ್ಷೆ ನಡೆಸುವಲ್ಲಿ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ರದ್ದುಗೊಳಿಸಿದೆ. ಮಕ್ಕಳ ಕಲಿಕೆಗೆ



ಅನುಕೂಲ ಎಂಬ ಉದ್ದೇಶದಿಂದ ಕರ್ನಾಟಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸರ್ಕಾರ ಜಂಟಿಯಾಗಿ ಈ ಆದೇಶ ಹೊರಡಿಸಿದ್ದವು. ಸರ್ಕಾರದ ಈ ನಿರ್ಧಾರವನ್ನು ಪ್ರಶ್ನಿಸಿ ಅನುದಾನ ರಹಿತ ಖಾಸಗಿ ಶಾಲೆಗಳ ಒಕ್ಕೂಟ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ರವಿ ಹೊಸಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಮಹತ್ವದ ತೀರ್ಪು ನೀಡಿದೆ. ಶಾಲಾ ಪರೀಕ್ಷೆಗಳನ್ನು ಅಧಿಸೂಚನೆ ರೂಪದಲ್ಲಿ ಜಾರಿಗೆ ತರಲಾಗದು, ಇದು ನಿಯಮಗಳನ್ನು ಅನುಸರಿಸಿ ಕಾಯಿದೆ ಪ್ರಕಾರ ನಡೆಸಬೇಕಾದ ಪ್ರಕ್ರಿಯೆ. ಅಷ್ಟೇ ಅಲ್ಲ, ಸರ್ಕಾರದ ವಿವೇಚನೆಗೂ ● 10ನೇ ಪುಟಕ್ಕೆ

# ಲೋಕಸಭೆ ಚುನಾವಣೆ; ಮಂಡ್ಯ ನಾಯಕರ ಜತೆ ಮಾಜಿ ಸಿಎಂ ಕುಮಾರಸ್ವಾಮಿ ಸಮಾಲೋಚನೆ

● ನಾನು ಯಾರ ಹೆಸರನ್ನು ಘೋಷಣೆ ಮಾಡುತ್ತೇನೆಯೋ ಅವರ ಪರ ನೀವು ಕೆಲಸ ಮಾಡಿ ● ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಜಿಲ್ಲಾ ಬಿಜೆಪಿ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದ ಮಾಜಿ ಮುಖ್ಯಮಂತ್ರಿ



ಬೆಂಗಳೂರು: ಲೋಕಸಭೆ ಚುನಾವಣೆಯ ಪೂರ್ವ ತಯಾರಿ, ಅಭ್ಯರ್ಥಿ ಆಯ್ಕೆಯ ಬಗ್ಗೆ ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ, ಇಂದು ಮಂಡ್ಯ ಜಿಲ್ಲೆಯ ನಾಯಕರ ಜತೆ ಮಹತ್ವದ ಸಮಾಲೋಚನೆ ನಡೆಸಿದರು.

ಬೆಂಗಳೂರು ಗ್ರಾಮಾಂತರ ಲೋಕಸಭೆ ಕ್ಷೇತ್ರದ ಸಭೆಯ ನಂತರ ತಮ್ಮ ನಿವಾಸದಲ್ಲಿ ಮಂಡ್ಯ ನಾಯಕರ ಸಭೆ ನಡೆಸಿದ ಕುಮಾರಸ್ವಾಮಿ ಅವರು; ಜಿಲ್ಲೆಯ ಬಿಜೆಪಿ ನಾಯಕರು, ರಾಜ್ಯ ಬಿಜೆಪಿ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಭ್ಯರ್ಥಿ ಆಯ್ಕೆ ಮಾಡುವುದಾಗಿ ಮುಖಂಡರಿಗೆ ತಿಳಿಸಿದರು. ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಮಾಜಿ ಶಾಸಕರಾದ ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ಡಾ.ಅನ್ನದಾನಿ, ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜಿಲ್ಲಾಧ್ಯಕ್ಷ ರಮೇಶ್ ಈ ಸಭೆಯಲ್ಲಿ ಭಾಗವಹಿಸಿದ್ದರು.

ಜಿಲ್ಲೆಯ ಸ್ಥಿತಿಗತಿಗಳನ್ನು ವಿಸ್ತೃತವಾಗಿ ಚರ್ಚೆ ನಡೆಸಿದ ಮಾಜಿ ಮುಖ್ಯಮಂತ್ರಿಗಳು, ಬಿಜೆಪಿ ಮೈತ್ರಿ ನಂತರದ ಜಿಲ್ಲೆಯಲ್ಲಿನ ರಾಜಕೀಯ ಪರಿಸ್ಥಿತಿಗಳ ಬಗ್ಗೆ ಅವಲೋಕನ ಮಾಡಿದರು. ಅಭ್ಯರ್ಥಿ ಆಯ್ಕೆ ಬಗ್ಗೆ ನಾಯಕರಿಂದ ಮಾಹಿತಿ ಸಂಗ್ರಹ ಮಾಡಿದ ಅವರು; ಚುನಾವಣೆಯಲ್ಲಿ ಗೆಲುವು ಮುಖ್ಯ. ಮೈತ್ರಿ ಅಭ್ಯರ್ಥಿಯನ್ನು ನಾವು ಗೆಲ್ಲಿಸಿಕೊಳ್ಳಲೇಬೇಕು. ಹಿಂದಿನ ಘಟನೆಗಳಿಂದ ಪಾಠ ಕಲಿಯಬೇಕು. ● 2ನೇ ಪುಟಕ್ಕೆ

ಬರಗಾಲ, ಬೇಸಿಗೆಯ ಬೇಗೆ ಹಿನ್ನೆಲೆ: ಕುಡಿಯುವ ನೀರಿನ ಹಾಹಾಕಾರ ತಪ್ಪಿಸಲು

**ಮೈಸೂರು ಜಿಲ್ಲಾಡಳಿತ, ನಗರಪಾಲಿಕೆ ಸನ್ನದ್ಧ**

ಮೇ ಅಂತ್ಯದವರೆಗಂತೂ ಮೈಸೂರಲ್ಲಿ ಕುಡಿಯುವ ನೀರಿಗೆ ತೊಂದರೆ ಇಲ್ಲ

■ ಪುಟ–3









# ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ಗೆ ಎರಡು ರಾಷ್ಟ್ರ ಪ್ರಶಸ್ತಿಗಳ ಗರಿ




ಮೈಸೂರು, ಮಾ. 6– ಮೈಸೂರಿನ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್, ಮುಂಬಯಿಯ ಬಾಂಬೆ ಎಕ್ಸಿಬಿಷನ್ ಸೆಂಟರ್‌ನಲ್ಲಿ ನಡೆದ ಪ್ರತಿಷ್ಠಿತ ರಾಷ್ಟ್ರೀಯ ಅಮ್ಯೂಸ್‌ಮೆಂಟ್ ಪ್ರಶಸ್ತಿಗಳನ್ನು ಗಳಿಸಿದೆ. ಇಂಡಿಯನ್ ಅಸೋಸಿಯೇಷನ್ ಆಫ್ ಅಮ್ಯೂಸ್‌ಮೆಂಟ್ ಪಾರ್ಕ್ಸ್ ಮತ್ತು ಇಂಡಸ್ಟ್ರೀಸ್ (ಐಎಎಪಿಐ) ಆಯೋಜಿಸಿದ್ದ ಸಮಾರಂಭದಲ್ಲಿ ಈವೆಂಟ್ಸ್ ಆಂಡ್ ಪಾರ್ಕ್ ಮತ್ತು ಇನ್ನೋವೇಟಿವ್ ಡಿಜಿಟಲ್ ಮಾರ್ಕೆಟಿಂಗ್‌ಗಳಲ್ಲಿ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನ ಶ್ರೇಷ್ಠತೆಯನ್ನು ಗುರುತಿಸಲಾಗಿದೆ. ಇಂಡಿಯನ್ ಅಸೋಸಿಯೇಶನ್ ಆಫ್ ಅಮ್ಯೂಸ್‌ಮೆಂಟ್ ಪಾರ್ಕ್ಸ್ (ಐಎಎಪಿಐ) ಮತ್ತು ಇಂಡಸ್ಟ್ರೀಸ್ ಭಾರತದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್‌ಗಳು, ವಾಟರ್ ಪಾರ್ಕ್‌ಗಳು ಮತ್ತು ಒಳಾಂಗಣ ಅಮ್ಯೂಸ್‌ಮೆಂಟ್ ಸೆಂಟರ್‌ಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವ ಒಂದು ಸಂಸ್ಥೆಯಾಗಿದೆ. ಜಿಆರ್‌ಎಸ್‌ನ ನಿರ್ದೇಶಕ ಮತ್ತು ವ್ಯವಹಾರಿಕ ಮುಖ್ಯಸ್ಥ ಅಶ್ವಿನ್ ಡಾಂಗೆ ಮತ್ತು ಕಾರ್ಯಾಚರಣೆ ಮುಖ್ಯಸ್ಥ ಬಾಲಕೃಷ್ಣ ಕಿಣಿ ಅವರು ಸಂಸ್ಥೆಯ ಪರವಾಗಿ ಪ್ರಶಸ್ತಿ ಸ್ವೀಕರಿಸಿದರು.

## ಇಂದು ವಾಲಿಬಾಲ್ ಪಂದ್ಯಾವಳಿ

ಮೈಸೂರು,ಮಾ.6–2023–24ನೇ ಸಾಲಿನ ರಾಷ್ಟ್ರೀಯ ಹಬ್ಬಗಳ ಆಚರಣೆ ಅಂಗವಾಗಿ ಜಿಲ್ಲಾಮಟ್ಟದ ಪುರುಷ ಮತ್ತು ಮಹಿಳೆಯರ ವಾಲಿಬಾಲ್ ಪಂದ್ಯಾವಳಿಯನ್ನು ಮಾ.7ರಂದು ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಡೆಸಲಾಗುವುದು. ವಾಲಿಬಾಲ್ ಪಂದ್ಯಾವಳಿಯಲ್ಲಿ ಮೈಸೂರು ಜಿಲ್ಲೆಯವರು ಮಾತ್ರ ಭಾಗವಹಿಸಬಹುದು. ಜಿಲ್ಲಾಮಟ್ಟದ ಪುರುಷ ಮತ್ತು ಮಹಿಳೆಯರ ವಾಲಿಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದು ವಿಜೇತರಾದವರಿಗೆ ನಗದು ಬಹುಮಾನ, ಟ್ರೋಫಿ, ಪದಕ ಮತ್ತು ಪ್ರಮಾಣ ಪತ್ರವನ್ನು ವಿತರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ನಜರ್‌ಬಾದ್‌ನ ಚಾಮುಂಡಿವಿಹಾರ ಕ್ರೀಡಾಂಗಣದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ದೂ.ಸಂ: 0821–2564179 ಮತ್ತು ವಾಲಿಬಾಲ್ ತರಬೇತುದಾರ ರವೀಂದ್ರ ಟಿ.ಬಿ., ದೂ. ಸಂ: 82778 21212 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ–ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## ಸರ್ಕಾರಿ ಅಧಿಕಾರಿಗಳಿಂದ ರೈತರ ನಿರ್ಲಕ್ಷ್ಯ

### ರೈತ ಮುಖಂಡ ಬ್ಯಾತಹಳ್ಳಿ ಮಾದಪ್ಪ ಆರೋಪ

ಮೈಸೂರು,ಮಾ.6(ಜಿಎ)–ಮೈಸೂರು ಜಿಲ್ಲೆಯ ಕಂದಾಯ, ತೋಟಗಾರಿಕೆ, ವಿದ್ಯುತ್, ನೀರಾವರಿ ಇಲಾಖೆಗಳಲ್ಲಿ ಕೆಳಹಂತದ ಅಧಿಕಾರಿಗಳು ರೈತರ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದು, ರೈತರು ತಮ್ಮ ಕೆಲಸಗಳಿಗಾಗಿ ಕಚೇರಿಗೆ ಹೋದಲ್ಲಿ ಅಧಿಕಾರಿಗಳು ಕೈಗೇ ಸಿಗುವುದಿಲ್ಲ. ಇಲ್ಲವೇ ಕೆಲಸ ಮಾಡಿಕೊಡಲು ನಿರ್ಲಕ್ಷ್ಯ ಮಾಡುತ್ತಾರೆ ಎಂದು ಕಬ್ಬು ಬೆಳೆಗಾರರ ಹೋರಾಟ ಹಿತರಕ್ಷಣಾ ಸಮಿತಿಯ ಪದಾಧಿಕಾರಿ ಬ್ಯಾತಹಳ್ಳಿ ಮಾದಪ್ಪ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರಿಗೆ ಸಂಬಂಧಿಸಿದ ದಾಖಲಾತಿ ಹಾಗೂ ಇನ್ನಿತರ ಸೌಲಭ್ಯಗಳನ್ನು ನಿಜವಾದ ಫಲಾನುಭವಿಗಳಿಗೆ ಅಧಿಕಾರಿಗಳು ನೀಡುತ್ತಿಲ್ಲ. ಹೀಗಾಗಿ ಜಿಲ್ಲಾಧಿಕಾರಿಗಳು ಈ ಬಗ್ಗೆ ಕ್ರಮ ವಹಿಸಬೇಕೆಂದು ಮಾದಪ್ಪ ಆಗ್ರಹಿಸಿದರು. ಅಂತರ್ಜಲ ಹೆಚ್ಚಿಸಲು ರೈತರು, ಆಲ, ಹತ್ತಿ, ಮಾವು, ಹಲಸು, ಬೇವು, ಮತ್ತಿ, ನಂದಿ, ಇಪ್ಪೆ, ಬೇಲ ಮೊದಲಾದ ಗಿಡಗಳನ್ನು ನೆಡಬೇಕು. ಇದರಿಂದಾಗಿ ಪ್ರಾಣಿ ಪಕ್ಷಿಗಳಿಗೂ ಆಹಾರ ದೊರಕುತ್ತದೆ ಎಂದು ಸಲಹೆ ನೀಡಿದರು. ರೈತ ಯುವಕರ ಮದುವೆಗೆ ಸೂಕ್ತ ವಧು ಸಿಗದೇ ಸಮಸ್ಯೆಯಾಗಿದೆ. ರೈತ ಕುಟುಂಬದಲ್ಲಿ ಜನಿಸಿದ ಯುವತಿಯರು ಸಹಾ ತಮಗೆ ಓದಿದವರೇ, ನಗರದಲ್ಲಿ ಕೆಲಸದಲ್ಲಿರುವವರೇ ಬೇಕೆಂದು ಹಠ ಹಿಡಿಯುತ್ತಿರುವುದು ಸಮಸ್ಯೆಗೆ ಕಾರಣ ವಾಗಿದೆ. ಹೀಗಾಗಿ ಈಗಲಾದರೂ ತಮ್ಮ ಮನೋಭಾವ ಬದಲಾಯಿಸಿಕೊಂಡು ಗ್ರಾಮೀಣ ಪ್ರದೇಶದ ಯುವಕರನ್ನು ವಿವಾಹವಾಗಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಧನಗಳ್ಳಿ ಕೆಂಡಗಣ್ಣಸ್ವಾಮಿ, ಸೋಮಣ್ಣ, ನಾಗೇಂದ್ರಸ್ವಾಮಿ ಉಪಸ್ಥಿತರಿದ್ದರು.

## ರಾಜಕೀಯ ಪಕ್ಷಗಳಿಂದ ನಾಯಕ ಸಮುದಾಯ ನಿರ್ಲಕ್ಷ್ಯ

**ಪ್ರಾಂತ ನಾಯಕ ಮಹಾಸಭಾ ಆರೋಪ**

ಮೈಸೂರು, ಮಾ.6(ಜಿಎ)–ನಾಯಕ ಸಮುದಾಯದವರಿಗೆ ರಾಜಕೀಯ ಪಕ್ಷಗಳು ಸೂಕ್ತ ಸ್ಥಾನಮಾನ ನೀಡುವ ನಿಟ್ಟಿನಲ್ಲಿ ನಿರ್ಲಕ್ಷ್ಯ ಧೋರಣೆ ಮುಂದುವರಿಸಿದಲ್ಲಿ ಬರುವ ಲೋಕಸಭಾ ಚುನಾವಣೆ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಮೈಸೂರು ಪ್ರಾಂತ್ಯ ನಾಯಕ ಮಹಾಸಭಾ ಎಚ್ಚರಿಸಿದೆ.

ಈ ಕುರಿತು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಹಾಸಭಾದ ಸದಸ್ಯ ಸತೀಶ್‌ಬಾಬು ಮಾತನಾಡಿ, ಮೈಸೂರು–ಚಾಮರಾಜನಗರ–ಮಂಡ್ಯ–ಹಾಸನ–ಕೊಡಗು ಸೇರಿದಂತೆ ಮೈಸೂರು ಪ್ರಾಂತ್ಯದಲ್ಲಿ 5 ಲಕ್ಷಕ್ಕೂ ಅಧಿಕ ಮಂದಿ ನಾಯಕ ಸಮಾಜದವರಿದ್ದಾರೆ. ಆದರೆ ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಎಚ್.ಡಿ. ಕೋಟೆಯಲ್ಲಿ ಮಾತ್ರ ನಾಯಕ ಸಮಾಜದ ಒಬ್ಬರು ಶಾಸಕರಾಗಿದ್ದಾರೆ. ಹೀಗಾಗಿ ರಾಜಕೀಯ ಪಕ್ಷಗಳು ಕೇವಲ ಚುನಾವಣೆ ವೇಳೆ ಮಾತ್ರ ಸಮುದಾಯದವರನ್ನು ಬಳಸಿಕೊಳ್ಳುತ್ತಿವೆ. ಸಮುದಾಯದ ರಾಜಕೀಯ ಮುಖಂಡರಿಗೆ ಸೂಕ್ತ ಪ್ರಾತಿನಿಧ್ಯ ನೀಡಿಲ್ಲ. ನಿಗಮ ಮಂಡಳಿ ನೇಮಕ ವೇಳೆಯೂ ಇದೇ ನಡೆದಿದೆ. ಈಗಲಾದರೂ ಸೂಕ್ತ ಪ್ರಾತಿನಿಧ್ಯ ನೀಡದಿದ್ದಲ್ಲಿ ಮುಂಬರುವ ಚುನಾವಣೆ ವೇಳೆ ದಿಟ್ಟ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಸದಸ್ಯರಾದ ಮಂಜುನಾಥ್, ಶಿವಮಾದು, ನಟರಾಜ್, ಸುನಿಲ್, ನಾರಾಯಣ ಬದನಗುಪ್ಪೆ ಉಪಸ್ಥಿತರಿದ್ದರು.

## ಉದಯಗಿರಿಯಿಂದ ತಾಯಿ, ಮಗ ನಾಪತ್ತೆ

ಮೈಸೂರು,ಮಾ.6–ತಾಯಿ, ಮಗ ಕಾಣೆಯಾಗಿರುವ ಬಗ್ಗೆ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ಉದಯಗಿರಿ ಠಾಣಾ ವ್ಯಾಪ್ತಿ ನಿವಾಸಿ ರಾಘವೇಂದ್ರ ಅವರ ಪತ್ನಿ ಡಿ.ಎಸ್.ಶೃತಿ (36) ಮತ್ತು ಎಂ.ಆರ್. ರೋಹನ್ (11) ಕಾಣೆಯಾದವರು. ಇವರು ಮಾ. 12, 2023ರಂದು ಸಂಜೆ 4 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವರು ಇದುವರೆಗೂ ಮನೆಗೆ ವಾಪಸ್ ಬಂದಿಲ್ಲ ಎಂದು ಆಕೆಯ ಪತಿ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಉದಯಗಿರಿ ಪೊಲೀಸ್ ಠಾಣೆ ಸಂಪರ್ಕಿಸಲು ಕೋರಲಾಗಿದೆ.




ಒಂದನೇ ಪುಟದಿಂದ

## ಸಿಎಂ ಕುಮಾರಸ್ವಾಮಿ ಸಮಾಲೋಚನೆ

ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು ಎಂದು ತಾಕೀತು ಮಾಡಿದರು. ನಾನು ಯಾರ ಹೆಸರನ್ನು ಘೋಷಣೆ ಮಾಡುತ್ತೇನೆಯೋ ಅವರ ಪರವಾಗಿ ನೀವು ಕೆಲಸ ಮಾಡಿ. ಯಾವ ಕಾರಣಕ್ಕೂ ಮೈತ್ರಿ ಧರ್ಮ ಮೀರುವುದು ಬೇಡ. ಜಿಲ್ಲೆಯ ಬಿಜೆಪಿ ನಾಯಕರು, ರಾಜ್ಯ ಬಿಜೆಪಿ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಭ್ಯರ್ಥಿ ಆಯ್ಕೆ ಮಾಡಲಾಗುವುದು ಎಂದು ಜಿಲ್ಲಾ ನಾಯಕರಿಗೆ ಹೇಳಿದರು.

ಪಕ್ಷಕ್ಕೆ ಹಾಗೂ ಚುನಾವಣೆ ಗೆಲುವಿಗೆ ಹಾನಿ ಆಗುವಂತಹ ಯಾವುದೇ ಕೆಲಸವನ್ನು ಯಾರೂ ಮಾಡಬಾರದು. ಅಭ್ಯರ್ಥಿ ಯಾರು ಆಗುತ್ತಾರೆ ಎನ್ನುವುದು ಮುಖ್ಯವಲ್ಲ, ಗೆಲುವೇ ಮುಖ್ಯ ಎಂದು ಎಲ್ಲಾ ನಾಯಕರಿಗೆ ಕುಮಾರಸ್ವಾಮಿ ಅವರು ಮನವರಿಕೆ ಮಾಡಿಕೊಟ್ಟರು. ಅಲ್ಲದೆ, ನಾಯಕರು ಕೊಟ್ಟ ಸಲಹೆಗಳನ್ನು ಆಲಿಸಿದ ಮಾಜಿ ಮುಖ್ಯಮಂತ್ರಿಗಳು, ಇದೇ ವೇಳೆ ಅವರಿಗೆ ಕೆಲ ಮಹತ್ವದ ಸೂಚನೆಗಳನ್ನು ಕೊಟ್ಟರು. ಈ ಕ್ಷಣದಿಂದಲೇ ಚುನಾವಣಾ ಕೆಲಸದಲ್ಲಿ ತೊಡಗಿಸಿಕೊಳ್ಳುವಂತೆ ಅವರು ನಿರ್ದೇಶನ ನೀಡಿದರು.

**ಮೈಸೂರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆ**

# ಅನಧಿಕೃತ ಹೋಮ್ ಸ್ಟೇಗಳನ್ನು ಬಂದ್ ಮಾಡಿ

### ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ



ಮೈಸೂರು ಜಿ.ಪಂ ಸಭಾಂಗಣದಲ್ಲಿ ಬುಧವಾರ ನಡೆದ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿದರು.

ಮೈಸೂರು,ಮಾ.6(ಎಂಟಿವೈ)–ಪ್ರವಾಸಿಗರ ಸುರಕ್ಷತೆಯ ಹಿತದೃಷ್ಟಿಯಿಂದ ಜಿಲ್ಲೆಯಲ್ಲಿರುವ ಅನಧಿಕೃತ ಹೋಮ್–ಸ್ಟೇ ಪತ್ತೆ ಮಾಡಿ, ಅವುಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಸೂಚಿಸಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಜಿಲ್ಲಾ ಪ್ರವಾಸೋದ್ಯಮ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳ ವೀಕ್ಷಣೆಗಾಗಿ ಬರುವ ಪ್ರವಾಸಿಗರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕಟ್ಟೆಚ್ಚರ ವಹಿಸಬೇಕು. ಇತ್ತೀಚಿನ ದಿನಗಳಲ್ಲಿ ಹೋಮ್ ಸ್ಟೇಗಳ ಸಂಖ್ಯೆ ಹೆಚ್ಚಾಗುತ್ತಿವೆ. ಅನುಮತಿ ಪಡೆಯದೇ ನಡೆಸುತ್ತಿರುವ ಹೋಮ್ ಸ್ಟೇಗಳು ಸುರಕ್ಷಿತವಲ್ಲ ಎಂಬ ಶಂಕೆ ವ್ಯಕ್ತವಾಗಿದೆ. ಮಿತಿ ಮೀರುತ್ತಿರುವ ಹೋಮ್ ಸ್ಟೇಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿರುವ ಹೋಮ್ ಸ್ಟೇಗಳ ಪಟ್ಟಿ ಮಾಡಬೇಕು. ಅವುಗಳಲ್ಲಿ ಯಾವ ಹೋಮ್ ಸ್ಟೇಗಳಿಗೆ ಅನುಮತಿ ನೀಡಲಾಗಿದೆ ಎಂದು ಪರಿಶೀಲಿಸಬೇಕು. ಅನುಮತಿ ಇಲ್ಲದೆ ಅನಧಿಕೃತವಾಗಿ ನಡೆಸುತ್ತಿರುವ ಹೋಮ್ ಸ್ಟೇಗಳ ವಿರುದ್ಧ ಕ್ರಮ ಕೈಗೊಂಡು, ನಿರ್ದಾಕ್ಷಿಣ್ಯವಾಗಿ ಮುಚ್ಚಿಸಬೇಕು. ಅಲ್ಲದೇ ನೋಂದಾಯಿತ ಹೋಮ್ ಸ್ಟೇಗಳಲ್ಲಿ ಸುರಕ್ಷತಾ ಕ್ರಮ ಕೈಗೊಂಡಿರುವ ಕ್ರಮ ಕುರಿತು ಪರಿಶೀಲಿಸುವಂತೆ ಸಲಹೆ ನೀಡಿದರು.

ಪ್ರವಾಸೋದ್ಯಮ ಅಭಿವೃದ್ಧಿ ಹಾಗೂ ಪ್ರವಾಸಿಗರ ಹಿತದೃಷ್ಟಿಯಿಂದಾಗಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಸದಸ್ಯರು ಹಾಗೂ ಪ್ರವಾಸೋದ್ಯಮದಲ್ಲಿ ನೇರ ಪಾಲುದಾರರಾಗಿರುವ ವಿವಿಧ ಕ್ಷೇತ್ರದ ಪ್ರತಿನಿಧಿಗಳೊಂದಿಗೆ ಮೂರು ತಿಂಗಳಿಗೊಮ್ಮೆ ಸಭೆ ಕರೆದು ಪ್ರವಾಸಿ ತಾಣಗಳ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮ ಕುರಿತು ಚರ್ಚಿಸಿ, ಅಗತ್ಯ ಸಲಹೆ, ಸೂಚನೆ ಪಡೆದು, ಆ ಮೂಲಕ ಪ್ರವಾಸಿ ಕ್ಷೇತ್ರಗಳ ಅಭಿವೃದ್ಧಿಯೊಂದಿಗೆ ಅಲ್ಲಿನ ಪರಿಸ್ಥಿತಿಗಳನ್ನು ಸುಧಾರಿಸಲು ಮುಂದಾಗಬೇಕು ಎಂದರು.

ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿರುವ ಪ್ರವಾಸಿ ತಾಣ ಹಾಗೂ ಪ್ರವಾಸೋದ್ಯಮವನ್ನು ದೊಡ್ಡಮಟ್ಟದಲ್ಲಿ ಪ್ರಚಾರ ಮಾಡಲು ಕ್ರಮ ಕೈಗೊಳ್ಳಬೇಕು. ಪ್ರವಾಸೋದ್ಯಮ ಇಲಾಖೆಯ ವೆಬ್‌ಸೈಟ್ ರಚಿಸಿ, ಅದರಲ್ಲಿ ಜಿಲ್ಲೆಯ ಪ್ರವಾಸೋದ್ಯಮ ಕುರಿತಂತೆ ಪ್ರವಾಸಿಗರು ಹಾಗೂ ಸಾರ್ವಜನಿಕರಿಗೆ ಎಲ್ಲಾ ಮಾಹಿತಿ ಒದಗಿಸಬೇಕು. ಜಿಲ್ಲೆಯಲ್ಲಿ ಹೊಸದಾಗಿ ಹೋಟೆಲ್, ರೆಸ್ಟೋರೆಂಟ್ ಹಾಗೂ ಇನ್ನಿತರ ಸಂಸ್ಥೆಗಳನ್ನು ಸ್ಥಾಪಿಸಲು ಗ್ರಾ.ಪಂ ಅಥವಾ ಪಾಲಿಕೆ ಸೇರಿದಂತೆ ಆಯಾ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳಿಂದ ಅನುಮತಿ ನೀಡುವ ಮುನ್ನ ನಿಧಿ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವಂತೆ ಸೂಚಿಸಬೇಕು. ಇದರಿಂದ ಹೆಚ್ಚಿನ ಜನರಿಗೆ ನಿಧಿ ಪೋರ್ಟಲ್ ಬಗ್ಗೆ ಅದರ ಸೌಲಭ್ಯದ ಬಗ್ಗೆ ತಿಳಿಯುತ್ತದೆ ಎಂದು ತಿಳಿಸಿದರು.

ಈಗಾಗಲೇ ಗುರುತಿಸಿರುವ ಪ್ರವಾಸಿ ತಾಣಗಳಲ್ಲಿನ ಕುಂದು ಕೊರತೆಯನ್ನು ಗಮನಿಸಿ ಅದರ ಅಭಿವೃದ್ಧಿಗೆ ಬೇಕಾದ ಕಾಮಗಾರಿ ಆರಂಭಿಸಬೇಕು. ಇದಕ್ಕೆ ಜಿಲ್ಲಾಧಿಕಾರಿಗಳ ಅನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕು. ಯಾವುದಾದರೂ ಹೊಸದಾದ ಪ್ರವಾಸಿ ತಾಣಗಳಿದ್ದರೆ ದರ ಬಗ್ಗೆ ಸಾರ್ವಜನಿಕರಿಂದ ಮಾಹಿತಿ ಪಡೆಯಬೇಕು. ಪ್ರವಾಸಿಗರನ್ನು ಸೆಳೆಯಲು ಸಾಮಾಜಿಕ ಜಾಲತಾಣಗಳಲ್ಲಿ ಸಣ್ಣ ಸಣ್ಣ ವಿಡಿಯೋ ತುಣುಕುಗಳ ಮೂಲಕ ಪ್ರಚಾರ ಮಾಡಬೇಕು. ಅದಕ್ಕೆ ಪ್ರಸಿದ್ಧ ಬ್ಲಾಗರ್ಸ್, ಛಾಯಾಚಿತ್ರಾರರಿಗೆ ಮೈಸೂರು ಪ್ರವಾಸಿ ತಾಣಗಳ ಬಗ್ಗೆ ಸ್ಪರ್ಧೆಯನ್ನು ಏರ್ಪಡಿಸಿ, ನಗದು ಬಹುಮಾನ ನೀಡಬೇಕು. ಇದರಿಂದ ಬಂದ ಉತ್ತಮ ವಿಡಿಯೋ ಮತ್ತು ಫೋಟೋವನ್ನು ಆಯ್ದುಕೊಂಡು ಕಾಫಿ ಟೇಬಲ್ ಬುಕ್ ಸಿದ್ಧಪಡಿಸುವಂತೆ ಸೂಚಿಸಿದರು.

ಸಭೆಯಲ್ಲಿ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಪಾಲಿಕೆ ಆಯುಕ್ತೆ ಡಾ.ಮಧು, ಎಸ್ಪಿ ಸೀಮಾ ಲಾಟ್ಕರ್, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಸವಿತಾ, ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಎಸಿಎಫ್ ಲಕ್ಷ್ಮೀಕಾಂತ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಲಿಂಗರಾಜು, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಸೇರಿದಂತೆ ವಿವಿಧ ಸಂಸ್ಥೆಯ ಮುಖ್ಯಸ್ಥರು ಪಾಲ್ಗೊಂಡಿದ್ದರು.

> “ಪ್ರವಾಸೋದ್ಯಮ ಇಲಾಖೆ ಮೂಲಕ ಬರುವ ಪ್ರವಾಸಿಗರಿಗೆ ವಿವಿಧ ರೀತಿಯ ಪ್ಯಾಕೇಜ್‌ಗಳನ್ನು ನೀಡಿ ಅವರನ್ನು ಸೆಳೆಯಬೇಕು. ಬ್ರಾಂಡ್ ಮೈಸೂರು ಲೋಗೋವನ್ನು ಜಿಲ್ಲೆಯಾದ್ಯಂತ ಪ್ರಮುಖ ಸ್ಥಳಗಳಲ್ಲಿ ಭಿತ್ತರಿಸಿ ಪ್ರಚಾರ ಮಾಡಬೇಕು. ಇದರಿಂದ ಮುಂಬರುವ ದಿನಗಳಲ್ಲಿ ಮೈಸೂರು ಜಿಲ್ಲೆಯಲ್ಲಿನ ಪ್ರವಾಸಿ ಕ್ಷೇತ್ರಗಳಿಗೆ ಹೆಚ್ಚಿನ ಸಂಖ್ಯೆ ಪ್ರವಾಸಿಗರು ಆಗಮಿಸುವುದರಿಂದ ಸ್ಥಳೀಯ ಪ್ರವಾಸೋದ್ಯಮ ಇನ್ನಷ್ಟು ಗರಿಗೆದರಲಿದೆ. –ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

## ನಂಜನಗೂಡಿನ ವ್ಯಕ್ತಿ ನಾಪತ್ತೆ




ಮೈಸೂರು, ಮಾ. 6– ನಂಜನಗೂಡು ತಾಲೂಕಿನ ಕರುಣಾಲಯ ಮಾನಸಿಕ ಅಸ್ವಸ್ಥರ ನಿರಾಶ್ರಿತ ಕೇಂದ್ರದಲ್ಲಿದ್ದ ಮಾನಸಿಕ ಅಸ್ವಸ್ಥ ರಾಜು (37) ಫೆ. 10 ರಂದು ಬೆಳಗ್ಗೆ 6.15 ಗಂಟೆಯಿಂದ ಕಾಣೆಯಾಗಿದ್ದಾರೆ ಎಂದು ಕರುಣಾಲಯ ಆಸ್ಪತ್ರೆಯ ಸಿಸ್ಟರ್ ಸುಸ್ಸೈಮೇರಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ನಂಜನಗೂಡು ಗ್ರಾಮಾಂತರ ಠಾಣೆಗೆ ಸಂಪರ್ಕಿಸಬೇಕಾಗಿ ಕೋರಲಾಗಿದೆ.

## ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ವಿದ್ಯಾರ್ಥಿವೇತನ ವಿತರಣೆ




ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮಾನಸಗಂಗೋತ್ರಿಯ ಪ್ರೊ.ಕೆ.ಎಸ್.ರಂಗಪ್ಪ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಯ ಸರ್ಕಾರಿ ಶಾಲೆ ಕಾಲೇಜುಗಳಲ್ಲಿ ಅಧ್ಯಯನ ಮಾಡುವ ಸುಮಾರು 294 ವಿದ್ಯಾರ್ಥಿಗಳಿಗೆ ಶಾಸಕ ಕೆ.ಹರೀಶ್‌ಗೌಡ ವಿದ್ಯಾರ್ಥಿವೇತನ ವಿತರಿಸಿದರು. ಈ ವೇಳೆ ಶಾಸಕ ಡಿ. ರವಿಶಂಕರ್, ಬಿ.ಎಡ್ ಕಾಲೇಜು ನಿರ್ದೇಶಕರಾದ ಶ್ರೀಮತಿ ಗೀತಾಂಬ, ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ದಕ್ಷಿಣ ವಲಯ ಹೆಡ್ ಶರಫುದ್ದೀನ್ ಮತ್ತಿತರರು ಉಪಸ್ಥಿತರಿದ್ದರು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**7.3.2024 ಗುರುವಾರ, ಮಳೆ ನಕ್ಷತ್ರ: ಪೂರ್ವಭಾದ್ರ 4.03.2024ರಿಂದ 16.03.2024**
**ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ**

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ಯುಜಿಸಿ–ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ :** ಒಂದು ದಿನದ ಪ್ರಾಂಶುಪಾಲರುಗಳ ಸಭೆ, ಉದ್ಘಾಟನೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರಾಸ್ತಾವಿಕ ನುಡಿ : ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ. ಡಿ. ಆನಂದ್, ಅಧ್ಯಕ್ಷತೆ : ಯುಜಿಸಿ–ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ನಿರ್ದೇಶಕ ಪ್ರೊ. ಎಸ್.ಎಸ್. ಮಾಲಿನಿ, ಸ್ಥಳ: ಸೆಮಿನಾರ್ ಹಾಲ್, ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಷನ್ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ : ಇಎಂಎಂಆರ್‌ಸಿ ನಿರ್ದೇಶಕರಾದ ಪ್ರೊ. ಸ್ವಪ್ನಾ, ಮುಖ್ಯ ಅತಿಥಿಗಳು : ಸಹಾಯಕ ಪ್ರಾಧ್ಯಾಪಕ ಡಾ. ಪೂರ್ಣಿಮಾ ಉಮೇಶ್, ದೈಹಿಕ ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಡಾ. ರಮಣಿ, ಫೌಂಡೇಷನ್‌ನ ಎನ್.ಟಿ. ವೆಂಕಟೇಶ್, ಸ್ಥಳ: ಪುರಭವನ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಸ್ಕೂಲ್ ಆಫ್ ಲೈಫ್ ಸೈನ್ಸಸ್, ಲೈಫ್ ಸೈನ್ಸಸ್ ಡಿಪಾರ್ಟ್‌ಮೆಂಟ್ಸ್ :** ರಾಷ್ಟ್ರೀಯ ವಿಜ್ಞಾನ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಗ್ರಾಸ್ ರೂಟ್ಸ್ ರಿಸರ್ಚ್ ಅಂಡ್ ಅಡ್ವೋಕಸಿ ಮೂವ್‌ಮೆಂಟ್ (ಗ್ರಾಮ್) ಅಧ್ಯಕ್ಷ ಡಾ. ರಾಮಸ್ವಾಮಿ ಬಾಲಸುಬ್ರಮಣಿಯಮ್ (ಬಾಲು), ಗೌರವ ಅತಿಥಿಗಳು : ಕುಲಪತಿ ಡಾ. ಸುರೀಂದರ್ ಸಿಂಗ್, ಕುಲಸಚಿವ ಡಾ. ಬಿ. ಮಂಜುನಾಥ್, ಅಧ್ಯಕ್ಷತೆ : ಸಮ ಕುಲಾಧಿಪತಿ ಡಾ. ಬಿ. ಸುರೇಶ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಫಾರ್ಮಸಿ ಕಾಲೇಜು, ಬೆಳಗ್ಗೆ 11ಕ್ಕೆ

■ **ಬಾಸುದೇವ ಸೋಮಾನಿ ಕಾಲೇಜು :** ಡಾ. ಟಿ. ರಮೇಶ್ ಸಂಪಾದಕತ್ವದ ಸಬಲೀಕರಣ : ಸಮಾಜಮುಖಿ ಚಿಂತನೆಗಳು ಕೃತಿ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಗೌರವ ಅತಿಥಿಗಳು : ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ. ವೆಂಕಟೇಶ್, ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಪುಸ್ತಕ ಕುರಿತು ಮಾತನಾಡುವವರು : ಪ್ರಾಧ್ಯಾಪಕರಾದ ಡಾ. ಆರ್.ಎಸ್. ಅಶ್ವಿನಿ, ಮುಖ್ಯ ಅತಿಥಿಗಳು : ಕುಬೇರ್ ಪಿ. ಗೌಡ, ಪಿ. ಗೀತಾಂಜಲಿ, ಶ್ರೀಮತಿ ಎಸ್. ಪ್ರಭಾ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಕುವೆಂಪುನಗರ, ಬೆಳಗ್ಗೆ 11.30ಕ್ಕೆ.

■ **ಕರ್ನಾಟಕ ಸೇನಾ ಪಡೆ:** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಾರಾಣಿ ಕೆಂಪನಂಜಮ್ಮಣ್ಣಿ ವಾಣಿವಿಲಾಸ ಸನ್ನಿಧಾನ ಅಮ್ಮನವರ ದಿನಾಚರಣೆ, ಸಾನ್ನಿಧ್ಯ: ಪ್ರೊ.ಭಾಷ್ಯಂ ಸ್ವಾಮೀಜಿ, ಉಪಸ್ಥಿತರು: ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಮುಖ್ಯ ಅತಿಥಿಗಳು: ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಅನ್ವೇಷಣಾ ಸೇವಾ ಟ್ರಸ್ಟ್ ಅಧ್ಯಕ್ಷ ಅಮರನಾಥರಾಜೇ ಅರಸ್, ಎಂ.ಪ್ರದೀಪ್ ಕುಮಾರ್, ಡಾ.ಅಜಯ್‌ಕುಮಾರ್ ಜೈನ್, ಸುರೇಶ್ ಗೋಲ್ಡ್, ಸ್ಥಳ: ಅಗ್ರಹಾರ ವೃತ್ತ, ಬೆಳಗ್ಗೆ 11.30ಕ್ಕೆ.

■ **ಜನನಿ ಸೇವಾ ಟ್ರಸ್ಟ್:** ಮಹಿಳೆ–ಕಹಳೆ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ದಿವಂಗತ ಶ್ರೀಮತಿ ಕೆ.ಕಮಲಮ್ಮನವರ 14ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರಿಗೆ ಗೌರವ ಸಮರ್ಪಣಾ ಸಮಾರಂಭ, ಉಪಸ್ಥಿತರು: ಕಾರ್ಮಿಕ ಇಲಾಖೆ ಸಹಾಯಕ ಆಯುಕ್ತೆ ನಾಜಿಯಾ ಸುಲ್ತಾನ, ನಿವೃತ್ತ ಮುಖ್ಯೋಪಾಧ್ಯಾಯಿನಿ ಮಂಗಳ ಮುದ್ದುಮಾದಪ್ಪ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಜನನಿ ಸೇವಾ ಟ್ರಸ್ಟ್ ಗೌರವಾಧ್ಯಕ್ಷೆ ಎಸ್.ನಾಗರತ್ನ ಸೋಮಶೇಖರ್, ಅಧ್ಯಕ್ಷತೆ: ಜನನಿ ಸೇವಾ ಟ್ರಸ್ಟ್ ಅಧ್ಯಕ್ಷ ಎಂ.ಕೆ.ಅಶೋಕ, ಸ್ಥಳ: ಪತ್ರಕರ್ತರ ಭವನ, ಮ. 12ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಸಂಜೆ 6ಕ್ಕೆ

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** 88ನೇ ತ್ರಿಮೂರ್ತಿ ಶಿವಜಯಂತಿ ಮಹೋತ್ಸವ, ಹಾಸ್ಯ ಸಂಜೆ ಕಾರ್ಯಕ್ರಮ, ಅತಿಥಿಗಳು: ಹಾಸ್ಯ ರತ್ನ ಬೆಮೆಲ್ ಕಂಪಲಪ್ಪ, ಈವಿವಿ ಸರ್ದಾರ್ ವಲ್ಲಭಬಾಯ್ ಪಟೇಲ್ ನಗರ ಕೇಂದ್ರದ ಸಂಚಾಲಕರಾದ ಬಿ.ಕೆ.ರಶ್ಮಿ ಅವರಿಂದ ಅಂತರಾಳದ ಅಷ್ಟಶಕ್ತಿಗಳು ಕುರಿತು ಪ್ರವಚನ, ಜಗದೀಶ್ ಮತ್ತು ತಂಡದಿಂದ ಜನಪದ ನೃತ್ಯ ಮತ್ತು ಸಂಗೀತ, ಸ್ಥಳ: ಓಂ ಶಾಂತಿ ಮಂಟಪ, ಕಾಳಿದಾಸ ರಸ್ತೆ, ಚಂದ್ರಕಲಾ ಆಸ್ಪತ್ರೆ ಬಳಿ, ಸಂಜೆ 6 ರಿಂದ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್.ರವಿಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಬಿ.ವಿ.ವಸಂತಕುಮಾರ್, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, 10.00 ಡಾ.ಮೈಸೂರು ಎಂ.ಮಂಜುನಾಥ್–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ವಾಣಿ ಜಯರಾಂ, ಬಾಂಬೆ ಸಹೋದರಿಯರು, 1.20 ಭಾವಗೀತೆ –ಶಾಂತಲಾ ವಟ್ಟಂ, 4.30 ಸಂಧ್ಯಾರಾಗ–ಗಾಂಧೀವಾದಿ ಟಿ.ಜಿ. ಸತ್ಯನಾರಾಯಣ ತಗಡೂರು ಮತ್ತು ಶಶಿರೇಖ ನಾರಾಯಣ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಅಬ್ದುಲ್ ರಶೀದ್, 6.50 ಕೃಷಿರಂಗ–ಕೃಷಿ ಪ್ರವಾಸೋದ್ಯಮ ಇಲಾಖೆಯ ಯೋಜನೆಗಳು ಕುರಿತು ಮಾತನಾಡುತ್ತಾರೆ ಎಂ.ಕೆ.ಸವಿತಾ, 8.00 ಯುವವಾಣಿ–ಯುವಪ್ರತಿಭೆ, ಷಾರ್ಟ್ ಫಿಲಂ ಫೆಸ್ಟಿವಲ್‌ನಲ್ಲಿ ಪ್ರಶಸ್ತಿ ಗಳಿಸಿದ ರಾಕೇಶ್ ಆರ್. ಭಟ್ ಅವರೊಂದಿಗೆ ಸಂದರ್ಶನ, 10.00 ನಾಟಕ 'ಸಹದೇವನ ಗುಟ್ಟು' ರಚನೆ ಮತು ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು

### ಬಹುರೂಪಿ ನಾಟಕೋತ್ಸವದಲ್ಲಿಂದು



**ರಂಗಾಯಣ:** ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಖ್ಯಾತ ಸಾಹಿತಿ ಜಯಂತ್ ಕಾಯ್ಕಿಣಿ, ಪುಸ್ತಕ ಮತ್ತು ಕರಕುಶಲ ಮಳಿಗೆ ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಬಹುರೂಪಿ ರಂಗ ಸಂಚಿಕೆ ಬಿಡುಗಡೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ, ಚಿತ್ರಕಲಾ ಪ್ರದರ್ಶನ ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ವಚನಾಂತರಂಗ ಅನಾವರಣ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎಂ.ಎಸ್.ಅಜಯ್ ನಾಗಭೂಷಣ್, ಚಾರಿತ್ರಿಕ ದಾಖಲೆಗಳ ಪ್ರದರ್ಶನದ ಉದ್ಘಾಟನೆ : ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮುಖ್ಯ ಅತಿಥಿಗಳು: ಕನ್ನಡ–ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಕೆ.ಧರಣಿದೇವಿ ಮಾಲಗತ್ತಿ, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸ್ಥಳ: ವನರಂಗ, ಸಂಜೆ 4.30ಕ್ಕೆ

**ಕಿಂದರಿಜೋಗಿ (ಸಂಜೆ 5.30ಕ್ಕೆ)**

ದಂಗರಿ ಗಜ : ಸೈಯಪ್ಪ ಬಂದ್‌ಗಾರ್ ಮತ್ತು ತಂಡ, ಮಹಾರಾಷ್ಟ್ರ
ಗುಡುಮ್ ಬಜ : ಮಯಾರಾಮ್ ದುರ್ವೆ ಮತ್ತು ತಂಡ, ಮಧ್ಯ ಪ್ರದೇಶ
ಚಂಡೆ ವಚನ : ಗುರು ಮತ್ತು ತಂಡ, ಮೈಸೂರು.
ಕಂಸಾಳೆ : ನಾಗರಾಜು ಮತ್ತು ತಂಡ, ಮಂಗಲ ಗ್ರಾಮ, ಚಾಮರಾಜನಗರ
ನಾದಸ್ವರ : ರಾಧಮ್ಮ ಮತ್ತು ತಂಡ, ವಗರಹಳ್ಳಿ, ಚನ್ನರಾಯಪಟ್ಟಣ
ಗಾರುಡಿ ಗೊಂಬೆ : ಜಯರಾಮ್ ಮತ್ತು ತಂಡ, ಬೋರನಕೊಪ್ಪಲು, ಅರಸೀಕೆರೆ

**ಕಿರು ರಂಗಮಂದಿರ (ಸಂಜೆ 6ಕ್ಕೆ)**

ಲೋಕದ ಒಳಹೊರಗೆ (ಕನ್ನಡ), ರಚನೆ : ರವೀಂದ್ರನಾಥ್ ಟಾಗೋರ್, ನಿರ್ದೇಶನ : ಬಿ. ಸುರೇಶ್, ತಂಡ : ರಂಗಸಂಪದ, ಬೆಂಗಳೂರು.

**ಭೂಮಿಗೀತ (ಸಂಜೆ 6.30ಕ್ಕೆ)**

ಮುಟ್ಟಿಸಿಕೊಂಡವನು (ಕನ್ನಡ), ರಚನೆ : ಪಿ. ಲಂಕೇಶ್, ರಂಗರೂಪ, ನಿರ್ದೇಶನ : ಕೆ.ಆರ್. ನಂದಿನಿ, ತಂಡ : ರಂಗಾಯಣ, ಮೈಸೂರು.

**ಕಲಾಮಂದಿರ (ಸಂಜೆ 7.30ಕ್ಕೆ)**

ಶಿಶುನಾಳ ಶರೀಫ (ಕನ್ನಡ), ನಿರ್ದೇಶನ : ಚಿಂದೋಡಿ ಎಲ್. ಚಂದ್ರಧರ
ತಂಡ : ಪದ್ಮಶ್ರೀ ಚಿಂದೋಡಿ ಲೀಲಾರವರ ಕೆ.ಬಿ.ಆರ್. ಡ್ರಾಮಾ ಕಂಪನಿ, ದಾವಣಗೆರೆ

**ಬಹುರೂಪಿ ಚಲನಚಿತ್ರೋತ್ಸವ**

ಆಶಯ ನುಡಿ: ಬಹುರೂಪಿ ಚಲನಚಿತ್ರೋತ್ಸವದ ಸಂಯೋಜಕ ಕೆ.ಮನು, ಚಾಲನೆ: ಅಂತಾರಾಷ್ಟ್ರೀಯ ವನ್ಯಜೀವಿ ಛಾಯಾಗ್ರಾಹಕ ಡಾ.ಲೋಕೇಶ್ ಮೊಸಳೆ, ಸ್ಥಳ: ಶ್ರೀರಂಗ, ಬೆಳಗ್ಗೆ 10.30ಕ್ಕೆ.

**ಶ್ರೀರಂಗ (10.30 ರಿಂದ ಮ. 12)**

ಆದ್ಯ ವಚನಕಾರರು (ಕನ್ನಡ), ಬಸವಣ್ಣ (ಕನ್ನಡ), ನಿರ್ದೇಶನ: ವೀರಪ್ಪ ಮರಳವಾಡಿ

**ಮ. 12ರಿಂದ ಮ. 1.30**

ಜೊನಾಥನ್ ಲಿವಿಂಗ್‌ಸ್ಟನ್ ಸೀಗಲ್ (ಇಂಗ್ಲೀಷ್), ನಿರ್ದೇಶನ: ಹಾಲ್ ಬಾರ್ಟ್‌ಲೆಟ್


**ಮ. 2ರಿಂದ ಸಂಜೆ 4.30ರವರೆಗೆ**

ಇನ್ ಟು ದಿ ವೈಟ್ (ಇಂಗ್ಲೀಷ್), ನಿರ್ದೇಶನ : ಪೀಟರ್ ನೇಸ್

### ಬರಗಾಲ, ಬೇಸಿಗೆಯ ಬೇಗೆ ಹಿನ್ನೆಲೆ: ಕುಡಿಯುವ ನೀರಿನ ಹಾಹಾಕಾರ ತಪ್ಪಿಸಲು

# ಮೈಸೂರು ಜಿಲ್ಲಾಡಳಿತ, ನಗರಪಾಲಿಕೆ ಸನ್ನದ್ಧ

## ಮೇ ಅಂತ್ಯದವರೆಗಂತೂ ಮೈಸೂರಲ್ಲಿ ಕುಡಿಯುವ ನೀರಿಗೆ ತೊಂದರೆ ಇಲ್ಲ



ಮೈಸೂರು, ಮಾ.6(ಆರ್‌ಕೆ)– ಬೇಸಿಗೆ ಸಂದರ್ಭ ಎದುರಾಗಬಹುದಾದ ಕುಡಿಯುವ ನೀರಿನ ಸಮಸ್ಯೆ ನಿಭಾಯಿಸಲು ಮೈಸೂರು ಮಹಾನಗರ ಪಾಲಿಕೆ ಮತ್ತು ಜಿಲ್ಲಾಡಳಿತ ಯೋಜನೆ ರೂಪಿಸಿವೆ.

ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೀಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಪಾಲಿಕೆ ಆಯುಕ್ತರೊಂದಿಗೆ ಸಭೆ ನಡೆಸಿದ್ದು, ಕುಡಿಯುವ ನೀರು ಕೊರತೆ, ಬರ ಪರಿಸ್ಥಿತಿ ನಿಭಾಯಿಸಲು ಪೂರ್ವ ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಿದ್ದರು.

ಆದರೆ ಮೈಸೂರು ಮಹಾನಗರ ಪಾಲಿಕೆ ಮತ್ತು ಜಿಲ್ಲಾಡಳಿತವು ಈಗಾಗಲೇ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಸಂಭವಿಸಬಹುದಾದ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಪೂರ್ವ ತಯಾರಿ ನಡೆಸಿ, ಕಾರ್ಯಗತಗೊಳಿಸಲು ಮುಂದಾಗಿವೆ. ಅದಕ್ಕಾಗಿ ಒಂದು ಯೋಜನೆ ತಯಾರಿಸಿ ನೀರಿನ ಕೊರತೆ ಉಂಟಾಗಬಹುದಾದ ಸ್ಥಳ ಹಾಗೂ ಗ್ರಾಮಗಳನ್ನು ಗುರುತಿಸಲಾಗಿದೆ.

ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿದಿದೆಯಾದರೂ ಕಾವೇರಿ ಮತ್ತು ಕಪಿಲಾ ನದಿ ಮೂಲಗಳಿಂದ ಮೈಸೂರು ನಗರಕ್ಕೆ ಪಂಪಿಂಗ್ ಸ್ಟೇಷನ್‌ಗಳ ಮೂಲಕ ಸದ್ಯ ಯಥಾ ಪ್ರಕಾರ ನೀರು ಸರಬರಾಜಾಗುತ್ತಿದೆ. ಮೇ ಅಂತ್ಯದವರೆಗೂ ಯಾವುದೇ ತೊಂದರೆಯಾಗುವುದಿಲ್ಲ ಎಂದು ಮೈಸೂರು ಮಹಾನಗರ ಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಶ್ವಿನ್‌ಕುಮಾರ್ ತಿಳಿಸಿದ್ದಾರೆ.

ಕೆಆರ್‌ಎಸ್ ಜಲಾಶಯದಲ್ಲಿ ಇಂದು ಬೆಳಗ್ಗೆ 89.64 ಅಡಿ ನೀರಿನ ಮಟ್ಟ ದಾಖಲಾಗಿತ್ತು. ಕಬಿನಿ ಜಲಾಶಯದ ನೀರಿನ ಮಟ್ಟ 2,269.34 ಅಡಿ ಇದ್ದು, 11.36 ಟಿಎಂಸಿ ನೀರು ಸಂಗ್ರಹವಿದೆ. ಬಿಸಿಲಿನ ತೀವ್ರತೆ ಇದೇ ರೀತಿ ಮುಂದುವರೆದರೆ ಈ ಎರಡೂ ಜಲಾಶಯಗಳ ನೀರಿನ ಮಟ್ಟ ಗಣನೀಯವಾಗಿ ಕುಸಿಯಲಿದ್ದು, ನದಿ ಮೂಲಗಳಿಂದ ಮೈಸೂರಿಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.


ಈ ಹಿನ್ನೆಲೆಯಲ್ಲಿ ಸ್ಥಗಿತಗೊಂಡಿರುವ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಲಾಗುತ್ತಿದೆ. ಕೆಲವು ಬೋರ್‌ವೆಲ್‌ಗಳನ್ನು ರೀ ಡ್ರಿಲ್ ಮಾಡಿಸಲಾಗುತ್ತಿದೆ. ಅಗತ್ಯ ಬಿದ್ದಲ್ಲಿ ನೀರು ಬರುವ ಸ್ಥಳ ಗುರುತಿಸಿ ಹೊಸದಾಗಿ ಕೊಳವೆ ಬಾವಿ ಕೊರೆಯಲು ಮುಂದಾಗಿದ್ದೇವೆ ಎಂದು ಅಶ್ವಿನ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಬೇಸಿಗೆ ವೇಳೆ ನೀರಿನ ಕೊರತೆ ನೀಗಿಸಲು ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲು ನಿರ್ಧರಿಸಿದ್ದೇವೆ. ಅಲ್ಲದೇ ಟ್ಯಾಂಕರ್ ಮೂಲಕವೂ ಅಗತ್ಯ ಸ್ಥಳಗಳಿಗೆ ಕುಡಿಯುವ ನೀರು ಪೂರೈಸಲು ಸಿದ್ಧತೆ ಮಾಡುತ್ತಿದ್ದೇವೆ.

ಅದೇ ರೀತಿ ಜಿಲ್ಲೆಯ ಗ್ರಾಮಾಂತರ ಪ್ರದೇಶದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ನಿಭಾಯಿಸಲು ಆಯಾ ತಾಲೂಕುಗಳಲ್ಲಿ ಶಾಸಕರ ನೇತೃತ್ವದ ಟಾಸ್ಕ್ ಫೋರ್ಸ್ ರಚಿಸಲಾಗಿದ್ದು, ತಹಸೀಲ್ದಾರ್, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಮಿತಿಯಲ್ಲಿದ್ದು ವಾರಕ್ಕೊಮ್ಮೆ ನೀರಿನ ಸಮಸ್ಯೆ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವರು. ತೀರಾ ಅನಿವಾರ್ಯವೆನಿಸಿದರೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸುವಂತೆ ಸೂಚಿಸಲಾಗಿದೆ ಎಂದು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯಿತ್ರಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರು ತಾಲೂಕು, ನಾಗನಹಳ್ಳಿಯ ಆರ್ಗ್ಯಾನಿಕ್ ಫಾರ್ಮಿಂಗ್ ರಿಸರ್ಚ್ ಸ್ಟೇಷನ್ ಇಂಡಿಯನ್ ಮೆಟ್ರಲಾಜಿಕಲ್ ಇಲಾಖೆಯ ಆಗ್ರೋಮೆಟ್ರಲಾಜಿಕಲ್ ಘಟಕದ ಪ್ರಕಾರ ಜಿಲ್ಲೆಯಲ್ಲಿ ಮಾ.3ರಂದು 34.9 ಡಿಗ್ರಿ ಸೆಲ್ಸಿಯಸ್, ಮಾ.4ರಂದು 34.2 ಡಿಗ್ರಿ ಸೆಲ್ಸಿಯಸ್, ಮಾ.5ರಂದು 34.9 ಡಿಗ್ರಿ ಸೆಲ್ಸಿಯಸ್ ತಾಪಮಾನವಿತ್ತು. ಇಂದು ತಾಪಮಾನ ತೀವ್ರತೆ ಸ್ವಲ್ಪ ಹೆಚ್ಚಾಗಿದ್ದು, 35 ಡಿಗ್ರಿ ಸೆಲ್ಸಿಯಸ್ ತಲುಪಿದೆ.

## ಮೈಸೂರಲ್ಲಿ ನೀರು ಪೂರೈಕೆಗೆ ಅಗತ್ಯ ಬಿದ್ದರೆ ಅಧಿಕ ಟ್ಯಾಂಕರ್‌ಗಳ ಬಳಕೆ



ಮೈಸೂರು,ಮಾ.6(ಆರ್‌ಕೆ)– ಬರಗಾಲ ಜೊತೆಗೆ ಬೇಸಿಗೆ ಬಿಸಿಲಿನ ತೀವ್ರತೆ ಹೆಚ್ಚಾಗಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾದಲ್ಲಿ ಅಗತ್ಯ ಬಿದ್ದರೆ ಮೈಸೂರು ನಗರದ 65 ವಾರ್ಡ್‌ಗಳಿಗೆ ನೀರು ಪೂರೈಸಲು ಅಧಿಕ ಟ್ಯಾಂಕರ್‌ಗಳ ಬಳಸಿಕೊಳ್ಳುವುದಾಗಿ ತಿಳಿಸಿರುವ ಮೈಸೂರು ಮಹಾನಗರ ಪಾಲಿಕೆಯ ವಾಣಿವಿಲಾಸ ವಾಟರ್ ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಶ್ವಿನ್ ಕುಮಾರ್, ಕನಿಷ್ಠ 40 ಟ್ಯಾಂಕರ್‌ಗಳ ಅಗತ್ಯವಿದೆ ಎಂದು ತಿಳಿಸಿದ್ದಾರೆ.

ಕೊಳವೆ ಮಾರ್ಗದಲ್ಲಿ ನೀರು ತಲುಪದ ಎತ್ತರದ ಪ್ರದೇಶಗಳಿಗೆ ಟ್ಯಾಂಕರ್ ಮೂಲಕವೇ ನೀರು ಸರಬರಾಜು ಮಾಡಬೇಕಾಗುತ್ತದೆ. ಅದಕ್ಕಾಗಿ ಈಗ ಇರುವ 9 ಟ್ಯಾಂಕರ್‌ಗಳ ಜೊತೆಗೆ ಇನ್ನೂ 40 ಟ್ಯಾಂಕರ್‌ಗಳು ಬೇಕಾಗುತ್ತವೆ. ಪರಿಸ್ಥಿತಿ ಆಧರಿಸಿ ಈ ಬಗ್ಗೆ ಕ್ರಮ ವಹಿಸಲಾಗುವುದು. ಮೈಸೂರಿನಲ್ಲಿ 850 ಬೋರ್‌ವೆಲ್‌ಗಳಿವೆ. ಸ್ಥಗಿತಗೊಂಡಿದ್ದ 25 ಬೋರ್‌ವೆಲ್‌ಗಳ ದುರಸ್ತಿಗೊಳಿಸಿದ್ದೇವೆ. ಇಷ್ಟಾದರೂ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದರೆ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲು ನಿರ್ಧರಿಸಿದ್ದೇವೆ. ಮೇ ತಿಂಗಳವರೆಗೆ ನಗರದಲ್ಲಿ ಕುಡಿಯುವ ನೀರಿಗೆ ಕೊರತೆ ಉಂಟಾಗದು. ಜೂನ್ ಮೊದಲ ವಾರ ಮಳೆ ಆರಂಭವಾದರೆ ಮುಂದೆ ಈ ಸಮಸ್ಯೆ ನಿಭಾಯಿಸುವುದು ಸುಲಭವಾಗುತ್ತದೆ ಎಂದರು.

# ಕರ್ನಾಟಕದಲ್ಲಿ ತಾಲಿಬಾನ್ ಸಂಸ್ಕೃತಿ ಕಾಣುತ್ತಿದೆ

### ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಆರೋಪ



ಮೈಸೂರಿನ ಒಂಟಿಕೊಪ್ಪಲಿನ ಆಂಜನೇಯಸ್ವಾಮಿ ದೇವಸ್ಥಾನದ ಪಕ್ಕದ ಕಲ್ಯಾಣ ಮಂಟಪದಲ್ಲಿ ಬುಧವಾರ ನಾರಿ ಶಕ್ತಿ ವಂದನೆ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಷಣದ ನೇರ ಪ್ರಸಾರ ಕಾರ್ಯಕ್ರಮವನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಉದ್ಘಾಟಿಸಿದರು. ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಸೇರಿದಂತೆ ಇತರರನ್ನು ಕಾಣಬಹುದು.

ಮೈಸೂರು, ಮಾ.6(ಬಿಎಲ್‌ಯು)– ಬೆಂಗಳೂರಿನ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣ, ವಿಧಾನಸೌಧದಲ್ಲಿ ಪಾಕ್ ಪರ ಘೋಷಣೆ ಸೇರಿದಂತೆ ಹಲವು ಪ್ರಕರಣಗಳಿಂದ ಕರ್ನಾಟಕದಲ್ಲಿ ತಾಲಿಬಾನ್ ಸಂಸ್ಕೃತಿ ಇರುವುದನ್ನು ಕಾಣಬಹುದು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಆರೋಪಿಸಿದರು.

ಮೈಸೂರಿನ ಒಂಟಿಕೊಪ್ಪಲಿನ ಆಂಜನೇಯಸ್ವಾಮಿ ದೇವಸ್ಥಾನದ ಪಕ್ಕದ ಕಲ್ಯಾಣ ಮಂಟಪದಲ್ಲಿ ಇಂದು ನಾರಿ ಶಕ್ತಿ ವಂದನೆ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಭಾಷಣದ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಂದರ್ಭದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮಂಗಳೂರಿನಲ್ಲಿ ಯುವತಿಯರ ಮೇಲೆ ನಡೆದ ಆ್ಯಸಿಡ್ ದಾಳಿ ಪ್ರಕರಣ, ಬೆಳಗಾವಿಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಸೇರಿದಂತೆ ಹಲವು ಪ್ರಕರಣಗಳಲ್ಲಿ ರಾಜ್ಯ ಸರ್ಕಾರದ ವೈಫಲ್ಯ ಎದ್ದು ಕಾಣುತ್ತದೆ ಎಂದು ಆಪಾದಿಸಿದರು. ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್, ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಪಾಕಿಸ್ತಾನ ಪರ ಘೋಷಣೆ ಕೂಗಿರುವುದನ್ನು ಸಮರ್ಥಿಸಿಕೊಂಡರು. ತನಿಖೆ ನಂತರ ಸತ್ಯ ಬಯಲಾದ ಮೇಲೆ ಅವರ ಮುಖಗಳೆಲ್ಲಾ ಕೆಂಪಾಗಿ ಹೋಗಿವೆ ಎಂದು ಲೇವಡಿ ಮಾಡಿದರು. ಇದನ್ನೆಲ್ಲಾ ನೋಡಿದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವಿದೆಯೊ ಅಥವಾ ತಾಲಿಬಾನ್ ಸರ್ಕಾರವಿದೆಯೋ ಎಂಬ ಅನುಮಾನ ವ್ಯಕ್ತವಾಗಿದೆ ಎಂದರು. ಪ್ರಧಾನಿ ಮೋದಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ವಿರುದ್ಧವಾಗಿ ಮಾತನಾಡಿದರೆ, ಕಾಂಗ್ರೆಸ್ ಮುಖಂಡರು ಅದನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಇದರಿಂದ ಕರ್ನಾಟಕದಲ್ಲಿ ತಾಲಿಬಾನ್ ಸಂಸ್ಕೃತಿ ಕಾಣುತ್ತಿದ್ದೇವೆ ಎಂದು ಮಾಳವಿಕ ಅವಿನಾಶ್ ಆರೋಪಿಸಿದರು.

### ನಾರಿ ಶಕ್ತಿ ವಂದನೆ ಕಾರ್ಯಕ್ರಮ ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಷಣದ ನೇರ ಪ್ರಸಾರ

ಮೈಸೂರು, ಮಾ.6(ಬಿಎಲ್‌ಯು)– ಪ್ರಧಾನಮಂತ್ರಿ ನರೇಂದ್ರ ಮೋದಿ ನಾರಿ ಶಕ್ತಿ ವಂದನೆ ಕಾರ್ಯಕ್ರಮದಲ್ಲಿ ಮಾಡಿದ ಭಾಷಣದ ನೇರ ಪ್ರಸಾರವನ್ನು ಮೈಸೂರಿನ ಹಲವು ಸ್ಥಳಗಳಲ್ಲಿ ಎಲ್‌ಇಡಿ ಸ್ಕ್ರೀನ್‌ಗಳ ಮೂಲಕ ವ್ಯವಸ್ಥೆ ಮಾಡಲಾಗಿತ್ತು. ಮೈಸೂರಿನ ಒಂಟಿಕೊಪ್ಪಲಿನ ಆಂಜನೇಯಸ್ವಾಮಿ ದೇವಸ್ಥಾನ ಪಕ್ಕದ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ನೇರ ಪ್ರಸಾರ ಕಾರ್ಯಕ್ರಮವನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಉದ್ಘಾಟಿಸಿದರು.

ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ, ಮಾಜಿ ಅಧ್ಯಕ್ಷೆ ಹೇಮಾ ನಂದೀಶ್, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಬಿಜೆಪಿ ಮುಖಂಡ ದಿನೇಶ್‌ಗೌಡ ಸೇರಿದಂತೆ ಹಲವರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಮೈಸೂರಿನ ಕೃಷ್ಣಮೂರ್ತಿಪುರಂ ರಾಮಮಂದಿರದಲ್ಲಿ ಕೂಡ ನರೇಂದ್ರ ಮೋದಿ ಭಾಷಣದ ನೇರ ಪ್ರಸಾರ ಕಾರ್ಯಕ್ರಮ ಆಯೋಜಿಸಲಾಗಿತ್ತು. ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲರಾಜೇ ಅರಸ್ ಸೇರಿದಂತೆ ನೂರಾರು ಮಂದಿ ಪ್ರಧಾನಿ ಭಾಷಣ ವೀಕ್ಷಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಹೂಟಗಳ್ಳಿಯ ದರ್ಶಿನಿ ಫಂಕ್ಷನ್ ಹಾಲ್‌ನಲ್ಲಿ ಕೂಡ ನರೇಂದ್ರ ಮೋದಿ ಭಾಷಣದ ನೇರ ಪ್ರಸಾರ ಕಾರ್ಯಕ್ರಮ ಆಯೋಜಿಸಲಾಗಿತ್ತು.

## ಮಹಾಶಿವರಾತ್ರಿ ಪೂಜೆ

ಮೈಸೂರು, ಮಾ.6–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರಸ್ವಾಮಿ ದೇವಾಲಯದಲ್ಲಿ ಮಾ.7ರಿಂದ 10ರವರೆಗೆ ಮಹಾಶಿವರಾತ್ರಿ ಪೂಜೆ ನಡೆಯಲಿದೆ. ಮಾ.7ರಂದು ಮಹಾಗಣಪತಿ ಹೋಮ, ಮಾ.8ರಂದು ಮಹಾಶಿವರಾತ್ರಿ, ಶ್ರೀ ಅಮೃತೇಶ್ವರ ಸ್ವಾಮಿಗೆ ಪಂಚಾಮೃತ ಪುರಸ್ಸರ ರುದ್ರಾಭಿಷೇಕ 108 ಪಾರ್ಥಿವ ಲಿಂಗಪೂಜೆ, ಸಂಜೆ 6 ಗಂಟೆಗೆ ಪ್ರದೋಷ ಕಾಲದಲ್ಲಿ ಪಂಚಾಮೃತ ಪುರಸ್ಸರ ಮಹಾರುದ್ರಾಭಿಷೇಕ, ರಾತ್ರಿ 9ಕ್ಕೆ ರಾಶಿ ಪೂಜೆ, ಗಂಗೆ ಪೂಜೆ, ಮಹಾ ಕೈಲಾಶ ಶಿಖರ ದೀಪಾರಾಧನೆ ನಡೆಯಲಿದೆ. ಮಾ.9ರಂದು ರುದ್ರ ಹೋಮ ಹಾಗೂ ಶನೈಶ್ಚರ ಜಯಂತಿ, ಮಾ.10ರಂದು ಶಿವರಾತ್ರಿ ಅಮಾವಾಸ್ಯೆ ಪ್ರಯುಕ್ತ ಶನಿಶಾಂತಿ, ಗುರುಶಾಂತಿ, ರಾಹು ಶಾಂತಿ, ಕೇತು ಶಾಂತಿ, ಮೃತ್ಯುಂಜಯ ಹೋಮ ಮಾಂಗಲ್ಯ ಚಂಡಿಕಾ ಹೋಮ, ಸ್ವಯಂವರ ಪಾರ್ವತಿ ಹೋಮ, ದಕ್ಷಿಣಾ ಮೂರ್ತಿ ಹಾಗೂ ಧನ್ವಂತರಿ ಹೋಮ, ಸುಬ್ರಮಣ್ಯ ಕುಜ ಶಾಂತಿ ಹೋಮ, ನವಗ್ರಹ ಹೋಮ ನಡೆಯಲಿದೆ. ಮೊ.9535413361







### ತಮಿಳುನಾಡಿಗೆ ನೀರು ಹರಿಸಿದ್ದರಿಂದ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ

# ಖಾಲಿ ಕೊಡ ಪ್ರದರ್ಶಿಸಿ ವಾಟಾಳ್ ಪ್ರತಿಭಟನೆ



ಕುಡಿಯುವ ನೀರು ಪೂರೈಸುವಂತೆ ಕನ್ನಡ ಚಳುವಳಿಗಾರ ವಾಟಾಳ್ ನಾಗರಾಜ್ ಅವರು ಬೆಂಬಲಿಗರೊಂದಿಗೆ ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.6(ಎಂಟಿವೈ)– ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿದ ಅವೈಜ್ಞಾನಿಕ ಆದೇಶ ಪಾಲಿಸಿ ತಮಿಳುನಾಡಿಗೆ ಕಾವೇರಿ ನೀರು ಹರಿಸಿದ ಪರಿಣಾಮ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ ಎಂದು ಆರೋಪಿಸಿ ಕನ್ನಡ ಚಳುವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಖಾಲಿ ಕೊಡ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಹಾರ್ಡಿಂಜ್ ವೃತ್ತದ ಬಳಿ ಬುಧವಾರ ನೀರು ಕೊಡಿ ನೀರು ಕೊಡಿ ಎಂದು ಘೋಷಣೆ ಕೂಗುತ್ತಾ, ಖಾಲಿ ಕೊಡ ಪ್ರದರ್ಶಿಸಿ ಪ್ರತಿಭಟನೆ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ವಾಟಾಳ್ ನಾಗರಾಜ್ ಮಾತನಾಡಿ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಏಕಪಕ್ಷೀಯ ನಿರ್ಧಾರದಿಂದ ಕರ್ನಾಟಕದ ಜನತೆಗೆ ಅನ್ಯಾಯವಾಗಿದೆ. ತಮಿಳುನಾಡಿಗೆ ನೀರು ಬಿಟ್ಟ ಪರಿಣಾಮ ಜಲಾಶಯಗಳಲ್ಲಿ ನೀರಿನ ಕೊರತೆ ಉಂಟಾಗಿ, ಕೃಷಿ ಹಾಗೂ ಕುಡಿಯಲು ನೀರು ಪೂರೈಕೆ ಸಾಧ್ಯವಾಗದೆ ಅಪಾರ ನಷ್ಟವುಂಟಾಗಿದೆ. ಈ ಹಿನ್ನೆಲೆಯಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ನಿರ್ವಹಣಾ ಮಂಡಳಿ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು. ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಬೇಕಾದರೆ ಮೇಕೆದಾಟು ಯೋಜನೆ ಜಾರಿಗೊಳಿಸಬೇಕು. ಈ ಯೋಜನೆಗಾಗಿ ಕಾಂಗ್ರೆಸ್ ದೊಡ್ಡ ಹೋರಾಟ ಮಾಡಿತ್ತು. ಕೇಂದ್ರದ ಬಿಜೆಪಿ ಸರ್ಕಾರ ಮೇಕೆದಾಟು ಯೋಜನೆಗೆ ಅನುಮತಿ ನೀಡಬೇಕು. ತಮಿಳುನಾಡಿನಲ್ಲಿ ಬಿಜೆಪಿ ಗೆಲ್ಲಬೇಕು ಎಂದು ಕೇಂದ್ರದ ಬಿಜೆಪಿ ಸರ್ಕಾರ ತಮಿಳುನಾಡು ಪರ ನಿಂತಿದೆ. ಅಲ್ಲಿನ ಮುಖ್ಯಮಂತ್ರಿ ಕಾಂಗ್ರೆಸ್ ಸರ್ಕಾರದ ಸ್ನೇಹಿತರಾಗಿ ಚುನಾವಣಾ ಮೈತ್ರಿ ಮಾಡಿಕೊಂಡಿರುವುದರಿಂದ ಕಾಂಗ್ರೆಸ್ ಸರ್ಕಾರವೂ ತಮಿಳುನಾಡು ಪರವಾಗಿದೆ. ಈ ಎರಡೂ ರಾಜಕೀಯ ಪಕ್ಷಗಳ ನಿರ್ಧಾರದಿಂದ ಕರ್ನಾಟಕದ ಜನ ಸಂಕಷ್ಟ ಅನುಭವಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಕನ್ನಡಿಗರ ಉದ್ಯೋಗಕ್ಕೆ ಕಾಯ್ದೆ ಬೇಕು:** ಕನ್ನಡ ನಾಮಫಲಕ ಹಾಕಬೇಕು ಎಂದು ಕನ್ನಡ ಚಳುವಳಿಗಾರರು ಹೋರಾಟ ಮಾಡಿದ ಪರಿಣಾಮ ಸರ್ಕಾರ 60:40 ಮಸೂದೆ ಜಾರಿ ಮಾಡಿದೆ. ಅದೇ ರೀತಿ ಕನ್ನಡಿಗರಿಗೆ ಉದ್ಯೋಗ ನೀಡುವ ಸಲುವಾಗಿ ಕಾಯ್ದೆಯನ್ನು ಜಾರಿಗೆ ತರಬೇಕು. ಇನ್ಫೋಸಿಸ್ ಸುಧಾಮೂರ್ತಿ ಮತ್ತು ನಾರಾಯಣ ಮೂರ್ತಿ ಅವರು ಅವರ ಸಂಸ್ಥೆಯಲ್ಲಿ ಎಷ್ಟು ಜನ ಕನ್ನಡಿಗರಿಗೆ ಉದ್ಯೋಗ ನೀಡಿದ್ದಾರೆ ಎಂದು ಹೇಳಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಕನ್ನಡ ಹೋರಾಟಗಾರರಾದ ತಾಯೂರು ವಿಠಲಮೂರ್ತಿ, ಬಿ.ಎ.ಶಿವಶಂಕರ್, ಚಂದ್ರಶೇಖರ್, ಜಿಯಾ ನಾಸೀರ್, ತೇಜಸ್ ಲೋಕೇಶ್ ಗೌಡ ಸೇರಿದಂತೆ ಹಲವರು ಭಾಗವಹಿಸಿದ್ದರು.

## ನಕ್ಕರೆ ಅದೇ ಸ್ವರ್ಗ

ಗಿರಾಕಿ : (ಬಟ್ಟೆ ಅಂಗಡಿಯಲ್ಲಿ) ನಿಮ್ಮತ್ರ ಸೊಳ್ಳೆ ಪರದೆ ಇದೆಯೇ?

ಅಂಗಡಿಯಾತ : ಓಹೋ ಇದೆ. ಯಾವ ಸೈಜಿನದು ಬೇಕು?

ಗಿರಾಕಿ : ಇಂಥಾ ಸೈಜಿನದು ಅಂತ ಹೇಳೋಕಾಗೊಲ್ಲ. ನಮ್ಮ ಮನೆಗೆ ಎಲ್ಲಾ ಸೈಜಿನ ಸೊಳ್ಳೆಗಳೂ ಬರ್ತಾ ಇರ್ತವೆ!

ಮೈಸೂರು ಮಿತ್ರ

ಗುರುವಾರ, 7 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

**ಅಮೃತವಾಹಿನಿ..........**

ಬೇಸರಿಸದೆ ಎಚ್ಚರದ ದುಡಿಮೆಯಿಂದ ಯಾವುದೇ ವೃತ್ತಿಯಲ್ಲಿ ಖಂಡಿತಾ ಯಶಸ್ಸು ಸಾಧ್ಯ –ವೆಬ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಡೀತಾ ಇದ್ರೆ ನಂಟು, ಬೆಳಗ್ತಾ ಇದ್ರೆ ಕಂಚು

## ನಿಮ್ಮ ಪತ್ರಗಳು

### ನೂತನ ರಾಜ್ಯಸಭಾ ಸದಸ್ಯರು ಸಾರ್ವಜನಿಕವಾಗಿ ಕ್ಷಮೆ ಕೇಳಲಿ

ಮಾನ್ಯರೇ,

ವಿಧಾನಸೌಧದಂತಹ ಪವಿತ್ರ ಸ್ಥಳದಲ್ಲಿ ಜನಪ್ರತಿನಿಧಿಗಳು ಸಂವಿಧಾನ ಸಾಕ್ಷಿಯಾಗಿ ಈ ದೇಶದ ಸಾರ್ವಭೌಮತೆಯನ್ನು ರಕ್ಷಿಸುತ್ತೀವಿ ಎಂಬ ಪ್ರಮಾಣ ವಚನದೊಂದಿಗೆ ತಮ್ಮ ಪದಗ್ರಹಣ ಮಾಡುತ್ತಾರೋ ಅಲ್ಲಿ ತಾಯ್ನಾಡಿಗೆ ದ್ರೋಹ ಬಗೆಯುವ ಘೋಷಣೆಗಳನ್ನು ಕೇಳಿಯೂ ಏನೂ ನಡದೇ ಇಲ್ಲ ಎಂಬ ಹುಂಬ ವಾದದೊಂದಿಗೆ ತಮ್ಮ ಸಮರ್ಥಕರನ್ನು ಸಂರಕ್ಷಿಸುವ ಹುನ್ನಾರವನ್ನು ಪ್ರತಿಯೊಬ್ಬ ದೇಶಭಕ್ತರೂ ಒಕ್ಕೊರಲಿನಿಂದ ಖಂಡಿಸಬೇಕು.

ಇಂತಹ ದೇಶದ್ರೋಹಿ ನಿಲುವುಗಳನ್ನು ತೆಗೆದುಕೊಂಡ ಮೇಲೂ ತಮ್ಮ ಭಂಡತನವನ್ನು ಜನ ಪುರಸ್ಕರಿಸುತ್ತಾರೆ ಎಂಬ ಮಾನಸಿಕತೆ ಹೊಂದಿದವರ ಬಗ್ಗೆ ಹೇಸಿಗೆ, ಜಿಗುಪ್ಸೆ ಉಂಟಾಗುತ್ತಿದೆ. ದೇಶದ್ರೋಹಿ ಹೇಳಿಕೆಯನ್ನು ನೀಡಿಯೇ ಇಲ್ಲ ಎಂದ ಪ್ರಜ್ಞಾವಂತ! ಸಚಿವರು, ನೂತನ ರಾಜ್ಯಸಭಾ ಸದಸ್ಯರು ಈಗ ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು.

ಸಂಸತ್ತಿನೊಳಗೆ ಪ್ರವೇಶಕ್ಕೆ ಅನುಮತಿ ನೀಡುವಾಗ ಆ ವ್ಯಕ್ತಿಯ ಪೂರ್ವಾಪರ ವಿಚಾರಿಸಿದ ಸಂಸದರೊಬ್ಬರ ಸಿಬ್ಬಂದಿಯ ಅಚಾತುರ್ಯವನ್ನೇ ಕಾರಣವಾಗಿಟ್ಟುಕೊಂಡು ಆ ಸಂಸತ್ ಸದಸ್ಯರೇ ಮುಂದೆ ನಡೆದ ಕುಕೃತ್ಯದಲ್ಲಿ ಷಾಮೀಲಾಗಿದ್ದಾರೆ ಎಂದು ಬಿಂಬಿಸಲು ಬೀದಿ ಬೀದಿಯಲ್ಲಿ ಕಿರುಚಾಡಿದವರ ಆತ್ಮಸಾಕ್ಷಿ ಈಗ ಏನನ್ನುತ್ತದೆ.

ತಮ್ಮ ಜೀವವಾಹಿನಿ ಇಂತಹ ದೇಶವಿರೋಧಿ ನಿಲುವುಗಳನ್ನು ಕರಗತ ಮಾಡಿಕೊಂಡವರಿಗೆ ಯಾವ ಆತ್ಮಸಾಕ್ಷಿಯೂ ಇರುವುದಿಲ್ಲವೆಂಬುದು ಬೇರೆಯ ಮಾತು. ಪಾಕಿಸ್ತಾನ ನಿಮಗೆ ಶತ್ರು ರಾಷ್ಟ್ರವಿರಬಹುದು ನಮಗೆ ಬೀಗರ ಮನೆ ಎಂದು ಬಹಿರಂಗವಾಗಿ ಹೇಳಿಕೊಳ್ಳುವವರಿಂದ ದೇಶಭಕ್ತಿಯನ್ನು ನಿರೀಕ್ಷಿಸುವುದು ಬೆಂಗಳೂರಿನಲ್ಲಿ 24X7 ನೀರು ಸರಬರಾಜು ನಿರೀಕ್ಷಿಸಿದಂತೆಯೇ ಅಲ್ಲವೇ?

ಹರುಷದ ಕೂಳಿಗೆ ವರುಷದ ಕೂಳನ್ನು ಕಳೆದುಕೊಂಡು ಪರಿತಪಿಸುತ್ತಿರುವ ಕನ್ನಡಿಗರೆಲ್ಲರಿಗೆ ಅಭಿನಂದನಾಪೂರ್ವಕ ಪ್ರಣಾಮಗಳು. ಮುಂದಿನ ದಿನಗಳಲ್ಲಿ ಇಂತಹ ಇನ್ನಷ್ಟು ರೋಚಕ ಘಟನಾವಳಿಗಳನ್ನು ವೀಕ್ಷಿಸಲು ಈಗಿನಿಂದಲೇ ತಯಾರಾಗಿರಿ. ಇಂತಹ ಕುಕೃತ್ಯಕ್ಕೆ ಕಾರಣವಾಗಿರುವವರನ್ನು ಬೆಂಬಲಿಸಿದವರನ್ನು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿ ಎಂದು ಆಗ್ರಹಿಸುವುದು ಅರಣ್ಯರೋದನ ಎಂಬುದು ಸರ್ವಗ್ರಾಹ್ಯ. ಸರ್ಕಾರ ನಡೆಸುವವರು 'ಮೂರು' ಬಿಟ್ಟವರು ಎಂಬುದು ಗೊತ್ತಿದ್ದೂ ಮಾಡುವ ಇಂತಹ ಆಗ್ರಹಗಳು ನಮಗೆ ನಾವು ಮಾಡಿಕೊಳ್ಳುವ ಆತ್ಮ ವಂಚನೆಯೇ ಸರಿ. ಹಾಗೆಯೇ ಹೊಂದಾಣಿಕೆ ರಾಜಕೀಯ ಮಾಡುತ್ತಿರುವ ರಾಜ್ಯದ ವಿರೋಧ ಪಕ್ಷಗಳು ಸಂಬಂಧಿಸಿದವರ ರಾಜೀನಾಮೆ ಪಡೆದು ನಿಮ್ಮ ಸಾಮರ್ಥ್ಯ ತೋರಿಸಿ. ಮುಖ್ಯಮಂತ್ರಿಗಳೇ ತಾವು ತಮ್ಮ ಸಚಿವರಿಗೆ ಯಾವುದೇ ಸೂಕ್ಷ್ಮ ವಿಚಾರಗಳ ಬಗ್ಗೆ ತಕ್ಷಣ ಪ್ರತಿಕ್ರಿಯೆ ನೀಡಿ ರಾಜ್ಯದ ಜನತೆಯ ಮುಂದೆ ತಮ್ಮ ಸರ್ಕಾರದ ಮಾನ ಹರಾಜಾಗುವುದನ್ನು ತಡೆಯಿರಿ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

### ಕೃಷಿಕ್ ಸರ್ವೋದಯ ಪ್ರತಿಷ್ಠಾನದ ಕಾರ್ಯ ಶ್ಲಾಘನೀಯ

ಮಾನ್ಯರೆ,

ಮೈಸೂರಿನ ಕೃಷಿಕ್ ಸರ್ವೋದಯ ಪ್ರತಿಷ್ಠಾನದ ವತಿಯಿಂದ ಐಎಎಸ್, ಐಪಿಎಸ್, ಐಎಫ್‌ಎಸ್, ಕೆಎಎಸ್, ಕೆಇಎಸ್, ಕೆಎಸ್ ಪಿಎಸ್, ಬ್ಯಾಂಕಿಂಗ್ ಹಾಗೂ ಇನ್ನೂ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಿರುವ ಕೆಲಸ ತುಂಬಾ ಶ್ಲಾಘನೀಯ. 1998ರಲ್ಲಿ ಮೈಸೂರಿನಲ್ಲಿ ಪ್ರಾರಂಭವಾದ ಈ ಸಂಸ್ಥೆ ಇದುವರೆಗೂ 206 ಕ್ಕೂ ಹೆಚ್ಚು ತರಬೇತಿ ಕಾರ್ಯಾಗಾರ ನಡೆಸಿ ಗ್ರಾಮೀಣ ಭಾಗದ ಅಭ್ಯರ್ಥಿಗಳು ಇದರ ಸದುಪಯೋಗ ಪಡೆದು ಸರ್ಕಾರಿ ಉದ್ಯೋಗ ಪಡೆದಿರುವುದು ಸ್ವಾಗತಾರ್ಹ ಬೆಳವಣಿಗೆ. ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಹಾಗೂ ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವು ನೀಡಲು ವಸತಿ ನಿಲಯದಲ್ಲಿ ಪುರುಷರಿಗೆ 25 ಮಂದಿಗೆ, ಮಹಿಳೆಯರಿಗೆ 25 ಮಂದಿಗೆ ಅವಕಾಶ ಕಲ್ಪಿಸಲಾಗಿರುವುದು ಮತ್ತು ಡಿಜಿಟಲ್ ಸ್ಟುಡಿಯೋ ರೂಮ್, ಡಿಜಿಟಲ್ ಲೈಬ್ರರಿ, ಸ್ಟಡಿ ಮೆಟೀರಿಯಲ್, ರಿಯಾಯಿತಿ ದರದಲ್ಲಿ ಉಪಾಹಾರ ಹಾಗೂ ಪ್ರತಿ ವರ್ಷ 500ಕ್ಕೂ ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಅವರ ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಎಂಬಿಬಿಎಸ್ ವಿದ್ಯಾರ್ಥಿಗೆ 25 ಸಾವಿರ, ಇಂಜಿನಿಯರಿಂಗ್ ವಿದ್ಯಾರ್ಥಿಗೆ 20 ಸಾವಿರ, ಪದವಿ, ಡಿಪ್ಲೊಮಾ ವಿದ್ಯಾರ್ಥಿಗೆ 15 ಸಾವಿರ, ಪಿಯುಸಿ ವಿದ್ಯಾರ್ಥಿಗೆ 10 ಸಾವಿರ ರೂ. ನೀಡಲಾಗುತ್ತಿರುವುದು ಉತ್ತಮವಾದ ಬೆಳವಣಿಗೆ. ಇದೊಂದು ಸ್ವಯಂ ಸೇವಾ ಟ್ರಸ್ಟ್ ಆಗಿ ಸಮಾಜದ ಏಳ್ಗೆಗೆ ಪೂರಕವಾಗಿ ಕೆಲಸ ಮಾಡುತ್ತಿರುವುದು ಶ್ಲಾಘನೀಯ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

### ಕೆ.ಶಿವರಾಂ ಸಾವಿನ ಸುದ್ದಿಯನ್ನು ನೆಪಮಾತ್ರಕ್ಕೆ ಬಿತ್ತರಿಸಿದ ಮಾಧ್ಯಮಗಳು

ಮಾನ್ಯರೆ,



ನಿವೃತ್ತ ಐಎಎಸ್ ಅಧಿಕಾರಿ, ನಟ ಹಾಗೂ ರಾಜಕಾರಣಿ ಕೆ.ಶಿವರಾಂರವರ ಸಾವಿನ ಸುದ್ದಿಯನ್ನು ಕೆಲ ಮಾಧ್ಯಮಗಳು ನೆಪಮಾತ್ರಕ್ಕೆ ಪ್ರಸಾರ ಮಾಡಿ ಸುಮ್ಮನಾದವು ಅನಿಸುತ್ತದೆ.

ಮಾಧ್ಯಮಗಳು ಸೆಲೆಬ್ರೆಟಿಗಳ ಮದುವೆ, ಹುಟ್ಟುಹಬ್ಬ ಅನೈತಿಕ ಸಂಬಂಧಗಳು, ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲತೆ ಬಗೆಗಿನ ಸುದ್ದಿಗಳನ್ನೇ ಹೆಚ್ಚು ಪ್ರಸಾರ ಮಾಡುತ್ತಿವೆ. ಆದರೆ ಸಮಾಜಕ್ಕೆ ಮಾದರಿಯಾಗಿದ್ದ ಹಾಗೂ ಕನ್ನಡದಲ್ಲಿ ಮೊದಲ ಬಾರಿಗೆ ಐಎಎಸ್ ಪರೀಕ್ಷೆಯನ್ನು ಬರೆದು ಉತ್ತೀರ್ಣರಾದ ಕೆ ಶಿವರಾಂರಂತಹ ಸಾಧಕ ವ್ಯಕ್ತಿಯ ಸಾವಿನ ಸುದ್ದಿಯನ್ನು ಪ್ರಸಾರ ಮಾಡುವಲ್ಲಿ ಮಾಧ್ಯಮಗಳು ನಿರುತ್ಸಾಹ ತೋರಿವೆ. ಕೆ ಶಿವರಾಂ ನಾನು ಗುಡಿಸಲಿನಿಂದ ಬಂದವನು ಗುಡಿಸಲಿನವರಿಗಾಗಿ ದುಡಿಯುತ್ತೇನೆ' ಎಂದು ಆಡಿದ ಮಾತಿನಂತೆಯೇ ಶೋಷಿತರು, ಬಡವರ ಏಳಿಗೆಗಾಗಿ ದುಡಿದವರು. ಅಂತಹ ಸಮಾಜಮುಖಿ ವ್ಯಕ್ತಿತ್ವದ ವ್ಯಕ್ತಿಯ ಸಾವಿನ ವಿಚಾರವನ್ನು ಸರಿಯಾಗಿ ಬಿತ್ತರಿಸದ ಮಾಧ್ಯಮಗಳ ನಡೆ ಬೇಸರದ ಸಂಗತಿ. ಅಲ್ಲದೆ ಅವರ ಅಂತ್ಯಕ್ರಿಯೆಗೂ ಸರ್ಕಾರಿ ಜಾಗ ಸಿಗದೆ ಹುಟ್ಟೂರಲ್ಲೇ ಅಂತ್ಯಕ್ರಿಯೆ ನೆರವೇರಿಸಲಾಯಿತು. ಈ ಬಗ್ಗೆ ಧ್ವನಿ ಎತ್ತಬೇಕಾದ ಮಾಧ್ಯಮಗಳು ಮೂಕರಾಗಿದ್ದು ವಿಪರ್ಯಾಸ.

–ಕೆ.ಎಸ್. ಸುರೇಶ್, ಶಿಕ್ಷಕರು, ಕೆ ಜಿ ಹಳ್ಳಿ, ಹೆಚ್ ಡಿ ಕೋಟೆ.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ
ಮೈಸೂರು. ಮೊ.: 9036389640

ಈ ಜೀವನ...

# ಜಿಎಸ್‌ಎಸ್ ಜೀವಂತ ಕವಿತೆ ತಾಯಿಗೆ

ಕತ್ತಲ ದಾರಿಗೆ ಬೆಳಕಿನ ನೀರು ಸುರಿದು, ಧಗೆ ಬೇಗೆಯಲ್ಲಿ ಕಾವ್ಯಸತ್ವದ ಮೂಲಕ ಹೃದಯವನ್ನು ತಂಪುಗೊಳಿಸಿದ ಕವಿವರ್ಯರೆಂದರೆ ಜಿ.ಎಸ್.ಶಿವರುದ್ರಪ್ಪ. ಕನ್ನಡದ ಮನಸ್ಸುಗಳು ಹಾಗೂ ಸಾಹಿತ್ಯ ಚರಿತ್ರೆ ಎಂದೂ ಮರೆಯಲಾಗದ, ಮರೆಯಬಾರದ ಕವಿಶ್ರೇಷ್ಠರಾಗಿ ಅವರು ಖ್ಯಾತನಾಮರಾಗಿದ್ದಾರೆ. ತಮ್ಮ ಕವಿಹೃದಯ ಭಾವದಿಂದ ಮತ್ತು ವಿಶೇಷ ಪ್ರತಿಭೆಯಿಂದ ಹಲವು ಪ್ರತಿಭಾವಂತ ಶಿಷ್ಯರ ಪಾಲಿಗೆ ದಾರಿದೀಪವಾದವರು. ಕೋಳಿ ತನ್ನ ರೆಕ್ಕೆಯೊಳಗೆ ಆತುಕೊಂಡ ಮೊಟ್ಟೆಗಳಿಗೆ ಜೀವಬಲವನ್ನು ಭಾವದ ಒಲವನ್ನು ಉಣಬಡಿಸುವಂತೆ ತಾವು ಬೆಳೆಯುವುದರೊಂದಿಗೆ ತಮ್ಮ ಜೊತೆ ಇರುವವರನ್ನು ಬೆಳೆಸಿದಂತಹ ಹೆಗ್ಗಳಿಕೆ ಜಿ.ಎಸ್.ಶಿವರುದ್ರಪ್ಪ ಅವರಿಗೆ ಸಲ್ಲುತ್ತದೆ. ಮೂರನೇ ರಾಷ್ಟ್ರಕವಿಯಾಗಿ ಜನರಷ್ಟೇ ಅಲ್ಲದೆ ಮನಗಳು ಕೂಡ ನಿರ್ವಂಚನೆ ಇಲ್ಲದೆ ಮೆಚ್ಚುವಂತಹ ಕವನಗಳನ್ನು ಬರೆದ ಶ್ರೀಯುತರು ತಮ್ಮ ವಿಶೇಷ ಬರಹಗಳಿಂದ ಮನೆ ಮಾತಾಗಿದ್ದಾರೆ. ಇವರ ಕವಿತೆಗಳು ಮೇಲ್ನೋಟಕ್ಕೆ ಸರಳವಾಗಿರುವಂತೆ ಗೋಚರವಾದರೂ ಆಂತರ್ಯದಲ್ಲಿ ಹಲವು ಸತ್ವಪೂರ್ಣ ವಿಚಾರಗಳನ್ನು ಒಳಗೊಂಡಿರುತ್ತದೆ. ಕವಿತೆಯ ಆಳಕ್ಕೆ ಇಳಿದು ಕವಿ ಭಾವವನ್ನು ಅರ್ಥ ಮಾಡಿಕೊಂಡಾಗ ಮಾತ್ರ ಕವಿತೆ ರುಚಿಸುತ್ತದೆ. ಈ ನಿಟ್ಟಿನಲ್ಲಿ ಜಿ.ಎಸ್.ಶಿವರುದ್ರಪ್ಪ ಅವರ ಸಾಮಗಾನ ಕವನ ಸಂಕಲನದಲ್ಲಿ 'ತಾಯಿಗೆ' ಎಂಬ ಶೀರ್ಷಿಕೆಯಲ್ಲಿ ಕವನವೊಂದು ಜನುಮ ತಾಳಿ ಜನ್ಮದಾತೆಯ ಶ್ರೇಷ್ಠತೆಯನ್ನು ಎತ್ತಿಹಿಡಿದಿದೆ. ಈ ಕವಿತೆಯ ಭಾವದಲ್ಲಿ ಜಿ.ಎಸ್.ಶಿವರುದ್ರಪ್ಪ ಅವರಿಗೆ ತಮ್ಮ ತಾಯಿಯ ಬಗ್ಗೆ ಇದ್ದ ಪ್ರೀತಿ, ತಾಯಿಯನ್ನು ಕಳೆದುಕೊಂಡಾಗ ಅವರಿಗಾದ ನೋವು, ತಾಯಿಯ ಸ್ಥಾನವನ್ನು ಯಾರೂ ತುಂಬಲಾಗದು ಎಂಬ ವಾಸ್ತವದ ಸತ್ಯ ಇತ್ಯಾದಿ ವಿಷಯಗಳನ್ನು ತುಂಬಾ ಸೊಗಸಾಗಿ ಜೀವಂತ ರೂಪು ತಾಳುವಂತೆ ಕಡೆದು ನಿಲ್ಲಿಸಿದ್ದಾರೆ. ಹೆತ್ತು ಮೊಲೆಯಿತ್ತವಳು ತಾಯಿ ನೀನು ನಿನ್ನ ಕಣ್ ಬೆಳಕಿನಲಿ ಬೆಳೆದಿದ್ದೆ ನಾನು.

**ಬೆಳಕು ಆರಿತು ನನಗೆ ಯಾವುದೋ ಒಂದು ಬಗೆ**
**ಬದುಕಿ ಬೆಳೆದೆನು ನಾನು ನಿನ್ನ ನೆನೆದ**
**ಸಿಹಿಗಿಂತ ಕಹಿಯನೇ ಹೆಚ್ಚಾಗಿ ಸವಿದು**

ಇದರೊಂದಿಗೆ ಜಿಎಸ್‌ಎಸ್ ತಾಯಿಯ ವಾತ್ಸಲ್ಯ ವಿವರಿಸುತ್ತಾರೆ. ತಾಯಿ ಹಲವು ನೋವುಗಳನ್ನು ಸಹಿಸಿಕೊಂಡು ತನ್ನ ಮಗುವಿಗೆ ಜನ್ಮವನ್ನು ನೀಡುತ್ತಾಳೆ. ಮಗುವನ್ನು ನೋಡಿದ ಕ್ಷಣ ಅವಳ ನೋವುಗಳೆಲ್ಲ ಕ್ಷಣಿಕ ಎನಿಸುತ್ತದೆ, ತನ್ನ ಬದುಕು ಸಾರ್ಥಕ ಎನಿಸುತ್ತದೆ. ಎಲ್ಲೋ ಒಂದು ಕಡೆ ಓದಿದ ನೆನಪು ಏಕಕಾಲಕ್ಕೆ 28 ಮೂಳೆಗಳನ್ನ ಮುರಿದಾಗ ಎಷ್ಟು ನೋವಾಗುತ್ತದೋ ಅಷ್ಟು ನೋವುಗಳನ್ನು ಅನುಭವಿಸಿ ತಾಯಿ ಮಗುವಿಗೆ ಜನ್ಮ ನೀಡುತ್ತಾಳೆ. ಅವಳ ಪಾಲಿಗೆ ಮಗುವೇ ಸರ್ವಸ್ವ, ತನ್ನ ಕಣ್ಣಿನ ಬೆಳಕಿನಂತೆ ಮಗುವನ್ನು ಪಾಲನೆ ಪೋಷಣೆ ಮಾಡುತ್ತಾಳೆ.

**ನಿನ್ನಂಕದಲಿ ಮಲಗಿ ನಿನ್ನ ಕಣ್ಣಾಳದಲಿ ನನ್ನ ಹೃದಯವ**
**ಕಂಡ ಸಂತೋಷದಲ್ಲಿ ನಲಿದು ಕೇಕೆಯ ಹಾಕಿ**
**ಸೆರಗಿನಲಿ ಮೊಗವಿಕ್ಕಿ ನಿನ್ನೆದೆಯ ಮಾಧುರದ**
**ಎದೆಹಾಲ ಸವಿದು ನಲಿದ ಬೆಳಕಿನ ಕಾಲವತ್ಯಂತ ಕಿರಿದು.**


ಮಗುವಿನ ಪಾಲನೆ ಪೋಷಣೆಯಲ್ಲಿ ತಾಯಿಯ ಪಾತ್ರ ಪ್ರಮುಖವಾದದ್ದು. ಬಾಲ್ಯದಲ್ಲಿ ತನ್ನ ಮಗುವನ್ನು ಕಣ್ಣಿನ ರೆಪ್ಪೆಯಂತೆ ರಕ್ಷಣೆ ಮಾಡಿ ನೋಡಿಕೊಳ್ಳುವ ತಾಯಿ ಮಗುವಿಗಾಗಿ ತನ್ನ ಸರ್ವಸ್ವವನ್ನೇ ಧಾರೆ ಎರೆವಳು. ಅಂತಹ ತಾಯಿಯ ಪ್ರೀತಿ ಎಲ್ಲರಿಗೂ ಸಿಗುವುದು ಅಪರೂಪ. ಕೆಲವರಿಗೆ ಆ ಪ್ರೀತಿ, ಬಾಂಧವ್ಯ ಕ್ಷಣಿಕ ಕಾಲ ದೊರಕುವುದು, ಇನ್ನೂ ಕೆಲವರಿಗೆ ಆ ಸೌಭಾಗ್ಯವೇ ದೊರಕದೇ ಹೋಗಬಹುದು. ಇಲ್ಲಿಯು ಕವಿಯು ಅದನ್ನೇ ಹೇಳುವ ಕೆಲಸ ಮಾಡಿದ್ದಾರೆ. ನಿನ್ನ ಮಡಿಲಲ್ಲಿ ಮಲಗಿ ನಿನಗಾಗುವ ಸಂತೋಷವನ್ನು ನೋಡಿ ಕೇಕೆ ಹಾಕಿ ನಗುವ, ಎದೆ ಹಾಲನ್ನುಂಡು ನಲಿಯುವ ಬೆಳಕಿನ ಕಾಲ ನನಗೆ ದೊರೆತದ್ದು ಅತ್ಯಲ್ಪ ಕಾಲ ಎನ್ನುವ ಮೂಲಕ ತುಂಬಾ ಸಣ್ಣ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ನೋವನ್ನು ಅನುಭವಿಸಿದ ಸಂಕಟವನ್ನು ತೋರಿಸಿಕೊಳ್ಳುತ್ತಿದ್ದಾರೆ.

**ಇದ್ದಕ್ಕಿದ್ದಂತೆಯೇ ನೀ ಹಾರಿ ಹೋದೆ. ಭುವಿಯ**
**ಪಂಜರದಿಂದ ಬಿಡುಗಡೆಯ ಪಡೆದೆ.**
**ನಾನೊಬ್ಬನೇ ಉಳಿದೆ ನಾನೊಬ್ಬನೇ ಬೆಳೆದೆ**
**ಬಾಳ ಬಿರುಗಾಳಿಯಲಿ ಎದೆಯನೊಡ್ಡಿ**
**ಕಳೆದ ಸಾಲಕೆ ಇನ್ನು ತೀರದಿದೆ ಬಡ್ಡಿ.**

ಸಾವು, ಸಾವಿನಾಚೆಯ ಬದುಕು ಇದು ಇಂದಿಗೂ ಯಾರಿಗೂ ಅರ್ಥವಾಗದ ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ನೀರಿನ ಮೇಲಿನ ಗುಳ್ಳೆಯಂತೆ ಮನುಷ್ಯನ ಬದುಕು, ಇಂದು ಇದ್ದವರು ನಾಳೆ ಇರುವುದಿಲ್ಲ. ವಿಧಿಯ ಲೆಕ್ಕಾಚಾರದ ಮುಂದೆ ಮನುಷ್ಯ ಏನೇ ಸಾಧನೆ ಮಾಡಿದ್ದರೂ ಅದು ಶೂನ್ಯವೇ ಆಗಿರುತ್ತದೆ. ತನ್ನ ಆಯಸ್ಸನ್ನು ಮೀರಿ ಒಂದು ಕ್ಷಣವೂ ಕೂಡ ಮನುಷ್ಯ ಬದುಕಿರಲಾರನು. ಇಲ್ಲಿಯೂ ಕೂಡ ಹೇಳದೆ ಕೇಳದೆ ಈ ಭುವಿಯ ಪಂಜರದಿಂದ ಹಾರಿ ಹೋಗಿ ಬಿಡುಗಡೆಯನ್ನು ಪಡೆದ ತಾಯಿಯನ್ನು ಕವಿ ಪ್ರಶ್ನಿಸುತ್ತಿದ್ದಾರೆ. ನೀನು ಹಾರಿ ಹೋದೆ, ಆದರೆ ನಾನೊಬ್ಬನೇ ಏಕಾಂಗಿಯಾಗಿ ಉಳಿದೆ, ಬೆಳೆದೆ. ಸಾಲ ಮಾಡಿದರೆ ಹೇಗೆ ಒಂದೇ ಸಮನೆ ಬಡ್ಡಿ ಕಟ್ಟಿ ಬದುಕು ನೂಕ ಬೇಕೋ ಹಾಗೆಯೇ ನಾನು ಈ ಬಾಳಿನ ಬಿರುಗಾಳಿಗೆ ಸಿಕ್ಕಿ ಹೊಡೆತ ಅನುಭವಿಸಿದೆ ಎಂದು ಅಮ್ಮನ ಸಾವು ತಮಗೆ ಎಷ್ಟು ನೋವುಂಟು ಮಾಡಿದೆ ಎಂಬುದನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ.

**ನೀ ಸತ್ತು ಹೋಗಿರುವೆ ಎಂಬುದನು ಕೇಳಿ**
**ನಾನು ನಂಬಲೆ ಇಲ್ಲ ನನ್ನೆಳವೆಯಲ್ಲಿ**
**ನೀನೆಲ್ಲೊ ಹೋಗಿರುವೆ**
**ಮತ್ತೆ ಬಳಿಗೈತರುವೆ**
**ಎಂಬ ನಂಬುಗೆಯಲ್ಲಿ ಹಲವು ದಿನ ಕಾದೆ**
**ಕಡೆಗೆ ನಂಬಿದೆ ನಾನು–'ನೀ ತೊರೆದು ಹೋದೆ'**

ಸತ್ಯ ಯಾವಾಗಲೂ ಕಹಿಯಾಗಿರುತ್ತದೆ, ಸುಳ್ಳು ಯಾವಾಗಲೂ ಸಿಹಿಯಾಗಿರುತ್ತದೆ. ನಮಗೆ ಕಹಿಗಿಂತಲೂ ಸಿಹಿಯೇ ಹೆಚ್ಚು ಮುದವನ್ನು ,ರುಚಿಯನ್ನು ನೀಡುತ್ತದೆ. ಆದರೆ ವಾಸ್ತವದ ಅರಿವನ್ನು ನಾವು ಮಾಡಿಕೊಳ್ಳಲೇಬೇಕು. ಭ್ರಮೆಯ ಮುಖವಾಡ ಕಳಚಿದಾಗ ಸತ್ಯದ ದರ್ಶನವಾಗುತ್ತದೆ. ಇಲ್ಲಿಯು ಕೂಡಾ ತುಂಬಾ ಚಿಕ್ಕ ವಯಸ್ಸಿಗೆ ತನ್ನ ತಾಯಿಯನ್ನು ಕಳೆದುಕೊಂಡ ಕವಿಗೆ ತಾಯಿ ಸತ್ತುಹೋಗಿರುವ ವಿಚಾರವನ್ನು ತಿಳಿಸಿದಾಗ ಅದನ್ನು ನಂಬಲು ಸಾಧ್ಯವೇ ಆಗಿರುವುದಿಲ್ಲ. ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡಿದ್ದರಿಂದ ಸಾವು ಎಂದರೇನು ಎಂಬುದು ತಿಳಿಯದೆ ಇರುವುದರಿಂದ ಕವಿಗೆ ತನ್ನ ತಾಯಿ ಇಂದಲ್ಲ ನಾಳೆ ಬಂದೇ ಬರುತ್ತಾಳೆ ಎಂಬ ನಂಬಿಕೆ ಇರುತ್ತದೆ. ಇಲ್ಲೇ ಎಲ್ಲಿಯೋ ಹೋಗಿದ್ದಾರೆ , ಬಂದೇ ಬರುತ್ತಾರೆ ಎಂಬ ನಂಬಿಕೆಯಲ್ಲಿ ಹಲವು ದಿನ ಕಳೆಯುತ್ತಾರೆ. ಕಡೆಗೆ ತಮ್ಮ ನಂಬಿಕೆ ಸುಳ್ಳಾಗಿ ತಾಯಿ ಇನ್ನಿಲ್ಲ ಎಂಬ ವಾಸ್ತವದ ಅರಿವು ಅವರಿಗಾಗುತ್ತದೆ. ಮನಸು ಮುದುಡುತ್ತದೆ.



ಜಿ.ಎಸ್.ಶಿವರುದ್ರಪ್ಪ

**ದಿನ ದಿನವು ಆಗಸದ ಬಯಲನ್ನೆ ನೋಡಿ**
**ತೇಲುತಿಹ ನಿಶ್ಚಿಂತ ಮೋಡಗಳ ನೋಡಿ**
**ನೀನಲ್ಲಿ ಮುಗಿಲಾಗಿ ತೇಲುತ್ತ ಸುಖವಾಗಿ**
**ಇರಬಹುದು ಎನ್ನುತ್ತ ಊಹಿಸಿದ್ದೆ**
**ಹಸುಳೆಗನಸನು ಎದೆಗೆ ತುಂಬುತಿದ್ದೆ.**

ಸತ್ತವರೆಲ್ಲ ದೇವರ ಬಳಿ ಹೋಗುವರು, ಆಕಾಶದಲ್ಲಿ ಬಾಳುವರು ಎಂದು ನಂಬಿಕೆ ಇದ್ದ ಕಾಲವದು. ಪ್ರಸ್ತುತ ದಿನದ ಹಾಗೆ ಎಲ್ಲವನ್ನು ಲೆಕ್ಕಾಚಾರ ಮಾಡಿ ಅಳೆದು ತೂಗಿ ನೋಡುವ ಕಾಲವಲ್ಲ. ಭಾವನೆಗಳೊಂದಿಗೆ ಬದುಕು ನಡೆಸುವ ಕಾಲಘಟ್ಟವದು. ನೋವಾಗಬಾರದು ಎಂದು ಮನಸ್ಸಿಗೆ ಮುದ ನೀಡುವ ಯಾವುದೇ ಸುಳ್ಳನ್ನು ಹೇಳಿದರು ಅದನ್ನು ನಿಜವೊಂದೇ ಭ್ರಮಿಸಿ ಬಾಳುವ ಕಾಲ ಅದಾಗಿತ್ತು. ಬಹುಶಃ ಇಲ್ಲಿ ಕವಿಗೂ ಅದೇ ಅನುಭವವಾಗಿರಬಹುದು. ನಿನ್ನ ತಾಯಿ ಆಕಾಶದಲ್ಲಿರುವಳು ಎಂದು ಯಾರೋ ನಂಬಿಸಿರಬಹುದು. ಅದನ್ನೇ ನಿಜವೆಂದು ಭ್ರಮಿಸಿ, ಪ್ರತಿದಿನವೂ ತೇಲುವ ಮೋಡಗಳನ್ನು ನೋಡಿ ತನ್ನ ತಾಯಿ ಅಲ್ಲಿ ಮುಗಿಲಂತೆ ತೇಲುತ್ತಾ ಸುಖವಾಗಿ ಇರಬಹುದು ಎಂಬ ಭಾವನೆ ಕವಿಗೆ ಇದ್ದಿರಬಹುದು.

**ರಾತ್ರಿಯಾಕಾಶದಲಿ ತಾರೆಗಳ ಮೇಳ ಮೌನದಲಿ**
**ಆಲಿಸಿತು ನನ್ನೆದೆಯ ಗೋಳ.**
**ನಿನ್ನ ಕಣ್ಣುಗಳಂತೆ ಆ ಚಿಕ್ಕೆಗಳ ಸಂತೆ**
**ಮಿಣುಮಿಣುಕಿ ನನ್ನೆದೆಗೆ ಶಾಂತಿಯನ್ನಿತ್ತು**
**ಅವ್ಯಕ್ತ ಗೀತೆಯಲ್ಲಿ ಸಂತೈಸುತಿತ್ತು**

ನಮ್ಮ ಭಾರತೀಯರಲ್ಲಿ ಒಂದು ನಂಬಿಕೆ ಇದೆ. ಸತ್ತವರು ತಾರೆಗಳಾಗುತ್ತಾರೆ (ನಕ್ಷತ್ರವಾಗುತ್ತಾರೆ). ನಮ್ಮನ್ನು ಗಮನಿಸುತ್ತಾ ಇರುತ್ತಾರೆ ಎಂಬ ನಂಬಿಕೆ ಇಂದಿಗೂ ಕೆಲವರಲ್ಲಿದೆ. ಆ ಮೂಲಕವಾದರೂ ಆತ್ಮೀಯರನ್ನು ಕಳೆದುಕೊಂಡು ಅನುಭವಿಸುವ ನೋವನ್ನು ಮರೆಯಬಹುದೆಂಬ ಭಾವ ಈ ನಂಬಿಕೆಯೊಳಗೆ ಅಡಗಿದೆ. ಕವಿಗೂ ಕೂಡ ರಾತ್ರಿ ಆಕಾಶದಲ್ಲಿ ಆ ತಾರಾ ಸಮೂಹವನ್ನು ನೋಡಿದಾಗ ಏನೋ ಒಂದು ಬಗೆಯ ನಿರ್ಲಿಪ್ತತೆ. ಆ ತಾರಾ ಸಮೂಹ ಮೌನವಾಗಿ ನನ್ನೆದೆಯಲ್ಲಿ ಅಡಗಿರುವ ಗೋಳನ್ನು ಆಲಿಸುತ್ತಿದೆ ಎಂಬ ಭ್ರಮೆ. ಆ ಚುಕ್ಕಿಗಳ ಸಂತೆಯನ್ನು ನೋಡುತ್ತಾ ಹೋದಂತೆ ಏನೋ ಒಂದು ಮನಶ್ಶಾಂತಿ ಆವರಿಸುತ್ತಾ ಅವ್ಯಕ್ತ ಗೀತೆಯ ರೂಪದಲ್ಲಿ ಅದು ನನ್ನ ಸಂತೈಸುತಿತ್ತು ಎನ್ನುವ ಮೂಲಕ ದುಗುಡವನ್ನು ಕ್ಷಣಿಕ ಕಾಲವಾದರೂ ಮರೆಯುವ ಪ್ರಯತ್ನ ಮಾಡಿದ್ದಾರೆ ಎಂದುಕೊಳ್ಳಬಹುದು.

**ಬೇರೆ ತಾಯಂದಿರನು ನೀನೆಂದು ಭ್ರಮಿಸಿ**
**ಕೂಗಿ ನಿಷ್ಫಲನಾಗಿ ನಿನಗಾಗಿ ತಪಿಸಿ!!**
**ನೀ ತೋರದಿರಲಾಗಿ**
**ಕಣ್ಣೀರಿನಲಿ ಮಲಗಿ**
**ಕನಸಿನಲಿ ನಾನಿನ್ನ ಕಂಡುದುಂಟು;**
**ಕನಸೊಡೆಯೆ ಕಾದಿತ್ತು ಜಗದ ನಂಟು.**

ಭ್ರಮೆ ಕೆಲವೊಮ್ಮೆ ಸಂತೋಷವನ್ನು ನೀಡುತ್ತದೆ ಆದರೆ ಹೆಚ್ಚು ನೋವು ಕೊಡುತ್ತದೆ. ಭ್ರಮೆಯ ಮುಖವಾಡ ಕಳಚಿದಾಗ ಸತ್ಯದ ದರ್ಶನ ಆಗುತ್ತದೆ. ಸತ್ಯ ಹಾಗೂ ವಾಸ್ತವತೆಯನ್ನು ಯಾರೂ ಬದಿಗೆ ಸರಿಸದೆ ಒಪ್ಪಿಕೊಳ್ಳಲೇಬೇಕು; ಇದೇ ಬದುಕಿನ ನಿಯಮ. ಇಲ್ಲಿಯೂ ಕೂಡ ಕವಿ ತಮ್ಮ ತಾಯಿಯನ್ನು ಬೇರೆಯವರಲ್ಲಿ ಹುಡುಕುವ ಪ್ರಯತ್ನವನ್ನು ಮಾಡಿದ್ದಾರೆ. ಕೆಲವೊಮ್ಮೆ ನೆಪ ಮಾತ್ರಕ್ಕೆ ಅಮ್ಮನೆಂದು ಕರೆದು ತಾಯಿಗಾಗಿ, ಪರಿತಪಿಸಿ ಆ ತಾಯಿ ಕಾಣದೆ ಹೋದಾಗ ಕಣ್ಣೀರಲ್ಲಿ ಮಲಗಿ ಕನಸಿನಲ್ಲಿ ತಾಯಿಯನ್ನು ನೋಡುವ ಪ್ರಯತ್ನ ಮಾಡಿದ್ದಾರೆ. ಕನಸಿನಿಂದ ಎದ್ದ ಬಳಿಕ ವಾಸ್ತವದ ಜಗತ್ತಿನ ಪರಿಚಯ ಆದಾಗ ಕನಸು ಕನಸೇ ಹೊರತು ನನಸಾಗುವುದಿಲ್ಲ ಎಂಬ ಅಂಶ ಮನದಟ್ಟಾಗುತ್ತದೆ.

**ಮನೆಯ ತುಂಬಿದಳೆಂದು ಮತ್ತೊಬ್ಬ ಮಾತೆ.**
**ಮನವ ತುಂಬಲೆ ಇಲ್ಲ–ಅವಳನ್ನದಾತೆ!**
**ನೀನಿತ್ತ ಒಲವನ್ನು**
**ಆ ದಿವ್ಯಸುಧೆಯನ್ನು**
**ಪರರಿಂದ ಕಡವಾಗಿ ಪಡೆಯಬಹುದೆ!**
**ದೊರೆಯದಿರೆ ಅದಕಾಗಿ ಕೊರಗಬಹುದೆ!**

ಒಬ್ಬರ ಸ್ಥಾನವನ್ನು ಮತ್ತೊಬ್ಬರು ತುಂಬಲು ಆಗುವುದಿಲ್ಲ. ಮುಖ್ಯವಾಗಿ ತಾಯಿಯ ಸ್ಥಾನವನ್ನು ಯಾರೊಬ್ಬರೂ ಕೂಡ ಭರ್ತಿ ಮಾಡಲಾರರು. ತಾಯಿಯಂತೆ ನೋಡಿಕೊಂಡೆ ಎನ್ನುವವರೇ ವಿನಃ ತಾಯಿಯಾಗಿ ನೋಡಿಕೊಳ್ಳಲಾರರು. ಕಟುವಾದರೂ ಒಪ್ಪಲೇಬೇಕಾದ ವಾಸ್ತವ ಇದು. ಬಹುಶಃ ತಾಯಿ ಸ್ಥಾನವನ್ನು ಯಾರೂ ಕೂಡ ತುಂಬಲಾರರು. ಅದಕ್ಕೆಂದೇ ಜನಪದ ಕವಿ ಉಂಗುರ ಉಡುದಾರ ಮುರಿದಾರ ಮಾಡಿಸಬಹುದು, ಮಡದಿ ಸತ್ತಾರ ತರಬಹುದು ಹೆತ್ತಂತ ತಂದೆ–ತಾಯಿ ಎಲ್ಲಿ ಸಿಕ್ಕಾರ. ಈ ಮಾತು ಕೂಡ ತಾಯಿ–ತಂದೆಯ ಮಹತ್ವವನ್ನು ಸಾರುತ್ತದೆ. ಹಾಗೆಯೇ ಇಲ್ಲಿ ಕವಿ ಮತ್ತೊಬ್ಬ ತಾಯಿಯ ಆಗಮನವಾದರೂ ಅವಳು ನಿನ್ನಂತೆ ಪ್ರೀತಿಯ ಅಮೃತವನ್ನು ಉಳಿಸಲು ಆಗಲಿಲ್ಲ ಎಂದು ತಾಯಿಯ ಹೊರತಾಗಿ ಪ್ರೀತಿಯನ್ನು ಸಾಲವನ್ನಾಗಿ ಪಡೆಯಬಹುದೇ ಅದು ದೊರಕದೇ ಇದ್ದರೆ ಕೊರಗಬಹುದೇ? ಎಂಬ ಪ್ರಶ್ನೆಯನ್ನು ಕೇಳುವ ಮೂಲಕ ತಾಯಿಯ ಪ್ರೀತಿಗೆ ಎಲ್ಲೆ ಎಂಬುದು ಇರಲಾರದು. ಆ ಪ್ರೀತಿಯನ್ನು ಮತ್ತೊಬ್ಬರಿಂದ ನಿರೀಕ್ಷಿಸಲೂ ಆಗದು, ನಿರೀಕ್ಷೆಯು ಪಡಬಾರದೆಂಬ ಬದುಕಿನ ತತ್ವವನ್ನು ಇಲ್ಲಿ ಪ್ರಸ್ತುತಪಡಿಸಿದ್ದಾರೆನ್ನಬಹುದು.

**ನನ್ನ ಗೆಳೆಯರ ಹೆತ್ತತಾಯಿಯರ ಕಂಡು**
**ಅವರ ತಾಯ್ತನದೊಲವನಿನಿತು ಸವಿದುಂಡು ನಾ ನಿನ್ನನೇ ನೆನೆದು**
**ಒಳಗೆ ಕಂಬನಿಗರೆದು ಪ್ರೇಮದಾಹ್ವಾನಕ್ಕೆ ನನ್ನೆದೆಯ ತೆರೆದು**
**ಬಹುಕಾಲ ಕಾದರೂ ನನ್ನೆದೆಯು ಬರಿದು!**

ನಂಬಿ ಕರೆದರೆ ಓ ಎನ್ನನೇ ಶಿವನು ಎಂಬ ಜನನುಡಿಯಂತೆ ಒಂದಲ್ಲ ಒಂದು ರೂಪದಲ್ಲಿ ಆ ದೇವರು ನಮ್ಮ ಕಷ್ಟಕ್ಕೆ ಸ್ಪಂದಿಸುವ ನಮ್ಮ ನೋವಿಗೆ ಕರಗುವ ಕೆಲಸವನ್ನು ಮಾಡುತ್ತಾನೆ. ನೋವಿನಲ್ಲಿಯೂ ನಲಿವನ್ನು ತೋರುವ ಪರೋಕ್ಷ ಸಹಾಯವನ್ನು ನೀಡುತ್ತಾನೆ. ಇಲ್ಲಿಯೂ ಕೂಡ ಕವಿ ತಮ್ಮ ಗೆಳೆಯರ ತಾಯಂದಿರನ್ನು ನೋಡಿ ಅವರ ಪ್ರೀತಿಯ ನೆರಳಿನಲ್ಲಿ ಬದುಕಿದ್ದಾಗಿ ತಿಳಿಸಿದ್ದಾರೆ. ಆ ತಾಯಂದಿರ ಪ್ರೀತಿಯನ್ನು ನೋಡಿದಾಗ ಕವಿಗೆ ಒಳಗೊಳಗೆ ಯಾರೊಂದಿಗೂ ಹಂಚಿಕೊಳ್ಳಲಾಗದ ವೇದನೆಯನ್ನು ಕಣ್ಣೀರಿನ ಮೂಲಕ ಹೊರಹಾಕಿ ತಕ್ಕಮಟ್ಟಿಗಾದರೂ ದುಃಖವನ್ನು ಶಮನ ಮಾಡಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಸ್ನೇಹಿತರ ತಾಯಂದಿರು ತೋರುವ ಪ್ರೀತಿಯಲ್ಲಿ ತಮ್ಮ ನೋವನ್ನು ಮರೆಯುವ ಪ್ರಯತ್ನ ಮಾಡಿದ್ದಾರೆ.

**ಈ ಬಗೆಯ ನೋವಿನಲಿ ಏನೊ ಚೆಲುವುಂಟು**
**ಪರರ ನೋವಿನ ಬಗೆಗೆ ಅನುಕಂಪವುಂಟು**
**ನೋವಿನಲಿ ನಲಿವುಂಟು ನಲಿವಿನಲಿ ನೋವುಂಟು**
**ಎಂಬ ಅನುಭವವಾಗಿ ಬೆಳಕು ಮೂಡುತಿದೆ.**
**ನೋವು ಸೃಷ್ಟಿಯ ಮೂಲ ಎಂದು ತೋರುತಿದೆ.**

ಸೋಲು, ಅವಮಾನ, ನೋವು ಕಲಿಸಿಕೊಡುವ ಪಾಠವನ್ನು ಬೇರೆ ಯಾರು ಕೂಡ ಕಲಿಸಲಾರರು. ಮುಳ್ಳುಗಳು ಇದ್ದಾಗಲೇ ಗುಲಾಬಿಗೊಂದು ಬೆಲೆ ನೋವುಗಳಿದ್ದಾಗಲೇ ಮನುಷ್ಯನಿಗೊಂದು ನೆಲೆ. ನಲಿವಿನೊಂದಿಗೆ ನೋವು, ಸೋಲಿನೊಂದಿಗೆ ಗೆಲುವು, ಸುಖದೊಂದಿಗೆ ದುಃಖ ಇದು ಸೃಷ್ಟಿಯ ನಿಯಮ. ಇದನ್ನರಿತಾಗಲೇ ಮನುಷ್ಯನ ಬಾಳಿಗೊಂದು ಅರ್ಥ ಬರಲು ಸಾಧ್ಯ. ಇಲ್ಲಿಯೂ ಕವಿಗೆ ತನ್ನ ನೋವಿನಲ್ಲೂ ಕೂಡ ಚೆಲುವೊಂದು ಕಾಣಿಸಿದೆ. ಆ ನೋವು ಕೂಡ ನಲಿವನ್ನುಂಟು ಮಾಡಿದೆ. ನಲಿವಿನಲ್ಲೂ ನೋವು ಉಂಟು ಎಂಬ ಅನುಭವ ಬೆಳಕಿನ ಮೂಲಕ ಮೂಡುತ್ತಿದೆ. ಸೃಷ್ಟಿಯ ಮೂಲದಲ್ಲಿಯೇ ನೋವು ಅಡಗಿದೆ ಎಂಬ ಸತ್ಯ ತೋರುತ್ತಿದೆ ಎನ್ನುವ ಮೂಲಕ ನೋವಿಲ್ಲದ ನೆಲೆ ಎಲ್ಲಿಯೂ ಇರಲಾರದು ಎಂಬ ವಾಸ್ತವತೆಯನ್ನು ಸಾಬೀತುಪಡಿಸಿದಂತಿದೆ. ನೋವಿನೊಳಗೆ ಅಡಗಿರುವ ನಲಿವನ್ನು ಹುಡುಕುವ ಪ್ರಯತ್ನ ಇಲ್ಲಿ ನಡೆದಿದೆ ಎಂದು ಊಹಿಸಬಹುದು.

**ಇಂದಿಗೂ ಒಮ್ಮೊಮ್ಮೆ ತಾಯಿ ಮಕ್ಕಳ ಕಂಡು**
**ಕಳೆದ ಬಾಲ್ಯದ ಚೆಲುವ ಮನದಿ ಮೂಡಿಸಿಕೊಂಡು**
**ಸವಿಯುವೆನು ನಾನು, ಮತ್ತೊಮ್ಮೆ ನೀನು ನಿನ್ನ ತೊಡೆಯೊಳಗಿಟ್ಟು**
**ಹಾಲೂಡುವಂತೆ ಕನಸು ಬೀಳುವುದೆನಗೆ–ಅತಿ ಮಧುರ ಚಿಂತೆ!**

ಕಾಲವೇ ಚಂಚಲ ಮನಸ್ಸಿನಂತೆ. ಬಾಲ್ಯದಲ್ಲಿದ್ದಾಗ ದೊಡ್ಡವರಾಗಬೇಕೆಂಬ ಚಿಂತೆ, ದೊಡ್ಡವರಾದಾಗ ಬಾಲ್ಯವೇ ಸುಂದರವಾಗಿತ್ತು ಎಂಬ ಭಾವ. ಸಮಯದ ಕೈ ಗೊಂಬೆಗಳಾಗಿರುವ ನಮಗೆ ಮತ್ತೆ ಬಾಲ್ಯಕ್ಕೆ ಹಿಂತಿರುಗಲು ಸಾಧ್ಯವಿಲ್ಲ. ಆದರೆ ನೆನಪುಗಳಲ್ಲಿ ಬಾಲ್ಯದ ಕ್ಷಣಗಳನ್ನು ಮೆಲುಕು ಹಾಕುವ ಪ್ರಯತ್ನ ನಡೆಯುತ್ತಲೇ ಇರುತ್ತದೆ. ಇಲ್ಲಿಯೂ ಕೂಡ ಕವಿಗೆ ತಾಯಿಯನ್ನು ಮಕ್ಕಳನ್ನು ನೋಡಿದಾಗ ತಾವು ಕಳೆದ ಬಾಲ್ಯದ ಚಿತ್ರಣ ನೆನಪಾಗುತ್ತದೆ ಇದ್ದಷ್ಟು ಕಾಲ ತನ್ನ ತಾಯಿಯೊಂದಿಗೆ ಕಳೆದ ಸುಮಧುರ ಕ್ಷಣಗಳು ನೆನಪಾಗುತ್ತದೆ. ಮೊಲೆ ಉಣಿಸಿ ಬೆಳೆಸಿದ ತನ್ನ ತಾಯಿಯ ನೆನಪು ಕನಸಿನ ರೂಪದಲ್ಲಿ ಅತಿ ಮಧುರವಾದ ಚಿಂತೆಯ ರೂಪದಲ್ಲಿ ಮತ್ತೆ ಮತ್ತೆ ಮರುಕಳಿಸಿ ಬರುತ್ತದೆ ಎನ್ನುವ ಮೂಲಕ ತಾಯಿಯ ನೆನಪನ್ನು ಮರೆಯಲಾಗದು ಎಂಬ ನಿಜವನ್ನು ವ್ಯಕ್ತಪಡಿಸಿದ್ದಾರೆ.

**ತಾಯೊಲವೆ ತಾಯೊಲವು ಈ ಲೋಕದೊಳಗೆ**
**ಕಡಲಿಂಗೆ ಕಡಲಲ್ಲದುಂಟೆ ಹೋಲಿಕೆಗೆ! ಓ ಅಮೃತಪ್ರೇಮವೇ**
**ಓ ಮಾತೃರೂಪವೇ ತೀರಲಾರದ ತೃಷೆಗೆ ಮರುಜನ್ಮ ಬೇಕು**
**ಮತ್ತೊಮ್ಮೆ ಶಿಶುವಾಗಿ ನಾ ನಲಿಯಬೇಕು.**

ಬೆಲೆ ಕಟ್ಟಲಾಗದ್ದು, ಋಣ ತೀರಿಸಲಾಗದ್ದು ಎಂದರೆ ಅದು ಅಮ್ಮನ ಪ್ರೀತಿಗೆ, ತ್ಯಾಗಕ್ಕೆ ಮಾತ್ರ. ತಾಯಿಯ ಪ್ರೀತಿಗೆ ಕೊನೆ ಎಂಬುದೇ ಇರುವುದಿಲ್ಲ. ಕಡಲಿನಂತೆ ಮತ್ತೆ ಉಕ್ಕಿ ಉಕ್ಕಿ ಬರುವ ಅಮೃತಮಯ ಪ್ರೇಮ ಸ್ವರೂಪವೇ ತಾಯಿಯ ಪ್ರತಿರೂಪವಾಗಿರುತ್ತದೆ. ಇಲ್ಲಿಯೂ ಕೂಡ ಕವಿ, ತಾಯಿಯ ಪ್ರೀತಿಯನ್ನು ಈ ಲೋಕದೊಳಗೆ ಯಾವ ಹೋಲಿಕೆಗೂ ನಿಲುಕದ್ದು ಎಂಬುದನ್ನು ತಿಳಿಸಿದ್ದಾರೆ. ಹೇಗೆ ಕಡಲಿಗೆ ಕಡಲಲ್ಲಿ ಹೋಲಿಕೆ ಮಾಡಲು ಸಾಧ್ಯವಿಲ್ಲವೋ ಹಾಗೆಯೇ ತಾಯಿಯ ಪ್ರೀತಿಗೆ ಈ ಲೋಕದಲ್ಲಿಯೇ ಹೋಲಿಕೆ ಮಾಡಲು ಸಾಧ್ಯವಿಲ್ಲ ಎಂದು ಅಮೃತಪ್ರೇಮದ ಪ್ರತಿರೂಪವಾಗಿರುವ ಮಾತೆಯನ್ನು ತೀರಲಾಗದ ಬಾಯಾರಿಕೆಯಂತಿರುವ ಅಮ್ಮನನ್ನು ಮತ್ತೆ ಕಾಣಬೇಕೆಂಬ ತವಕ ಕವಿಯಲ್ಲಿ ಮನೆ ಮಾಡಿದೆ. ಅದಕ್ಕಾಗಿ ತಮಗೆ ಮರುಜನುಮಬೇಕೆಂದು ಶಿಶುವಾಗಿ ನಾನು ತಾಯಿಯ ಪ್ರೇಮವನ್ನು ಸವಿಯಬೇಕೆಂದು ಪರಿತಪಿಸಿದ್ದಾರೆ.

ಹೀಗೆ ಜನ್ಮದಾತೆಯನ್ನು ಆಕೆಯ ಮಹತ್ವವನ್ನು ಮೇರು ವ್ಯಕ್ತಿತ್ವವಾಗಿ ರೂಪಿಸಿ, ಅಗಲಿಕೆ ಭಾವುಕತೆಯಲ್ಲಿ ಉಂಡ ನೋವನ್ನು, ಅನುಭವಿಸಿದ ಯಾತನೆಯನ್ನು ಕವಿತ್ವದಲ್ಲಿ ಜೀವತಳೆಸಿದ ಕವಿಯ ಮನಸ್ಸು ಎಂದಿಗೂ ಅಜರಾಮರ.

# ಮೈಸೂರಲ್ಲಿ ವಾಯುಮಾಲಿನ್ಯ ನಿಯಂತ್ರಣ ಜಾಗೃತಿ ಜಾಥಾ

## ಎಲೆಕ್ಟ್ರಿಕಲ್ ವಾಹನ ಉಪಯೋಗಿಸಿ, ವಾಯುಮಾಲಿನ್ಯ ತಪಾಸಣೆ ನಡೆಸಿ, ಇಂಜಿನ್ ಆಯಿಲ್ ಬದಲಾಯಿಸಿ ಎಂದು ಜಾಗೃತಿ

ಮೈಸೂರು, ಮಾ.6(ಜಿಎ)–35ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸದ ಅಂಗವಾಗಿ ಮೈಸೂರು ಜಂಟಿ ಸಾರಿಗೆ ಆಯುಕ್ತರ ಕಚೇರಿ ವತಿಯಿಂದ ವಾಯುಮಾಲಿನ್ಯ ನಿಯಂತ್ರಣ ಜಾಗೃತಿ ಜಾಥಾವನ್ನು ಬುಧವಾರ ನಡೆಸಲಾಯಿತು.




ನಗರದ ಆರ್‌ಟಿಓ ಕಚೇರಿ ಮುಂಭಾಗದಿಂದ ವಿವಿಧ ಪೇಕಾರ್ಡ್‌ಗಳನ್ನು ಹಿಡಿದಿದ್ದ ಸಿಬ್ಬಂದಿ ಎಂ.ಜಿ.ರಸ್ತೆ ಮೂಲಕ ಸಾಗಿ ನ್ಯಾಯಾಲಯ ಮುಂಭಾಗವಿರುವ ಗಾಂಧಿ ಪ್ರತಿಮೆ ಸುತ್ತಿ ಆರ್‌ಟಿಓ ಕಚೇರಿಗೆ ಮರಳಿದರು. ಈ ವೇಳೆ ವಾಯುಮಾಲಿನ್ಯ ನಿಯಂತ್ರಿಸಲು ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮ ಮತ್ತು ವಾಯುಮಾಲಿನ್ಯದಿಂದ ಮಾನವನ ಮೇಲೆ ಬೀರುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಿದರು. ಪ್ರಮುಖವಾಗಿ ಪರಿಸರ ಸ್ನೇಹಿ ಎಲೆಕ್ಟ್ರಿಕಲ್ ವಾಹನಗಳನ್ನು ಉಪಯೋಗಿಸಬೇಕು. ಕಾಲಕಾಲಕ್ಕೆ ವಾಹನಗಳ ವಾಯುಮಾಲಿನ್ಯ ತಪಾಸಣೆ ಮತ್ತು ವಾಹನಗಳ ಇಂಜಿನ್ ಆಯಿಲ್ ಬದಲಾಯಿಸಬೇಕು. ಸಮೂಹ ಸಾರಿಗೆ ಬಳಸುವುದು ಸೇರಿದಂತೆ ವಿವಿಧ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿಸಿ, ವಾಯುಮಾಲಿನ್ಯದಿಂದ ಕಣ್ಣು ದೃಷ್ಟಿ ಮಂಜಾಗುವಿಕೆ, ಮಕ್ಕಳಲ್ಲಿ ಮಾನಸಿಕ ದುರ್ಬಲತೆ ಮತ್ತು ಬುದ್ಧಿ ಮಾಂದ್ಯತೆ, ಶ್ವಾಸಕೋಶದ ಕ್ಯಾನ್ಸರ್ ಅನೇಕ ಆರೋಗ್ಯ ಸಮಸ್ಯೆಗಳು ಎದುರಾಗಲಿವೆ ಎಂದರು. ಆರ್‌ಟಿಓಗಳಾದ ದೇವಿಕಾ, ಷಫೀ ಉದ್ದೀನ್, ಸಿಬ್ಬಂದಿಗಳಾದ ಸಿ.ಟಿ.ಮೂರ್ತಿ, ಮಂಜುನಾಥ್, ಲಕ್ಷ್ಮಿಕಾಂತ್ ಇದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ ಗುರುವಾರ 7 ಮಾರ್ಚ್ 2024

# ‘ಅಸ್ಪೃಶ್ಯತೆ ಅಳಿಯಲಿ ಮನುಷ್ಯತ್ವ ಉಳಿಯಲಿ’ ವಿಚಾರ ಸಂಕಿರಣ

ಮೈಸೂರು, ಮಾ.6(ಜಿಎ)– ದಲಿತ ಸಂಘರ್ಷ ಸಮಿತಿ(ಸಂಯೋಜಕ)ಯ ಜಿಲ್ಲಾ ಘಟಕದಿಂದ ಮಾ.10ರಂದು ಬೆಳಿಗ್ಗೆ 11 ಗಂಟೆಗೆ ನಗರದ ಪುರಭವನದಲ್ಲಿ ಬಸವಣ್ಣ, ಅಂಬೇಡ್ಕರ್ ಹಾಗೂ ಕುವೆಂಪು ಆಶಯದ ‘ಅಸ್ಪೃಶ್ಯತೆ ಅಳಿಯಲಿ ಮನುಷ್ಯತ್ವ ಉಳಿಯಲಿ’ ಎಂಬ ಶೀರ್ಷಿಕೆಯಡಿ ಜಿಲ್ಲಾ ಮಟ್ಟದ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಸಮಿತಿ ರಾಜ್ಯ ಸಂಯೋಜಕ ದೇವಗಳ್ಳಿ ಸೋಮಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಚಾರ ಸಂಕಿರಣವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟಿಸುವರು. ಸಚಿವ ಸತೀಶ್ ಜಾರಕಿಹೊಳಿ, ಆಶಯ ಭಾಷಣ ಮಾಡಲಿದ್ದಾರೆ. ಸಮಿತಿ ರಾಜ್ಯ ಸಂಸ್ಥಾಪಕ ಸಂಯೋಜಕ ವಿ.ನಾಗರಾಜು ಅಧ್ಯಕ್ಷತೆ ವಹಿಸಲಿದ್ದು, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ ಎಂದರು.

ವಿಚಾರ ಸಂಕಿರಣದಲ್ಲಿ ಚಿಂತಕ ಎಸ್.ತುಕಾರಾಮ್ ಅವರಿಂದ 'ಸರ್ವರಿಗೂ ಸಾಮಾಜಿಕ ನ್ಯಾಯ ಸರ್ವ ಧರ್ಮ ಸಮನ್ವಯತೆ: ಬಿ.ಆರ್.ಅಂಬೇಡ್ಕರ್' ವಿಚಾರ ಮಂಡನೆ ಮಾಡಲಿದ್ದಾರೆ. ವಿಚಾರವಾದಿ ಎಲ್.ಎನ್.ಮುಕುಂದರಾಜು ಅವರಿಂದ 'ಜಾತಿ ವಿನಾಶ ಹಾದಿಯಲ್ಲಿ ಕುವೆಂಪುರವರ ಸರ್ವ ಜನಾಂಗದ ಶಾಂತಿಯ ತೋಟ: ಪರಿಕಲ್ಪನೆ ಮತ್ತು ಪ್ರಸ್ತುತತೆ' ವಿಷಯ ಹಾಗೂ ವಿಚಾರವಾದಿ ಎಸ್.ಶಿವರಾಜಪ್ಪ ಅವರಿಂದ 'ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿ ನಿರ್ಮೂಲನೆ: ಬಸವಣ್ಣನವರ ಆಶಯಗಳು' ವಿಷಯದಲ್ಲಿ ಗೋಷ್ಠಿಗಳು ನಡೆಯಲಿವೆ. ಸಮಾರೋಪದಲ್ಲಿ ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಭಾಷಣ ಮಾಡುವರು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಜಿಲ್ಲಾ ಸಂಯೋಜಕ ಕಾರ್ಯ ಬಸವಣ್ಣ, ಜಿಲ್ಲಾ ಮುಖಂಡ ಬೆಲವತ್ತ ರಾಮಚಂದ್ರ, ಕೆ.ಆರ್.ನಗರ ಉಸ್ತುವಾರಿ ಅರ್ಜುನಳ್ಳಿ ಕಾಂತರಾಜು, ಮುಖಂಡರಾದ ಮಂಜುನಾಥ ಮುರುಡಗಳ್ಳಿ, ಪ್ರಸನ್ನ ತಳೂರು, ಗಂಗಾಧರ ಹೈವೆ ಉಪಸ್ಥಿತರಿದ್ದರು.

# ಮರಕ್ಕೆ ನೇಣು ಬಿಗಿದುಕೊಂಡು ಯುವಕ ಆತ್ಮಹತ್ಯೆ

ಮೈಸೂರು,ಮಾ.6(ಆರ್‌ಕೆ)–ಮಾನಸಿಕ ಖಿನ್ನತೆಗೊಳಗಾಗಿದ್ದ ಯುವಕ ನೋರ್ವ ಮೈಸೂರಿನ ಬಿಇಎಂಎಲ್ ಲೇಔಟಿನ ಪಾರ್ಕ್‌ನಲ್ಲಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿ ರುವ ಘಟನೆ ಇಂದು ಬೆಳಗ್ಗೆ ಸಂಭವಿಸಿದೆ.

ಮೈಸೂರು ತಾಲೂಕು ಮಾರ್ಬಳ್ಳಿ ಗ್ರಾಮದ ಚಾಮರಾಜ್ ಅವರ ಮಗ ವೃಷಬೇಂದ್ರ (21) ನೇಣಿಗೆ ಶರಣಾದ ಯುವಕ. ಕಳೆದ ಕೆಲವು ವರ್ಷದಿಂದ ಮೈಮೇಲೆ ದೆವ್ವ ಬಂದಂತೆ ನರಳುತ್ತಿದ್ದ ಆತನಿಗೆ ಹಲವು ಕಡೆ ಪೂಜೆ ಮಾಡಿಸಿ ದರೂ ಪ್ರಯೋಜನವಾಗಿರಲಿಲ್ಲ. ಮಾನಸಿಕ ಖಿನ್ನತೆಗೊಳಗಾಗಿದ್ದು ಇಂದು ಮುಂಜಾನೆ ಮೈಸೂರಿನ ಶ್ರೀರಾಂಪುರ ಬಳಿಯ ಬಿಇ ಎಂಎಲ್ ಬಡಾವಣೆ ಪಾರ್ಕ್‌ನಲ್ಲಿ ಹೊಂಗೆ ಮರಕ್ಕೆ ನೇಣು ಬಿಗಿದುಕೊಂಡು ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಕುವೆಂಪುನಗರ ಠಾಣೆ ಪೊಲೀಸರು ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.



# ಕಾಂಗ್ರೆಸ್‌ಗೆ ನೇಮಕ

ಮೈಸೂರು,ಮಾ.6– ಮೈಸೂರಿನ ಚಾಮರಾಜ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಮಂಚೇಗೌಡನಕೊಪ್ಪಲು ರವಿ ಅವರು ನೇಮಕವಾಗಿದ್ದಾರೆ. ಶಾಸಕ ಕೆ. ಹರೀಶ್ ಗೌಡ ಅವರು ಇಂದು ನೇಮಕಾತಿ ಪತ್ರ ಹಸ್ತಾಂತರಿಸಿದರು.

## ಮಾಂಡವ್ಯ ವಲಯ ಅಂತರ್ ಕಾಲೇಜು ಪಂದ್ಯಾವಳಿಯಲ್ಲಿ

# ಡಿ.ಪಾಲ್ ಕಾಲೇಜು ಚಾಂಪಿಯನ್



ವಿಜೇತ ತಂಡವನ್ನು ಅಭಿನಂದಿಸಿದ ಕಾಲೇಜು ಆಡಳಿತ ಮಂಡಳಿ.

ಮೈಸೂರು, ಮಾ.6–ಮಾಂಡವ್ಯ ವಲಯ ಅಂತರ ಕಾಲೇಜು ಫುಟ್ಬಾಲ್, ಹಾಕಿ, ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಮೈಸೂರಿನ ಡಿ.ಪಾಲ್ ಕಾಲೇಜು ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಪುರುಷರ ಫುಟ್ಬಾಲ್ ಪಂದ್ಯಾವಳಿಯಲ್ಲಿ ಡಿ.ಪಾಲ್ ಕಾಲೇಜು ತಂಡ ಮಂಡ್ಯದ ಪಿಇಎಸ್ ಕಾಲೇಜು ತಂಡವನ್ನು 3–0 ಅಂತರದಿಂದ ಮಣಿಸಿ 2024ರ ಸಾಲಿನ ಮಾಂಡವ್ಯ ವಲಯದ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ಪುರುಷರ ಹಾಕಿ ಪಂದ್ಯಾವಳಿಯಲ್ಲಿ ಪಿ.ಇ.ಎಸ್ ಕಾಲೇಜನ್ನು ಮಣಿಸುವುದರ ಮೂಲಕ ಡಿ.ಪಾಲ್ ಕಾಲೇಜು ಹಾಕಿ ತಂಡ ಚಾಂಪಿಯನ್ ಪಟ್ಟವನ್ನು ಪಡೆಯಿತು. ಮಾಂಡವ್ಯ ವಲಯ ಅಂತರ ಕಾಲೇಜು ಪುರುಷರ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಡಿ.ಪಾಲ್ ಕಾಲೇಜು ಪುರುಷರ ತಂಡ ಪಿಇಎಸ್ ಕಾಲೇಜು ತಂಡವನ್ನು ಸೋಲಿಸಿ ಚಾಂಪಿಯನ್ ಪಟ್ಟ ಪಡೆದುಕೊಂಡಿದ್ದು, ಮಾಂಡವ್ಯ ವಲಯ ಅಂತರ ಕಾಲೇಜು ಮಹಿಳೆಯರ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಡಿ.ಪಾಲ್ ಕಾಲೇಜು ಮಹಿಳಾ ತಂಡ ಪಿಇಎಸ್ ಕಾಲೇಜು ತಂಡವನ್ನು ಸೋಲಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಫುಟ್ಬಾಲ್, ಹಾಕಿ, ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಗೆದ್ದ ಆಟಗಾರರನ್ನು ಕಾಲೇಜಿನ ಪ್ರಾಂಶುಪಾಲ ರೆಡಾ.ಬೈಜು ಅಂತೋಣಿ ಸಿ.ಎಂ, ಉಪಪ್ರಾಂಶುಪಾಲ ರೆ.ಜಾಯ್ ತುರುತ್ತೆಲ್, ಡೀನ್ ರೆ.ಡಾ.ಶಿಜೋ ಅಂತೋಣಿ, ಕ್ರೀಡಾ ತರಬೇತುದಾರ ಏಂಜಲಿನ್ ಮೇರಿ ಪ್ರಾನ್ಸಿಸ್, ಜಾನ್ ಹೋಲ್ಸೆಟ್, ಅಧ್ಯಾಪಕ ವೃಂದದವರು ಅಭಿನಂದಿಸಿದ್ದಾರೆ.

# ಅನ್ನಪೂರ್ಣಗೆ ಪಿಎಚ್.ಡಿ



ಮೈಸೂರು,ಮಾ.6–ಡಾ.ಬಿ.ಪಿ.ಆಶಾಕುಮಾರಿ ಮಾರ್ಗದರ್ಶನದಲ್ಲಿ ಕೆ.ಹೆಚ್.ಅನ್ನಪೂರ್ಣ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ವಿಜಯಾ ಸುಬ್ಬರಾಜ್ ಅವರ ಸಾಹಿತ್ಯ (ಕನ್ನಡ ಕೃತಿಗಳನ್ನು ಅನುಲಕ್ಷಿಸಿ)' ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

# ನಾಳೆ ಮೈಸೂರಿನಾದ್ಯಂತ ಮಹಾಶಿವರಾತ್ರಿ ವಿಶೇಷ ಕಾರ್ಯಕ್ರಮ

ಮೈಸೂರು,ಮಾ.6–ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮಾರ್ಚ್ 8 ಶುಕ್ರವಾರದಂದು ಮಹಾ ಶಿವರಾತ್ರಿಯ ವಿಶೇಷ ಕಾರ್ಯಕ್ರಮಗಳು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಯಲ್ಲಿ ಬೆಳಗ್ಗೆ ನಂತರ ಸಂಜೆ 6ರಿಂದ ಬೆಳಗಿನ ಜಾವ 6ರವರೆಗೆ 4 ಜಾವಗಳಲ್ಲಿ ವಿಶೇಷ ಪೂಜೆಗಳು ನಡೆಯಲಿದೆ. ಶ್ರೀ ಮಹದೇಶ್ವರ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ ನಡೆಯಲಿದೆ. ಸಂಜೆ 7ಕ್ಕೆ ಶಿವದೀಕ್ಷೆ ರಾತ್ರಿ 9.30ಕ್ಕೆ ಬೆಳ್ಳಿರಥ ಪ್ರಾಕಾರೋತ್ಸವ ಇರುತ್ತದೆ. ಶ್ರೀ ನಂಜುಂಡೇಶ್ವರ ದೇವಸ್ಥಾನಕ್ಕೆ ಹೊಸಕೋಟೆಯ ಎಚ್.ಎಸ್. ರಾಘವೇಂದ್ರರಾವ್ ಮತ್ತು ಕುಟುಂಬದವರು ಬಾಗಿಲುವಾಡ ಮತ್ತು ಬಾಗಿಲುಗಳಿಗೆ ಬೆಳ್ಳಿ ಕವಚವನ್ನು ಸಮರ್ಪಿಸಲಾಗುವುದು. ಗದ್ದುಗೆಯ ಆವರಣದಲ್ಲಿ ಸಂಜೆ 5.30ಕ್ಕೆ ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾತ್ರಿ 8ಕ್ಕೆ ಮೈಸೂರಿನ ಆರ್.ಟಿ.ನಗರದ ಋತ್ವಿಕ್ ಸಿ.ರಾಜ್ ಬಿ.ಎಡ್. ಕಾಲೇಜು ಮತ್ತು ತಂಡದವರಿಂದ ಭಕ್ತಿಗಾಯನ, ರಾತ್ರಿ 10ಕ್ಕೆ ಜೆಎಸ್‌ಎಸ್ ವಿದ್ಯಾರ್ಥಿಗಳಿಂದ ಭೂಕೈಲಾಸ ನಾಟಕ, ರಾತ್ರಿ 11ಕ್ಕೆ ಡಾ.ಲಕ್ಷ್ಮಣ್‌ದಾಸ್‌ಶಾಸ್ತ್ರಿರವರಿಂದ ಶಿವಕಥಾ ಸಂಕೀರ್ತನೆ, ರಾತ್ರಿ 1ಕ್ಕೆ ಮೈಸೂರಿನ ನಾದಲಹರಿ ತಂಡದವರಿಂದ ಭಕ್ತಿಸುಧೆ, ರಾತ್ರಿ 3ಕ್ಕೆ ರಾಮ ಸಮುದ್ರದ ಸಿದ್ದಪ್ಪಾಜಿ ನೀಲಗಾರರ ಸಂಘದವರಿಂದ ಮಾದೇಶ್ವರ ಕಥನ, ಪ್ರಾತಃಕಾಲ 5ಕ್ಕೆ ಹೊರಳವಾಡಿಯ ಶ್ರೀ ಬಸವೇಶ್ವರ ಭಜನಾ ತಂಡದವರಿಂದ ಭಜನೆ ಕಾರ್ಯಕ್ರಮಗಳು ನಡೆಯಲಿವೆ.

ಶನಿವಾರ ಬೆಳಗ್ಗೆ ಶ್ರೀಮಠ ಮತ್ತು ಕರ್ತೃಗದ್ದುಗೆಯಲ್ಲಿ, ಶುಕ್ರವಾರ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ವಿವಿಧ ಭಜನಾ ತಂಡಗಳಿಂದ ಅಖಂಡ ಭಜನೆ ಇರುತ್ತದೆ ಎಂದು ಮಹಾ ಶಿವರಾತ್ರಿ ಸಂಚಾಲಕ ಎಸ್.ಶಿವಕುಮಾರಸ್ವಾಮಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶ್ರೀ ಶಂಕರೇಶ್ವರಸ್ವಾಮಿ ದೇವಸ್ಥಾನದಲ್ಲಿ ನಾಳೆ ಶಿವರಾತ್ರಿ ಉತ್ಸವ

ಮೈಸೂರು ತಾಲೂಕು, ಕೆ.ಹೆಮ್ಮನಹಳ್ಳಿಯ ಶ್ರೀ ಶಂಕರೇಶ್ವರ ಸ್ವಾಮಿ ಹಾಗೂ ಶ್ರೀ ಶಂಕರ ನಾರಾಯಣ ದೇವಸ್ಥಾನಗಳಲ್ಲಿ ಮಾ.8ರಂದು 49ನೇ ವರ್ಷದ ಶಿವರಾತ್ರಿ ಮಹೋತ್ಸವವನ್ನು ಆಯೋಜಿಸಲಾಗಿದೆ. ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಮಾಜಿ ಜಿಪಂ ಸದಸ್ಯ ಮರಿಜೋಗೇಗೌಡ, ಗ್ರಾಮದ ಮುಖಂಡರು ಹಾಗೂ ಭಕ್ತಾದಿಗಳು ಭಾಗವಹಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಶ್ರೀಭೋಗೇಶ್ವರ ಶ್ರೀಸಪ್ತಮಾತೃಕಾ ಹಿರಿದೇವಮ್ಮ ದೇವಸ್ಥಾನ



ಮೈಸೂರು, ಮಾ. 6– ಮೈಸೂರಿನ ಬೋಗಾದಿ ರಿಂಗ್ ರಸ್ತೆಯಲ್ಲಿರುವ ಪುರಾಣ ಪ್ರಸಿದ್ಧ ಶ್ರೀಕ್ಷೇತ್ರ ಶ್ರೀ ಭೋಗೇಶ್ವರ ಶ್ರೀ ಸಪ್ತ ಮಾತೃಕಾ ಹಿರಿದೇವಮ್ಮ ದೇವಸ್ಥಾನದಲ್ಲಿ ಮಾ.8ರಂದು ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ನಡೆಯಲಿದೆ.

ಬೆಳಗ್ಗೆ 5 ಗಂಟೆಯಿಂದ ಸಂಕಲ್ಪ, ರುದ್ರಾಭಿಷೇಕ, ಪಂಚಾಮೃತ, ಅಭಿಷೇಕ, ಶಿವಸಹಸ್ರನಾಮಾರ್ಚನೆ, ಅಷ್ಟೋತ್ತರ ಹಾಗೂ ದಿನಮೂರ್ತಿ ಭಸ್ಮಾರ್ಚನೆ–ರುದ್ರಾಭಿಷೇಕ, ಶಿವ ಪಂಚಾಕ್ಷರಿ, ತ್ರಿಶತಿ ಹೋಮ, ಪೂರ್ಣಾಹುತಿ ಹಾಗೂ 4ರಿಂದ ಪೂಜೆ ರಾತ್ರಿ 6 ಗಂಟೆ, 9 ಗಂಟೆ, 12 ಗಂಟೆ, ಮಧ್ಯರಾತ್ರಿ 3 ಗಂಟೆಗೆ ವಿಶೇಷ ಪೂಜಾ ಸೇವೆ ನಡೆಯಲಿದೆ.

ಬೆಳಗ್ಗೆ 7ರಿಂದ 9ರವರೆಗೆ ಶ್ರೀಮತಿ ಅಶ್ವಿನಿಗೌಡ ತಂಡದವರಿಂದ ಸುಗಮ ಸಂಗೀತ, ಬೆಳಗ್ಗೆ 9ರಿಂದ ಅಮೃತ ಭಜನೆ ಮಂಡಳಿ, ಕಾತ್ಯಾಯಿನಿ ತಂಡದವರಿಂದ ದೇವರನಾಮ, ಭಕ್ತಿಗೀತೆ, ಬೆಳಗ್ಗೆ 10ರಿಂದ ಪದ್ಮಪಾಂಡೆ ತಂಡದವರಿಂದ ಭಜನೆ, ಬೆಳಗ್ಗೆ 11ರಿಂದ ಶ್ರೀರಾಮ್, ಜಗದೀಶ್ ಕಲಾತಂಡದಿಂದ ಕಾರ್ಯಕ್ರಮ, ಮ. 1ರಿಂದ ಶ್ರೀಕರ ಹರಿದಾಸ್ ಭಜನೆ ಮಂಡಳಿಯವರಿಂದ ಭಕ್ತಿಗೀತೆ, ಮ. 2ರಿಂದ ಹುನುಗೂಡು ಹೆಚ್.ಕೆ.ರವೀಂದ್ರ, ಪಾಟೀಲ್ ತಂಡದವರಿಂದ ದೇವರನಾಮ ಭಕ್ತಿಗೀತೆ, ಸಂಜೆ 4.30ರಿಂದ ಪ್ರತೀಕ್ಷ ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸುಗಮ ಸಂಗೀತ, ಸಂಜೆ 6ರಿಂದ ಭರತನಾಟ್ಯ ಕಾರುಣ್ಯ ಕಲಾ ಕೇಂದ್ರದವರಿಂದ ಭರತನಾಟ್ಯ, ರಾತ್ರಿ 6.30ರಿಂದ ಕರ್ನಾಟಕ ಸಂಗೀತ ಮತ್ತು ಮುದ್ರ ಡ್ಯಾನ್ಸ್ ವಿದುಷಿ ಸ್ವರ್ಣಲತಾ ಶಾಸ್ತ್ರೀ ಅವರಿಂದ ಭರತನಾಟ್ಯ, ರಾತ್ರಿ 7ರಿಂದ ವಿದುಷಿ ಹರ್ಷಿತ ತಂಡದವರಿಂದ ಭರತನಾಟ್ಯ, ರಾತ್ರಿ 7.30ರಿಂದ ಶ್ವೇತಸ್ವಾಮಿನಾಥನ್ ಅವರಿಂದ ಭರತನಾಟ್ಯ, ರಾತ್ರಿ 8ರಿಂದ ಲಾಸ್ಯ ರಂಜನ್ ಸ್ಕೂಲ್ ಡ್ಯಾನ್ಸ್, ವಿದುಷಿ ಜ್ಯೋತಿ ಎನ್.ಹೆಗ್ಗಡೆ ಅವರಿಂದ ನೃತ್ಯ ರೂಪಕ ಭರತ ನಾಟ್ಯ, ರಾತ್ರಿ 10ರಿಂದ ಜನಪದ ಗೀತೆ, ಕಂಸಾಳೆ, ತಂಬೂರಿ ತತ್ವಪದ, ದೊಡ್ಡರಾಜಪ್ಪ ಬಸವನಹಳ್ಳಿ.

## ಕೆ.ಹೆಮ್ಮನಹಳ್ಳಿಯಲ್ಲಿ ಶ್ರೀಮಹಾಲಿಂಗೇಶ್ವರ ದೇವಾಲಯ

ಮೈಸೂರು, ಮಾ. 6– ಮೈಸೂರು ತಾಲೂಕಿನ ಬೋಗಾದಿ ರಸ್ತೆಯಲ್ಲಿರುವ ಪುರಾತನ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಮಹಾಶಿವರಾತ್ರಿ ಪ್ರಯುಕ್ತ 30ನೇ ಜಾತ್ರಾ ಮಹೋತ್ಸವವು ಮಾ. 8 ರಂದು ನಡೆಯಲಿದೆ.

ಬೆಳಗ್ಗೆಯಿಂದ ಪ್ರತಿ ಆರು ಗಂಟೆಗೊಂದರಂತೆ ರುದ್ರಾಭಿಷೇಕ, ಅಲಂಕಾರ, ಪ್ರಸಾದ ವಿತರಿಸಲಾಗುವುದು. ಬೆಳಗ್ಗೆ 10ಕ್ಕೆ ಗ್ರಾಮೀಣ ಮಕ್ಕಳು, ಹಿರಿಯರಿಂದ ಜನಪದ ಗೀತೆ, ನೃತ್ಯ, ರಂಗಗೀತೆ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ರಾತ್ರಿ 7ಕ್ಕೆ 'ಭಗೀರಥ' ಪೌರಾಣಿಕ ನಾಟಕದ ಪುಸ್ತಕದ ಲೋಕಾರ್ಪಣೆ ಹಾಗೂ ಗ್ರಾಮೀಣ ರಂಗ ಪ್ರತಿಭೆಗಳಾದ ಚಾಮಶೆಟ್ಟಿ, ವರದರಾಜು (ಅಂಧ ಕಲಾವಿದ) ಮತ್ತು ಆರ್. ಮಂಜುನಾಥ ಅವರನ್ನು ಸನ್ಮಾನಿಸಲಾಗುವುದು. ನಂತರ ಹೆಮ್ಮರಗಾಲದ ಶ್ರೀ ಮಲ್ಲಿಕಾರ್ಜುನ ಡ್ರಾಮಾ ಸೀನರಿಯಿಂದ ಹೆಮ್ಮನಹಳ್ಳಿಯ ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿಯ ಕಲಾವಿದರಿಂದ ಬೇಳ್ಳಾವೆ ನರಹರಿ ಶಾಸ್ತ್ರಿ ವಿರಚಿತ ಸಂಪೂರ್ಣ ರಾಮಾಯಣ ಪೌರಾಣಿಕ ನಾಟಕ ಸೂರ್ಯೋದಯದವರೆಗೆ ನಡೆಯಲಿದೆ. ಮಾಹಿತಿಗೆ ಅಧ್ಯಕ್ಷ ಎಂ.ಗಣೇಶ–ಮೊ. 9342336927, ಕಾರ್ಯದರ್ಶಿ, ಅನಂತವರ್ಧನ, ಮೊ. 9449264920 ಸಂಪರ್ಕಿಸಬಹುದು.

# ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರ ಬಂಧನ; ಲಕ್ಷಾಂತರ ರೂ. ಮೌಲ್ಯದ ವಾಹನ, ಮೊಬೈಲ್‌ಗಳು ವಶಕ್ಕೆ



ವಶಪಡಿಸಿಕೊಂಡಿರುವ 18 ಲಕ್ಷ ರೂ. ಮೌಲ್ಯದ 100 ಮೊಬೈಲ್‌ಗಳೊಂದಿಗೆ ಮೈಸೂರು ಜಿಲ್ಲಾ ಪೊಲೀಸರ ತಂಡ.

ಮೈಸೂರು,ಮಾ.6(ಆರ್‌ಕೆ)–ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ಆರೋಪಿಗಳನ್ನು ಬಂಧಿಸಿರುವ ಜಿಲ್ಲಾ ಪೊಲೀಸರು, ಲಕ್ಷಾಂತರ ರೂ. ಮೌಲ್ಯದ ವಾಹನ ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ನಂಜನಗೂಡು ತಾಲೂಕು, ಸಿಂಧುವಳ್ಳಿ ಗ್ರಾಮದ ಶಾರುಖ್‌ಪಾಷಾ ಎಂಬುವರ ವರ್ಕ್‌ಶಾಪ್ ಬೀಗ ಮುರಿದು 1.5 ಲಕ್ಷ ರೂ. ಮೌಲ್ಯದ ವೆಲ್ಡಿಂಗ್ ಮೆಷಿನ್, ಕೇಬಲ್ ವೈರ್, ಬ್ಯಾಟರಿ ಹಾಗೂ ಕಬ್ಬಿಣದ ಸಾಮಾಗ್ರಿ ಕಳವು ಮಾಡಿದ್ದ ಓರ್ವನನ್ನು ಮಾರ್ಚ್ 2 ರಂದು ಬಂಧಿಸಿದ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಕಳವು ಮಾಲನ್ನು ವಶಪಡಿಸಿಕೊಂಡಿದ್ದಾರೆ. ಕೆಆರ್ ನಗರ, ಹುಣಸೂರು, ಚಾಮರಾಜನಗರ, ಪಾಂಡವಪುರ, ಕಿಕ್ಕೇರಿ, ಶ್ರೀರಂಗಪಟ್ಟಣ, ಬೆಳ್ಳೂರು ಪೊಲೀಸ್ ಠಾಣಾ ವ್ಯಾಪ್ತಿಗಳ 10 ಕಳವು ಪ್ರಕರಣಗಳಲ್ಲಿ ಈತ ಆರೋಪಿ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ.

**100 ಮೊಬೈಲ್ ಜಪ್ತಿ:** ಜಿಲ್ಲಾ ಪೊಲೀಸರು ಸಿಇಐಆರ್ ಪೋರ್ಟಲ್ ಸಹಾಯದಿಂದ 18ಲಕ್ಷ ಮೌಲ್ಯದ 100 ಮೊಬೈಲ್‌ಗಳ ಪತ್ತೆ ಮಾಡಿ ವಾರಸುದಾರರಿಗೆ ಮರಳಿಸಿದ್ದಾರೆ.

**ಆರೋಪಿಗಳೊಂದಿಗೆ ಇದ್ದ ಕಾರು ವಶಕ್ಕೆ:** ಮತ್ತೊಂದು ಪ್ರಕರಣದಲ್ಲಿ 2024ರ ಫೆ.12ರಂದು ಹುಣಸೂರು ಎಂ.ಸಿ. ನಾಸೀರ್‌ಖಾನ್ ಎಂಬುವರ ಸ್ವಿಫ್ಟ್ ಡಿಸೈರ್ ಕಾರ್ ಬಾಡಿಗೆಗೆ ಕರೆದೊಯ್ದಿದ್ದ ಇಬ್ಬರು, ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಬಳಿ ಮಾಲಿಕ ನಾಸೀರ್ ಖಾನ್ ಮೇಲೆ ಕಟರ್‌ನಿಂದ ಹಲ್ಲೆ ನಡೆಸಿ ಮೊಬೈಲ್‌ಫೋನ್, 700 ರೂ ನಗದು ದೋಚಿ ಕಾರಿನೊಂದಿಗೆ ಪರಾರಿಯಾಗಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪಿರಿಯಾಪಟ್ಟಣ ಠಾಣೆ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿ ಕಾರನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

# ಇಂದು ಮುಡಾ ಬಜೆಟ್

ಮೈಸೂರು,ಮಾ.6(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ 2024–25ನೇ ಸಾಲಿನ ಬಜೆಟ್ ನಾಳೆ (ಮಾ.7) ಮಂಡನೆಯಾಗಲಿದೆ. ಪ್ರಾಧಿಕಾರದ ಅಧ್ಯಕ್ಷ ಕೆ.ಮರೀಗೌಡ ಅವರು ಅಧ್ಯಕ್ಷತೆ ವಹಿಸಲಿರುವ ಸಭೆಯಲ್ಲಿ ಆಯುಕ್ತ ಜಿ.ವಿ.ದಿನೇಶ್‌ಕುಮಾರ್ ಗುರುವಾರ ಬೆಳಗ್ಗೆ 11 ಗಂಟೆಗೆ ಕಚೇರಿ ಸಭಾಂಗಣದಲ್ಲಿ ಆಯ–ವ್ಯಯ ಮಂಡಿಸುವರು ಎಂದು ಕಾರ್ಯದರ್ಶಿ ಜಿ.ಡಿ. ಶೇಖರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಿ.ಗಿರೀಶ್ ನೇಮಕ



ಮೈಸೂರು, ಮಾ. 6– ಬಿಜೆಪಿಯ ಹಿಂದುಳಿದ ವರ್ಗಗಳ ಮೋರ್ಚಾದ ಕಾರ್ಯಕಾರಿಣಿ ಸದಸ್ಯರನ್ನಾಗಿ ಅರವಿಂದ ನಗರದ ನಿವಾಸಿ ಪಿ. ಗಿರೀಶ್ ಅವರನ್ನು ನೇಮಕ ಮಾಡಲಾಗಿದೆ.

# ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ ಪದಾಧಿಕಾರಿಗಳು



ಮೈಸೂರು,ಮಾ.6–ನಾಯಕ ಜನಾಂಗದ ಹಿತರಕ್ಷಣಾ ವೇದಿಕೆಯ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ಪತ್ರವನ್ನು ನೀಡಲಾಯಿತು. ಸಂಘಟನೆ ಸಂಸ್ಥಾಪಕ ಅಧ್ಯಕ್ಷರಾಗಿ ಪ್ರಭಾಕರ ಹುಣಸೂರು, ರಾಜ್ಯಾಧ್ಯಕ್ಷರಾಗಿ ಎಸ್.ಶ್ರೀಧರ್, ಪ್ರಧಾನ ಕಾರ್ಯದರ್ಶಿಯಾಗಿ ಕೆರೆಹಳ್ಳಿ ಮಾದೇಶ್, ಜಿಲ್ಲಾಧ್ಯಕ್ಷರಾಗಿ ರಾಜು ಮಾರ್ಕೆಟ್, ಜಿಲ್ಲಾ ಉಪಾಧ್ಯಕ್ಷರಾಗಿ ಸುರೇಶ್ ಕುಮಾರಬೀಡು, ಜಿಲ್ಲಾ ಕಾರ್ಯದರ್ಶಿಯಾಗಿ ಪುಟ್ಟರಾಜು ನಾಗವಾಲ, ಸಂಘಟನಾ ಕಾರ್ಯದರ್ಶಿಯಾಗಿ ಕುಪ್ಪರವಳ್ಳಿಮೂರ್ತಿ, ನಗರಾಧ್ಯಕ್ಷರಾಗಿ ರಮೇಶ್ ಮಾರ್ಕೆಟ್, ನಗರ ಉಪಾಧ್ಯಕ್ಷರಾಗಿ ರಂಗಸ್ವಾಮಿ, ಕಾರ್ಯದರ್ಶಿಯಾಗಿ ಎಲ್.ಮಂಜುನಾಥ್, ಸಲಹೆಗಾರರಾಗಿ ಎಂ.ನಾಗೇಂದ್ರ ಯಡಕೊಳ ಅವರನ್ನು ನೇಮಕ ಮಾಡಲಾಗಿದೆ.

# ಶಿವರಾತ್ರಿ ಅಂಗವಾಗಿ ಸುಷುಮ್ನ ಕ್ರಿಯಾ ಯೋಗ ಅಧಿವೇಶನ

ಮೈಸೂರು, ಮಾ.6(ಜಿಎ)–ಮಹಾಶಿವರಾತ್ರಿ ಅಂಗವಾಗಿ ದಿವ್ಯ ಬಾಬಾಜಿ ಸುಷುಮ್ನ ಕ್ರಿಯಾ ಯೋಗ ಫೌಂಡೇಶನ್ ವತಿಯಿಂದ ನಗರದ ಹಿನಕಲ್‌ನ ಸ್ವೆಕ್ಟ್ರಾ ಕನ್ವೆನ್ಷನ್ ಹಾಲ್‌ನಲ್ಲಿ ಮಾರ್ಚ್ 8ರಂದು ಸಂಜೆ 5ರಿಂದ ಸುಷುಮ್ನಾ ಕ್ರಿಯಾ ಯೋಗ ಅಧಿವೇಶನ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೌಂಡೇಶನ್ ಸ್ವಯಂ ಸೇವಕಿ ದಿವ್ಯಾ ಅವರು, ಸಂಸ್ಥೆಯ ಗುರುಮಾ ಆತ್ಮಾನಂದ ಮಹಿ ಅವರು ಕ್ರಿಯಾಯೋಗದ ಬಗ್ಗೆ ಪರಿಚಯಿಸಲಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಲಿಂಗೋದ್ಭವ ಧ್ಯಾನ ರಾತ್ರಿಯಿಡೀ ನಡೆಯಲಿದೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಮಾಹಿತಿಗೆ ಮೊಸಂ. 9629689167 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸ್ವಯಂಸೇವಕರಾದ ಜಿತೇಂದ್ರ, ಏಕನಾಥ್‌ರಾವ್, ಸುಧಾ, ಶ್ರೀಲಕ್ಷ್ಮಿ ಇದ್ದರು.

# ಮಹಿಳೆಯರಿಗಾಗಿ ಅಂಚೆ ಇಲಾಖೆಯಲ್ಲಿ ಹಲವು ಉಪಯೋಗಿ ಯೋಜನೆ

## ಅಂಚೆ ಹಿರಿಯ ಅಧೀಕ್ಷಕಿ ಡಾ.ಏಂಜಲ್‌ರಾಜ್ ವಿವರಣೆ

ಮೈಸೂರು,ಮಾ.6– ಮಹಿಳೆಯರಲ್ಲಿ ಹೂಡಿಕೆ ಮಾಡಿ–ಪ್ರಗತಿಯನ್ನು ವೇಗಗೊಳಿಸಿ ಎಂಬುದು ಈ ವರ್ಷದ ಅಂತರ ರಾಷ್ಟ್ರೀಯ ಮಹಿಳಾ ದಿನದ ಘೋಷವಾಕ್ಯವಾಗಿದ್ದು, ಅಂಚೆ ಇಲಾಖೆಯಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗಾಗಿಯೇ ಮೀಸಲಾದ ಹಲವು ಉಳಿತಾಯ ಯೋಜನೆಗಳು ಲಭ್ಯವಿದ್ದು ಮಹಿಳೆಯರು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕಿ ಡಾ.ಏಂಜಲ್‌ರಾಜ್ ಮನವಿ ಮಾಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಎಲ್ಲಾ ಅಂಚೆ ಕಚೇರಿಗಳಲ್ಲಿಯೂ ಅಂತರರಾಷ್ಟ್ರೀಯ ಮಹಿಳಾ ದಿನವಾದ ಮಾರ್ಚ್ 8ರವರೆಗೂ ಸುಕನ್ಯಾ ಸಮೃದ್ಧಿ ಮತ್ತು ಮಹಿಳಾ ಸಮ್ಮಾನ್ ಸರ್ಟಿಫಿಕೇಟ್ ಖಾತೆಗಳನ್ನು ಆದ್ಯತೆಯ ಮೇಲೆ ತೆರೆಯಲಾಗುತ್ತದೆ. ಆದ್ದರಿಂದ ಸಮೀಪದ ಅಂಚೆ ಕಚೇರಿಗಳಲ್ಲಿ ಮಹಿಳೆಯರು ಖಾತೆಗಳನ್ನು ತೆರೆಯಬೇಕೆಂದು ಕರೆ ನೀಡಿದ್ದಾರೆ.

ಸುಕನ್ಯಾ ಸಮೃದ್ಧಿ ಖಾತೆಯನ್ನು 1 ರಿಂದ 10 ವರ್ಷದ ಒಳಗಿನ ಹೆಣ್ಣು ಮಕ್ಕಳ ಹೆಸರಿನಲ್ಲಿ ಕೇವಲ 250 ರೂ.ಗಳನ್ನು ಠೇವಣಿ ಮಾಡುವ ಮೂಲಕ ತೆರೆಯಬಹುದು. ಈ ಖಾತೆಗೆ ಪ್ರಸ್ತುತ ಶೇ.8.2ರಷ್ಟು ಬಡ್ಡಿ ದರವಿದೆ. ಈ ಯೋಜನೆಗೆ ಆದಾಯ ತೆರಿಗೆ ವಿನಾಯಿತಿ ಕೂಡ ಲಭ್ಯವಿದೆ. ಮಹಿಳಾ ಸಮ್ಮಾನ್ ಸೇವಿಂಗ್ಸ್ ಖಾತೆಯಲ್ಲಿ ಕನಿಷ್ಠ 1000 ರೂ.ಗಳಿಂದ ಗರಿಷ್ಠ 2 ಲಕ್ಷ ರೂ.ಗಳವರೆಗೂ ಠೇವಣಿ ಇಡಬಹುದು. ಈ ಖಾತೆಗೆ ಶೇ.7.5ರಷ್ಟು ಬಡ್ಡಿ ದರವಿದ್ದು ಇದರ ಕಾಲಾವಧಿ ಕೇವಲ 2 ವರ್ಷಗಳಾಗಿವೆ. ಈ ಯೋಜನೆಯಲ್ಲಿ 2 ಲಕ್ಷ ರೂ.ಗಳನ್ನು ಠೇವಣಿ ಇಟ್ಟರೆ 2 ವರ್ಷಗಳಲ್ಲಿ ಅಸಲು ಮತ್ತು ಬಡ್ಡಿ ಸೇರಿ 2,32,000 ರೂ.ಗಳು ದೊರೆಯುತ್ತದೆ ಎಂದು ತಿಳಿಸಿದ್ದಾರೆ. ಈಗಾಗಲೇ ಅಂಚೆ ಕಚೇರಿಗಳಲ್ಲಿ ಯಾವುದಾದರೂ ಒಂದು ಉಳಿತಾಯ ಯೋಜನೆ ಖಾತೆಯನ್ನು ಹೊಂದಿದ್ದರೆ ಯಾವುದೇ ದಾಖಲೆಗಳನ್ನು ನೀಡುವ ಅಗತ್ಯವಿಲ್ಲ. ಹೊಸದಾಗಿ ಖಾತೆ ತೆರೆಯುವವರು ಆಧಾರ್ ಕಾರ್ಡ್, ಪಾನ್ ಕಾರ್ಡ್ ಮತ್ತು 2 ಭಾವಚಿತ್ರಗಳನ್ನು ನೀಡುವ ಮೂಲಕ ಸಮೀಪದ ಅಂಚೆ ಕಚೇರಿಯಲ್ಲಿ ಖಾತೆಯನ್ನು ತೆರೆಯಬಹುದು ಎಂದಿದ್ದಾರೆ.

# ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಲ್ಲಿ ವಾರ್ಷಿಕ ಸಂಚಿಕೆ ಚಿಂತನ ಬಿಡುಗಡೆ



ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ವಾರ್ಷಿಕ ವಿಶೇಷ ಸಂಚಿಕೆ ಬಿಡುಗಡೆಗೊಳಿಸಲಾಯಿತು. ಸಂಸ್ಥೆಯ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಕಾಲೇಜಿನ ಪ್ರಾಂಶುಪಾಲರಾದ ಸಿ.ಕೆ.ಅಶೋಕ್ ಕುಮಾರ್, ಚಿಂತನ ವಾರ್ಷಿಕ ಸಂಚಿಕೆಯ ಸಂಪಾದಕರು, ಆಂಗ್ಲ ವಿಭಾಗದ ಮುಖ್ಯಸ್ಥ ಮನೋಜ್‌ಕುಮಾರ್, ಉಪನ್ಯಾಸಕರಾದ ರಾಜೇಂದ್ರಪ್ರಸಾದ್ ಹೊನ್ನಲಗೆರೆ, ಡಾ.ಎಂ.ಲಾವಣ್ಯ, ವಿದೂಷಿ ಕಾವ್ಯಶ್ರೀ ಆರ್ ರಾವ್, ಮನೋಹರ್ ಬಿ, ಸಯ್ಯದ್ ಮುಶೀರ್ ಅಹಮ್ಮದ್ ಅವರನ್ನು ಕಾಣಬಹುದು.

ಮೈಸೂರು, ಮಾ. 6– ಮೈಸೂರಿನ ಕೃಷ್ಣಮೂರ್ತಿಪುರಂನ ಶಾರದಾವಿಲಾಸ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಬುಧವಾರ ವಿದ್ಯಾರ್ಥಿ ವೇದಿಕೆಯ ವತಿಯಿಂದ ವಾರ್ಷಿಕ ಸಂಚಿಕೆ ಚಿಂತನವನ್ನು ಬಿಡುಗಡೆಗೊಳಿಸಲಾಯಿತು.

ಸಂಸ್ಥೆಯ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್ ಚಿಂತನ ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿ, ಸಾಂಸ್ಕೃತಿಕ ಚಟುವಟಿಕೆಗಳು ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರನ್ನು ಬೆಸೆಯುತ್ತವೆ. ಅದರದ್ದೇ ಒಂದು ಭಾಗವಾದ ವಿದ್ಯಾರ್ಥಿಗಳ ಪ್ರತಿಭೆಗಳನ್ನು ಗುರುತಿಸುವ ವಿಶೇಷವಾದ ವೇದಿಕೆ ಚಿಂತನ. ವಿದ್ಯಾರ್ಥಿಗಳು ತಮ್ಮಲ್ಲಿ ಅಡಗಿರುವ ಕಥೆ, ಕವನ, ಚಿತ್ರಕಲೆ, ಸಂಗೀತ, ಸಾಹಿತ್ಯಗಳನ್ನು ಬರಹಗಳ ಮೂಲಕ ಹೊರತರುವುದಕ್ಕೆ ಇದು ಅಡಿಪಾಯವಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಬಾಲ್ಯದಿಂದಲೇ ವೇದಿಕೆಯಲ್ಲಿ ಸಿಗುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು, ಪ್ರತಿಭೆಗಳನ್ನು ಗುರುತಿಸಿಕೊಂಡಾಗ ಯಶಸ್ಸನ್ನು ತಮ್ಮದಾಗಿಸಿಕೊಳ್ಳಬಹುದೆಂದರು. ವೇದಿಕೆಯಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಸಿ.ಕೆ.ಅಶೋಕ್‌ಕುಮಾರ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆ, ನಾಯಕತ್ವ ಗುಣ, ಉತ್ಸಾಹ ಬೆಳೆಯುವಲ್ಲಿ ಚಿಂತನ ವಾರ್ಷಿಕ ಸಂಚಿಕೆ ಪೂರಕ ವಾತಾವರಣವನ್ನು ನಿರ್ಮಿಸುತ್ತದೆ. ಪಠ್ಯೇತರ ಚಟುವಟಿಕೆಗಳನ್ನು ಗುರುತಿಸುವಲ್ಲಿ ವಿದ್ಯಾರ್ಥಿಗಳಿಗೆ ವಾರ್ಷಿಕ ಸಂಚಿಕೆ ಮೈಲಿಗಲ್ಲು ಎಂದರು.

ಕಾರ್ಯಕ್ರಮದಲ್ಲಿ ಚಿಂತನ ವಾರ್ಷಿಕ ಸಂಚಿಕೆ ಸಂಪಾದಕ, ಆಂಗ್ಲ ವಿಭಾಗದ ಮುಖ್ಯಸ್ಥ ಮನೋಜ್‌ಕುಮಾರ್, ಉಪನ್ಯಾಸಕರಾದ ರಾಜೇಂದ್ರ ಪ್ರಸಾದ್ ಹೊನ್ನಲಗೆರೆ, ಡಾ.ಎಂ.ಲಾವಣ್ಯ, ವಿದೂಷಿ ಕಾವ್ಯಶ್ರೀ ಆರ್.ರಾವ್, ಮನೋಹರ್, ಸಯ್ಯದ್ ಮುಶೀರ್ ಅಹಮ್ಮದ್ ಉಪಸ್ಥಿತರಿದ್ದರು.

# ವಸತಿರಹಿತರಿಗೆ ಮನೆ ನೀಡುವಂತೆ ಆಗ್ರಹಿಸಿ ಮೈಸೂರಲ್ಲಿ ಸಿಪಿಐ ಪ್ರತಿಭಟನೆ





ನಿವೇಶನ, ವಸತಿಹೀನರಿಗೆ ಮನೆ ಮಂಜೂರು ಮಾಡುವಂತೆ ಆಗ್ರಹಿಸಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ವಸತಿ ಮತ್ತು ನಿವೇಶನರಹಿತರ ಹೋರಾಟ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.6(ಎಂಟಿವೈ)– ನಿವೇಶನ ಮತ್ತು ವಸತಿರಹಿತರಿಗೆ ನಿವೇಶನ, ಮನೆ ಮಂಜೂರು ಮಾಡುವಂತೆ ಒತ್ತಾಯಿಸಿ ವಸತಿ ಮತ್ತು ನಿವೇಶನ ರಹಿತರ ಹೋರಾಟ ಸಮಿತಿ ಕಾರ್ಯಕರ್ತರು ಸಿಪಿಐ ನೇತೃತ್ವದಲ್ಲಿ ಮೈಸೂರಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದ ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ವಸತಿ ಮತ್ತು ನಿವೇಶನ ರಹಿತರ ಹೋರಾಟ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಮನೆ ಮಂಜೂರು ಮಾಡುವಂತೆ ಮನವಿ ಮಾಡಿದರು.

ರಾಜೀವ್‌ಗಾಂಧಿ ವಸತಿ ನಿಗಮ ನೀಡಿರುವ ಮಾಹಿತಿಯಂತೆ ರಾಜ್ಯದಲ್ಲಿ 27 ಲಕ್ಷ ವಸತಿಹೀನ ಕುಟುಂಬಗಳಿವೆ. ಬಹುತೇಕ ಕುಟುಂಬಗಳು ಭೂರಹಿತ ಕೃಷಿ ಕೂಲಿ ಕಾರ್ಮಿಕರದ್ದಾಗಿವೆ. ದಲಿತ, ಆದಿವಾಸಿ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಕುಟುಂಬಗಳಾಗಿವೆ. ಈ ಕುಟುಂಬಗಳು ನಿವೇಶನ ಹೊಂದಿರದೆ ಇರುವುದರಿಂದ ಇವರಿಗೆ ಸರ್ಕಾರದ ವಸತಿ ಯೋಜನೆಯಲ್ಲಿ ಮನೆ ಮಂಜೂರು ಸಾಧ್ಯವಾಗಿಲ್ಲ. ಹೀಗಾಗಿ ಈ ಕುಟುಂಬಗಳಿಗೆ ನಿವೇಶನ ನೀಡಬೇಕು ಎಂದು ಒತ್ತಾಯಿಸಿದರು.

ಸ್ಥಳೀಯ ಸಂಸ್ಥೆಗಳಲ್ಲಿ ವಸತಿಗಾಗಿ ಅರ್ಜಿ ಸಲ್ಲಿಸಿರುವ ಕುಟುಂಬಗಳು ದಶಕದಿಂದ ನಿವೇಶನಕ್ಕಾಗಿ ಕಾಯುತ್ತಿವೆ. ಈಗಾಗಲೇ ಬಜೆಟ್‌ನಲ್ಲಿ ವಸತಿರಹಿತರ ಸಮೀಕ್ಷೆ ನಡೆಸಲು ಘೋಷಿಸಿದ್ದು, ಅದರಂತೆ ಸಮೀಕ್ಷೆ ನಡೆಸಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಬೇಕು. ಮನೆಗಾಗಿ ಸಲ್ಲಿಸಿರುವ ಅರ್ಜಿಯನ್ನು ರಾಜೀವ್ ಗಾಂಧಿ ವಸತಿ ನಿಗಮದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಬೇಕು. ಅರ್ಜಿ ಸ್ವೀಕಾರ ಮಾಡಲು ಅವಕಾಶ ಮಾಡಿಕೊಡಬೇಕು. 2024–25ರ ಬಜೆಟ್‌ನಲ್ಲಿ ಘೋಷಿಸಿರುವಂತೆ ಕೂಡಲೇ ರಾಜ್ಯಾದ್ಯಂತ ನಿವೇಶನ, ವಸತಿರಹಿತರ ಸಮೀಕ್ಷೆ ಮಾಡಿಸಬೇಕು. ನಿವೇಶನ ನೀಡಲು ಲಭ್ಯ ಸರ್ಕಾರಿ ಭೂಮಿಯನ್ನು ಕಾಯ್ದಿರಿಸಬೇಕು. ವಸತಿ ಯೋಜನೆಯ ಸಹಾಯಧನದ ಮೊತ್ತವನ್ನು ಕನಿಷ್ಠ 5 ಲಕ್ಷ ರೂ.ಗೆ ಏರಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷ ದೇವದಾಸ್ ಎನ್.ಕೆ, ಜಿಲ್ಲಾಧ್ಯಕ್ಷ ರಾಮಕೃಷ್ಣ ಹೆಚ್.ಬಿ, ಪ್ರಧಾನ ಕಾರ್ಯದರ್ಶಿ ಸೋಮರಾಜೇ ಅರಸ್.ಕೆ.ಜಿ, ಜಿಲ್ಲಾ ಉಪಾಧ್ಯಕ್ಷರಾದ ಲಕ್ಷ್ಮೀ, ಶಿವಮಾದು, ಮುಜಾಹಿದ್ ಪಾಷಾ, ಕಾರ್ಯದರ್ಶಿ ನಂಜನಾಯಕ, ಹೊನ್ನೇಶ್, ಚನ್ನಪ್ಪನಾಯಕ, ಶಿವಣ್ಣ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಡಿಸ್ಟಿಲರಿ, ಎಥೆನಾಲ್ ಘಟಕ ನಿರ್ಮಾಣಕ್ಕೆ ರೈತರ ಭಾರಿ ವಿರೋಧ

## ಕೆ.ಆರ್.ಪೇಟೆ ಬಳಿಯ ಕೋರಮಂಡಲ್ ಸಕ್ಕರೆ ಕಾರ್ಖಾನೆಯಲ್ಲಿ ನಡೆದ ಜಿಲ್ಲಾಧಿಕಾರಿಗಳ ಅಭಿಪ್ರಾಯ ಸಂಗ್ರಹ ಸಭೆಯಲ್ಲಿ ಆಕ್ರೋಶ

**ಕೆ.ಆರ್.ಪೇಟೆ, ಮಾ.6– ತಾಲೂಕಿನ ಮಾಕವಳ್ಳಿ ಬಳಿ ಇರುವ ಕೋರಮಂಡಲ್ ಸಕ್ಕರೆ ಕಾರ್ಖಾನೆಯಲ್ಲಿ ನಿರ್ಮಿಸಲುದ್ದೇಶಿಸಿರುವ ಡಿಸ್ಟಿಲರಿ ಮತ್ತು ಎಥನಾಲ್ ಘಟಕಕ್ಕೆ ಸಾವಿರಾರು ರೈತರು, ಪರಿಸರವಾದಿಗಳು ಹಾಗೂ ಸಾರ್ವಜನಿಕರು ಭಾರಿ ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು. ಡಿಸ್ಟಿಲರಿ ಮತ್ತು ಎಥನಾಲ್ ಘಟಕ ಆರಂಭಕ್ಕೆ ಅವಕಾಶ ನೀಡುವುದಾದರೆ ನಮಗೆ ವಿಷ ನೀಡಿ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ರೈತರೊಂದಿಗೆ ಮಾತುಕತೆ ನಡೆಸಿ ಅಭಿಪ್ರಾಯ ಸಂಗ್ರಹಿಸಲು ಬಂದಿದ್ದ ಜಿಲ್ಲಾಧಿಕಾರಿಗಳು ಮತ್ತು ಅಧಿಕಾರಿಗಳು ಅಭಿಪ್ರಾಯ ಸಂಗ್ರಹಿಸದೆ ಬರಿಗೈಯಲ್ಲಿ ಹಿಂತಿರುಗಿದರು.**

ಈ ಸುಬಂಧ ಜಿಲ್ಲಾಧಿಕಾರಿ ಡಾ.ಕುಮಾರ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಸಾರ್ವಜನಿಕ ಅಭಿಪ್ರಾಯ ಸಂಗ್ರಹ ಸಭೆಯಲ್ಲಿ ಸ್ಥಳೀಯ ಜನರ ಮರಣ ಶಾಸನವಾಗಲಿರುವ ಡಿಸ್ಟಿಲರಿ ಹಾಗೂ ಎಥನಾಲ್ ಘಟಕ ಯಾವುದೇ ಕಾರಣಕ್ಕೂ ಆರಂಭಿಸಬಾರದು. ಎರಡೂ ಘಟಕಗಳ ಆರಂಭವಾಗುವುದರಿಂದ ಸ್ಥಳೀಯರಿಗೆ ಉಪಯೋಗಕ್ಕಿಂತ ಅಪಾಯವೇ ಜಾಸ್ತಿಯಾಗಲಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಈಗಿರುವ ಕಾರ್ಖಾನೆಯಲ್ಲಿ ಕೇವಲ ಸಕ್ಕರೆ ಉತ್ಪಾದನೆ ಹಾಗೂ ವಿದ್ಯುತ್ ಉತ್ಪಾದನಾ ಘಟಕಗಳಿಂದ ಸಾಕಷ್ಟು ತೊಂದರೆಗಳನ್ನು ಎದುರಿಸುತ್ತಿದ್ದೇವೆ. ಸುತ್ತಮುತ್ತಲ ರೈತರಾದ ನಾವು ಬೆಳೆದ ಬೆಳೆಗಳು ಹಾಳಾಗುತ್ತಿವೆ. ದನಕರುಗಳು ರೋಗ ರುಜಿನಗಳಿಂದ ನರಳುತ್ತಿವೆ. ಜನರು ಉಸಿರಾಟದ ತೊಂದರೆಗಳಿಂದ ನರಳುವಂತಾಗಿದೆ. ಹಾಗಾಗಿ ಯಾವುದೇ ಕಾರಣಕ್ಕೂ ಡಿಸ್ಟಿಲರಿ ಘಟಕ ಹಾಗೂ ಎಥನಾಲ್ ಘಟಕಗಳನ್ನು ಆರಂಭಿಸುವುದು ಬೇಡವೇ ಬೇಡ ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

ಸ್ಥಳೀಯ ಸಾವಿರಾರು ಜನರ ಆಕ್ರಂಧನದ ಧ್ವನಿಯ ಮನವಿಯ ಮೇರೆಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಹಾಗೂ ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು ಅವರು ಸ್ಥಳೀಯ ಸಾವಿರಾರು ಜನರು ವಿರೋಧ ಇರುವ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಸಭೆಯಲ್ಲಿ ಘೋಷಿಸಿದರು.

ಕಾರ್ಖಾನೆಯ ಸುತ್ತಮುತ್ತಲಿನ ಗ್ರಾಮಗಳಾದ ಮಾಕವಳ್ಳಿ, ಕರೋಟಿ, ಕಾರಿಗನಹಳ್ಳಿ, ಮಾಣಿಕನಹಳ್ಳಿ, ವಡ್ಡರಹಳ್ಳಿ, ಹೆಗ್ಗಡಹಳ್ಳಿ, ಲಿಂಗಾಪುರ, ಚೌಡೇನಹಳ್ಳಿ, ರಾಮನಹಳ್ಳಿ, ಬಿಚೇನಹಳ್ಳಿ, ಮಲ್ಲೇನಹಳ್ಳಿ, ಕುಂದನಹಳ್ಳಿ ಮತ್ತಿತರ ಗ್ರಾಮಗಳ ಸುಮಾರು 3 ಸಾವಿರಕ್ಕೂ ಹೆಚ್ಚು ರೈತರು ಕಾರ್ಖಾನೆಯ ಮುಖ್ಯ ದ್ವಾರದಲ್ಲೇ ಡಿಸ್ಟಿಲರಿ ಮತ್ತು ಎಥನಾಲ್ ಘಟಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿ ಸ್ಥಳದಲ್ಲೇ ಕಾರ್ಖಾನೆಯ ವಿರುದ್ಧ ಘೋಷಣೆ ಕೂಗಿ ತಮ್ಮ ವಿರೋಧ ವ್ಯಕ್ತಪಡಿಸಿದರು.

### ಸ್ಥಳೀಯರ ವಿರೋಧದ ಬಗ್ಗೆ ಸರ್ಕಾರಕ್ಕೆ ವರದಿ ನೀಡುವ ಭರವಸೆ



ಡಿಸ್ಟಿಲರಿ ವಿರೋಧಿಸಿ ಪೋಲೀಸರು ಮತ್ತು ಅಧಿಕಾರಿಗಳ ನಡುವೆ ವಾಗ್ವಾದಕ್ಕಿಳಿದಿರುವ ರೈತ ಸಮುದಾಯ.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕುಮಾರ್ ಅವರು, ನಿಮ್ಮ ಅಭಿಪ್ರಾಯ ಸಂಗ್ರಹಿಸಲೆಂದೇ ಜಿಲ್ಲಾಡಳಿತ ಬಂದಿದೆ. ನೀವು ಏನು ಅಭಿಪ್ರಾಯ ವ್ಯಕ್ತಪಡಿಸುತ್ತೀರೋ ಆ ವರದಿಯನ್ನೇ ಯಾರ ಮುಲಾಜಿಗೂ ಬಗ್ಗದೆ ಸರ್ಕಾರಕ್ಕೆ ಪ್ರಾಮಾಣಿಕವಾಗಿ ಸಲ್ಲಿಸುತ್ತೇನೆ ಎಂಬ ಭರವಸೆ ನೀಡಿದರು.

ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯವನ್ನೇ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇನೆ ಎಂದು ಜಿಲ್ಲಾಧಿಕಾರಿ ಕುಮಾರ್ ಘೋಷಿಸುತ್ತಿದ್ದಂತೆ ನೆರೆದಿದ್ದ ರೈತರು ತಾಲೂಕಿನ ರೈತ ಸಂಘ, ಪರಿಸರ ಪ್ರೇಮಿಗಳು, ಪ್ರಜ್ಞಾವಂತರ ಹೋರಾಟದ ಫಲವಾಗಿ ಕಾರ್ಖಾನೆಯ ಸುತ್ತಮುತ್ತಲಿನ ಸಾರ್ವಜನಿಕರಿಗೆ ಮರುಜನ್ಮವನ್ನೇ ಪಡೆದಂತಾಗಿದೆ ಎಂಬ ಹರ್ಷೋದ್ಗಾರ ವ್ಯಕ್ತಪಡಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ನಾಗರಾಜು, ತಹಲ್ದಾರ್ ನಿಸರ್ಗ ಪ್ರಿಯ, ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿ ವಿಜಯಲಕ್ಷ್ಮೀ, ಜಿಲ್ಲಾ ಪರಿಸರ ನಿಂಯಂತ್ರಣಾಧಿಕಾರಿ ಬಿ.ಪಿ.ಗೀತಾ, ತಾಲೂಕು ಕಾರ್ಯ ನಿರ್ವಹಣಾಧಿಕಾರಿ ಸತೀಶ್, ಪರಿಸರ ಮಾಲಿನ್ಯ ನಿಯಂತ್ರಣಾಧಿಕಾರಿ ಅಶ್ವಿನಿ, ಪರಿಸರ ಮಾಲಿನ್ಯ ಅಭಿಯಂತರರಾದ ಗೀತಾ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

> **ರೈತರ ಪ್ರತಿಭಟನೆ ತೀವ್ರಗೊಂಡು ಕಬ್ಬು ಸಾಗಿಸುವ ಕಾರ್ಖಾನೆಯ ಬಾಗಿಲನ್ನು ಮುರಿದು ಒಳಗೆ ನುಗ್ಗಲು ಮುಂದಾದ ಸಾವಿರಾರು ರೈತರು ಮತ್ತು ಹೋರಾಟಗಾರರನ್ನು ನಾಗಮಂಗಲ ಡಿವೈಎಸ್‌ಪಿ ಡಾ.ಸುಮೀತ್, ಕಿಕ್ಕೇರಿ ಸರ್ಕಲ್ ಇನ್ಸ್‌ಪೆಕ್ಟರ್ ರೇವತಿ, ಸುಮಾರಾಣಿ, ಆನಂದೇಗೌಡ, ಸಬ್‌ಇನ್ಸ್‌ಪೆಕ್ಟರ್ ಎಚ್.ಕೆ.ನವೀನ್ ನೇತೃತ್ವದ ಪೊಲೀಸ್ ಅಧಿಕಾರಿಗಳು ನಿಯಂತ್ರಿಸಲು ಹರಸಾಹಸಪಡಬೇಕಾಯಿತು. ಕೊನೆಗೆ ರೈತರನ್ನು ಸಮಾಧಾನಿಸಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರು.**

# ಮಂಡ್ಯ ಕಾಂಗ್ರೆಸ್‌ನಲ್ಲಿ ಅಸಮಾಧಾನ ಸ್ಫೋಟ

## ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರವೀಂದ್ರ ರಾಜೀನಾಮೆ



ಮಂಡ್ಯ,ಮಾ.6– ಮುಂದಿನ ಲೋಕಸಭಾ ಚುನಾವಣೆಗೆ ಕಾಂಗ್ರೆಸ್‌ನಿಂದ ಹಣ ಇರುವ ಅಭ್ಯರ್ಥಿಯೊಬ್ಬರನ್ನು ಕಣಕ್ಕಿಳಿಸಲು ಮುಂದಾಗಿದೆ ಎಂದು ಆರೋಪಿಸಿರುವ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ.ಎಚ್.ಎನ್.ರವೀಂದ್ರ ತಮ್ಮ ಹುದ್ದೆಗೆ ರಾಜೀನಾಮೆ ಘೋಷಿಸಿದ್ದಾರೆ. ಇದರಿಂದ ಮಂಡ್ಯ ಜಿಲ್ಲಾ ಕಾಂಗ್ರೆಸ್‌ನಲ್ಲಿ ಅಸಮಾಧಾನ ಸ್ಫೋಟಗೊಂಡಿದೆ.

ನಗರದ ಕರ್ನಾಟಕ ಸಂಘದ ಕೆವಿಎಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿ ಆಯ್ಕೆ ವಿಚಾರವಾಗಿ ಪಕ್ಷದ ಸ್ಥಳೀಯ ಮುಖಂಡರು ಮತ್ತು ಕಾರ್ಯಕರ್ತರ ಜೊತೆ ಚರ್ಚೆ ಮಾಡದೆ ಏಕಪಕ್ಷೀಯವಾಗಿ ಅಭ್ಯರ್ಥಿ ಆಯ್ಕೆ ಮಾಡಲಾಗಿದೆ ಎಂದು ಪಕ್ಷದ ನಾಯಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಅವರು ಪಕ್ಷದ ಹುದ್ದೆಗೆ ರಾಜೀನಾಮೆ ನೀಡುವುದಾಗಿ ತಿಳಿಸಿದರು.

> **ಕಾಂಗ್ರೆಸ್ ಪಕ್ಷದ ಹುದ್ದೆಗೆ ಮಾತ್ರ ರಾಜೀನಾಮೆ ನೀಡಿದ್ದೇನೆ. ಪಕ್ಷ ತೊರೆಯುವ ಪ್ರಶ್ನೆ ಇಲ್ಲ. ಆದರೆ ಕಾಂಗ್ರೆಸ್ ಪಕ್ಷದ ಉಳಿವಿಗಾಗಿ ಹೋರಾಟ ಮುಂದುವರೆಯಲಿದೆ. ಪಕ್ಷದಲ್ಲಿನ ಗ್ಯಾಂಗ್ರಿನ್‌ಗೆ ಅಂತ್ಯವಾಡಬೇಕಾಗಿದೆ. ಇದಕ್ಕಾಗಿ ತುರ್ತು ಆಪರೇಷನ್ ಅಗತ್ಯವಾಗಿದೆ. ಅದಕ್ಕಾಗಿ ಆಸ್ಪತ್ರೆ ಹುಡುಕಾಟದಲ್ಲಿದ್ದೇನೆ. ಹೊರಗಿನಿಂದ ಹಣ ಇದೆ ಎಂಬ ಮಾತ್ರಕ್ಕೆ ಜಿಲ್ಲೆಯಿಂದ ಅಭ್ಯರ್ಥಿಯನ್ನಾಗಿಸಲು ಮುಂದಾದರೆ ಚುನಾವಣೆಯಲ್ಲಿ ವ್ಯತಿರಿಕ್ತ ತೀರ್ಮಾನ ಮಾಡುತ್ತೇವೆ. ನಮ್ಮನ್ನು ಮನವೊಲಿಸುವ ಕಾಲ ಮಿಂಚಿ ಹೋಗಿದೆ. ಹೊರಗಿನ ಅಭ್ಯರ್ಥಿಗಳಿಗೆ ಮನ್ನಣೆ ನೀಡುವುದಿಲ್ಲ. ಸ್ಥಳೀಯ ಅಭ್ಯರ್ಥಿ ಕಣಕ್ಕಿಳಿಸುವುದಾದರೆ ನಮ್ಮ ಮನಸ್ಸು ಬದಲಾಗಲಿದೆ...**


ಜಿಲ್ಲೆಯಲ್ಲಿ ಸ್ಥಳೀಯರು ಚುನಾವಣೆಗೆ ಸ್ಪರ್ಧಿಸುವ ಅರ್ಹತೆ ಹೊಂದಿದ್ದಾರೆ. ಆದರೂ ಸಹ ಹೊರಗಿನವರಿಗೆ ಮನ್ನಣೆ ನೀಡಲಾಗುತ್ತಿದೆ. ಚುನಾವಣೆಗೆ ಸ್ಪರ್ಧಿಸಲು ಹಣವೇ ಮಾನದಂಡನಾ? ಎಂದು ಪ್ರಶ್ನಿಸಿದ ಅವರು, ಜಿಲ್ಲೆಯ ಸಾಮಾನ್ಯ ಕುಟುಂಬ ವರ್ಗದವರು ಪ್ರತಿ ವರ್ಷ ದೇವರ ಸೇವೆ ಮಾಡಿ ನೂರಾರು ಜನಕ್ಕೆ ಊಟ ಹಾಕುತ್ತಾರೆ. ಆದರೆ ಕಾಂಗ್ರೆಸ್ ನಾಯಕರು ಅನ್ನ ಹಾಕುವ ಜನರನ್ನು ದುಡ್ಡಿನಲ್ಲಿ ಅಳೆಯಲು ಮುಂದಾಗಿದ್ದಾರೆ. ದುಡ್ಡು ಕೊಡದಿದ್ದರೆ ಜಿಲ್ಲೆಯ ಜನತೆ ಮತ ಹಾಕೊಲ್ಲ ಎಂದು ಜಿಲ್ಲೆಯ ಜನರನ್ನು ಅವಮಾನಿಸಲು ಮುಂದಾಗಿದ್ದಾರೆ ಎಂದು ಮಾರ್ಮಿಕವಾಗಿ ಕಿಡಿಕಾರಿದರು. ಕಳೆದ ಲೋಕಸಭಾ ಚುನಾವಣೆ ಸಮಯದಲ್ಲಿ ಜಾತ್ಯತೀತ ಜನತಾ ದಳದ ಏಳು ಶಾಸಕರು, ವಿಧಾನಪರಿಷತ್‌ನ ಮೂವರು ಸದಸ್ಯರು ಅಷ್ಟೇ ಏಕೆ? ರಾಜ್ಯದ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಸ್ಪರ್ಧೆ ಮಾಡಿದ್ದರು. ಆದರೆ ಜಿಲ್ಲೆಯ ಜನತೆ ತಿರಸ್ಕಾರ ಮಾಡಿದ್ದರು. ಇದೀಗ ಕಾಂಗ್ರೆಸ್ ಪಕ್ಷದ ಶಾಸಕರು ಲೋಕಸಭಾ ಕ್ಷೇತ್ರದ ಏಳು ಕ್ಷೇತ್ರದಲ್ಲಿ ಇದ್ದಾರೆ ಎಂದು ಬೀಗುತ್ತಿರುವ ಕಾಂಗ್ರೆಸ್ ನಾಯಕರು ಇದನ್ನು ಅರಿಯಬೇಕು ಎಂದರು.

ಇತಿಹಾಸದಿಂದ ಪಾಠ ಕಲಿಯಬೇಕು. ಇಲ್ಲದಿದ್ದರೆ ಇತಿಹಾಸ ನಿರ್ಮಿಸಲು ಸಾಧ್ಯವಿಲ್ಲ. ಸಾಹುಕಾರ್ ಚೆನ್ನಯ್ಯ ಮುಖ್ಯಮಂತ್ರಿಯಾಗುವ ಅವಕಾಶ ಬಂದಾಗ ಸೋತರು. ಎಸ್.ಎಂ.ಕೃಷ್ಣ ಕೇಂದ್ರ ಕ್ಯಾಬಿನೆಟ್‌ನಲ್ಲಿ ಸಚಿವರಾಗುವ ಸಂದರ್ಭ ಇತ್ತು. ಆದರೂ ಸಹ ಜಿಲ್ಲೆಯ ಜನತೆ ಅವರಿಗೆ ಮಣ್ಣು ಮುಕ್ಕಿಸಿದರು ಎಂಬುದನ್ನು ತಿಳಿಯಿರಿ ಎಂದರು.

ಹಣ ಇದ್ದವರಿಗೆ ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಎಂಬ ಮಾನದಂಡ ಸರಿಯಲ್ಲ. ಕುಬೇರರಿಗೆ ಮಾತ್ರ ಮನ್ನಣೆ ನೀಡುವುದು ಸರಿಯಲ್ಲ.

ಕಾಂಗ್ರೆಸ್ ಪಕ್ಷದಲ್ಲಿ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಯಾರೊಬ್ಬರಿಗೂ ಸದಭಿಪ್ರಾಯ ಇಲ್ಲ. ಎಲ್ಲಾ ಅಸಮಾಧಾನಿತರ ಪ್ರತಿನಿಧಿಯಾಗಿ ನಾನು ಧ್ವನಿ ಎತ್ತಿದ್ದೇನೆ. ರಾಜಕಾರಣ ಮುಂದಿಟ್ಟು ವ್ಯಕ್ತಿಗತ ದ್ವೇಷ ಮಾಡುವ ಮನಸ್ಥಿತಿ ನಮ್ಮದಲ್ಲ. ಲೋಕಸಭಾ ಚುನಾವಣೆಯಲ್ಲಿ ಸ್ಟಾರ್ ಚಂದ್ರು, ಸುಮಲತಾ ಅಂಬರೀಶ್ ಸ್ಪರ್ಧೆ ಮಾಡಿದರೆ ನಾನು ನೇರವಾಗಿ ವಿರೋಧ ಮಾಡಲಿದ್ದೇನೆ. ಇದಕ್ಕಾಗಿ ಪರ್ಯಾಯ ಹಾದಿ ಹಿಡಿಯಲಿದ್ದೇನೆ ಎಂದು ಇದೇ ಸಂದರ್ಭದಲ್ಲಿ ಎಚ್ಚರಿಕೆ ನೀಡಿದರು.

# ಚಿನಕುರಳಿ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ




ಚಿನಕುರಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸಿ.ಶಿವಕುಮಾರ್, ಉಪಾಧ್ಯಕ್ಷ ಸಿ.ಆರ್. ರಮೇಶ್ ಅವರನ್ನು ಎಲ್ಲಾ ಮುಖಂಡರು ಅಭಿನಂದಿಸಲಾಯಿತು.

ಚಿನಕುರಳಿ, ಮಾ.6– ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸಿ.ಶಿವಕುಮಾರ್, ಉಪಾಧ್ಯಕ್ಷರಾಗಿ ಸಿ.ಆರ್. ರಮೇಶ್ ಬುಧವಾರ ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷ ಸ್ಥಾನಕ್ಕೆ ಸಿ.ಶಿವಕುಮಾರ್, ಉಪಾಧ್ಯಕ್ಷ ಸ್ಥಾನಕ್ಕೆ ಸಿ.ಆರ್. ರಮೇಶ್ ಹೊರತುಪಡಿಸಿ ಉಳಿದ ಯಾವೊಬ್ಬ ನಿರ್ದೇಶಕರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಸಿ.ಶಿವಕುಮಾರ್, ಉಪಾಧ್ಯಕ್ಷರಾಗಿ ಸಿ.ಆರ್. ರಮೇಶ್ ಅವರು ಅವಿರೋಧ ಆಯ್ಕೆ ಎಂದು ಚುನಾವಣಾಧಿಕಾರಿ ನಿರ್ಮಲ ಘೋಷಿಸಿದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರಾಗಿ ಸಿ.ಶಿವಕುಮಾರ್ ಹಾಗೂ ಸಿ.ಆರ್.ರಮೇಶ್ ಅವರು ಆಯ್ಕೆಯಾಗುತ್ತಿದ್ದಂತೆಯೇ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿಹಂಚಿ ಸಂಭ್ರಮಿಸಿದರು. ಎಲ್ಲಾ ಮುಖಂಡರು, ಕಾರ್ಯಕರ್ತರು, ಸಂಘದ ನಿರ್ದೇಶಕ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಸಿ.ಎಸ್.ಗಂಗಾಧರ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ಅಂಕೇಗೌಡ, ಗ್ರಾಪಂ ಮಾಜಿ ಅಧ್ಯಕ್ಷರಾದ ಮಹಮದ್ ಪಾಷ ಪಾಪ್ಣ್ಣ ವಿಎಸ್ಎಸ್ಎನ್‌ಬಿ ಅಧ್ಯಕ್ಷ ಸಿ.ಎಸ್.ಮಂಜುನಾಥ್, ಮಾಜಿ ಅಧ್ಯಕ್ಷ ಮೊಗಣ್ಣಗೌಡ, ವಾಸುದೇವ್, ಡೇರಿ ಮಾಜಿ ಅಧ್ಯಕ್ಷರಾದ ಸಿ.ಎಂ.ರಮೇಶ್, ಸಿ.ಎಸ್.ಲೋಕೇಶ್, ವರದರಾಜು, ಹೊನ್ನರಾಜು, ಗ್ರಾಪಂ ಸದಸ್ಯರಾದ ಸಿ.ಎ.ಲೋಕೇಶ್, ಕೃಷ್ಣೇಗೌಡ, ಪರಮೇಶ್, ಮಾಜಿ ಸದಸ್ಯರಾದ ಎಂ.ಎಲ್.ರಮೇಶ್, ಸಿ.ಡಿ.ಮಹದೇವು, ಡೇರಿ ನಿರ್ದೇಶಕರಾದ ಸಿ.ಎ.ಮಂಜುನಾಥ್, ಸಿ.ಎಸ್.ಕೆಂಪೇಗೌಡ, ವರಲಕ್ಷ್ಮಿ, ಯಶೋಧಮ್ಮ ಸಿ.ಬಿ.ನಾರಾಯಣಚಾರಿ, ಯೋಗೇಂದ್ರ, ಹೇಮಾ, ಕಾರ್ಯದರ್ಶಿ ಲೋಕೇಶ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

### ಪ್ರಸಾದ್ ನಿಧನ



**ಮಂಡ್ಯ:** ನಗರದ ಕಾವೇರಿನಗರ ಒಂದನೇ ಹಂತದ ನಿವಾಸಿ ಪ್ರಸಾದ್ (80) ಅವರು ಅನಾರೋಗ್ಯದಿಂದ ನಿಧನ ಹೊಂದಿದರು. ಮೃತರು ಪತ್ನಿ, ನಾಗರತ್ನ, ಇಬ್ಬರು ಪುತ್ರಿಯರು ಹಾಗೂ ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಾ.7 ರಂದು ಶಂಕರನಗರದ ರುದ್ರಭೂಮಿಯಲ್ಲಿ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

# ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಹತ್ವ ಕುರಿತು ವಿದ್ಯಾರ್ಥಿಗಳು, ಪೋಷಕರಿಗೆ ಜಾಗೃತಿ



ಮೈಸೂರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ದಕ್ಷಿಣ ವಲಯ ಬಿಇಓ ಸಿ.ಎನ್.ರಾಜು ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎದುರಿಸುತ್ತಿರುವ ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ, ಜಾಗೃತಿ ಮೂಡಿಸುತ್ತಿರುವ ದೃಶ್ಯ.

ಮೈಸೂರು, ಮಾ.6(ಎಸ್‌ಪಿಎನ್)– 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ತರುವ ಉದ್ದೇಶದಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ದಕ್ಷಿಣ ವಲಯ ವ್ಯಾಪಿಯ ವಿದ್ಯಾರ್ಥಿಗಳ ಮನೆಗೆ ಬೆಳ್ಳಂಬೆಳಗ್ಗೆ ಶಿಕ್ಷಣಾಧಿಕಾರಿಗಳು ಭೇಟಿ ನೀಡಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮಹತ್ವ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುತ್ತಿದ್ದು, ಅಧಿಕಾರಿಗಳ ಈ ಕಾರ್ಯಕ್ಕೆ ಪೋಷಕರು ಮತ್ತು ವಿದ್ಯಾರ್ಥಿಗಳು ಸಹ ಕೈಜೋಡಿಸಿದ್ದಾರೆ.

ದಕ್ಷಿಣ ವಲಯದ 9 ಸರ್ಕಾರಿ, 28 ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ ಒಟ್ಟು 4,637 ವಿದ್ಯಾರ್ಥಿಗಳು ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿದ್ದಾರೆ. ಇವರಲ್ಲಿ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಫೇಲಾಗುವ ಸಾಧ್ಯತೆ ಇದೆ ಎಂದು ಗುರುತಿಸಲಾಗಿದೆ. ಇಂತಹ ವಿದ್ಯಾರ್ಥಿಗಳಿಗೆ ಮಹಾರಾಜ, ಮಹಾರಾಣಿ, ಶಾರದಾವಿಲಾಸ, ಜ್ಞಾನಗಂಗಾ ಶಾಲೆಗಳಲ್ಲಿ ಕಳೆದ ತಿಂಗಳು 'ಕಲಿಕಾಮೃತ' ಶೀರ್ಷಿಕೆಯಡಿ ವಿಶೇಷ ಕಾರ್ಯಾಗಾರ ನಡೆಸಿ, ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಲು ಧೈರ್ಯ ತುಂಬಲಾಗಿದೆ ಎನ್ನುತ್ತಾರೆ ಬಿಇಓ ಸಿ.ಎನ್.ರಾಜು.

**ಶಿಕ್ಷಕರಿಗೂ ಹೊಣೆಗಾರಿಕೆ:** ಅಲ್ಲದೆ, ಫೆ.19ರಿಂದ ಕೆ.ಹೆಮ್ಮನಹಳ್ಳಿ ಸುತ್ತಮುತ್ತ ಗ್ರಾಮಗಳು, ಬೋಗಾದಿ, ಸಾಹುಕಾರ್ ಹುಂಡಿ, ರಮ್ಮನಹಳ್ಳಿ ಲಲಿತಾದ್ರಿಪುರ, ದಟ್ಟಗಳ್ಳಿ, ವಸಂತನಗರ, ಮುನೇಶ್ವರ ನಗರ ಸೇರಿದಂತೆ ಇತರೆ ಬಡಾವಣೆಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳು ಬೆಳಗಿನ ಜಾವ ಓದುಕೊಳ್ಳುವಂತೆ ಮನವರಿಕೆ ಮಾಡಿಕೊಡಲಾಗುತ್ತಿದೆ. ಅಲ್ಲದೆ, ವಿದ್ಯಾರ್ಥಿಗಳು ಬೆಳಗ್ಗೆ ಎದ್ದು ವ್ಯಾಸಂಗ ಮಾಡುತ್ತಿದ್ದಾರೆಯೇ ಇಲ್ಲವೇ ಎಂದು ಪರೀಕ್ಷಿಸಲು ಆಯಾಯ ಶಾಲೆಯ ಶಿಕ್ಷಕರನ್ನು ನಿಯೋಜಿಸಿದ್ದು, ಪ್ರತಿದಿನ ಬೆಳಗ್ಗೆ ಅವರ ಮೊಬೈಲ್‌ಗೆ ಕರೆ ಮಾಡಿ ವಿಚಾರಿಸಿ, ಮಕ್ಕಳಲ್ಲಿ ವಿಷಯಗಳ ಅನುಮಾನಗಳಿದ್ದರೆ ಬಗೆಹರಿಸುವ ಬಗ್ಗೆಯೂ ವಿಶೇಷ ಗಮನಹರಿಸಲಾಗುತ್ತಿದೆ ಎಂದು ಬಿಇಓ ಸಿ.ಎನ್.ರಾಜು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

**ಫುಲ್ ಖುಷ್:** ಅಧಿಕಾರಿಗಳು ಬೆಳ್ಳಂಬೆಳಗ್ಗೆ ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ, ಪರಿಶೀಲನೆ ನಡೆಸುತ್ತಿರುವುದರಿಂದ ಪೋಷಕರಲ್ಲೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಹತ್ವ ಕುರಿತು ಜಾಗೃತಿ ಮೂಡುತ್ತಿದೆ. ಕೆಲವರು ಮನೆಗಳಲ್ಲಿ ಹೆಣ್ಣು ಮಕ್ಕಳನ್ನು ಪರೀಕ್ಷೆಗೆ ಓದಲು ಬಿಡದೇ ಕೆಲಸಕ್ಕೆ ನಿಯೋಜಿಸುತ್ತಿರುತ್ತಾರೆ. ಅಂತಹ ಪೋಷಕರಲ್ಲಿ ಜಾಗೃತಿ ಮೂಡಿಸಿ, ಹೆಣ್ಣು ಮಕ್ಕಳು ಓದಲು ಅವಕಾಶ ಕಲ್ಪಿಸುವಂತೆ ಮನವರಿಕೆ ಮಾಡಿಕೊಡಲಾಗುತ್ತಿದೆ. ಇದಕ್ಕೆ ಪೋಷಕರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದರು.

**ನಾಳೆ(ಮಾ.7) ಅಶೋಕಪುರಂ, ನಾಚನಹಳ್ಳಿ ಪಾಳ್ಯಕ್ಕೆ ಭೇಟಿ:** ನಮ್ಮ ವಲಯದ ವ್ಯಾಪ್ತಿಗೆ ಬರುವ ನಾಚನಹಳ್ಳಿ ಪಾಳ್ಯ, ಅಶೋಕ್‌ಪುರಂಗೆ ಗುರುವಾರ ಬೆಳಗ್ಗೆ ಭೇಟಿ ಕೊಟ್ಟು, ಇಲ್ಲಿನ ವಿದ್ಯಾರ್ಥಿಗಳಲ್ಲಿ ಪರೀಕ್ಷೆ ಕುರಿತು ಜಾಗೃತಿ ಮೂಡಿಸಲಾಗುವುದು ಎಂದು ಮಾಹಿತಿ ನೀಡಿದರು.

**ವಸಂತನಗರ, ತೊಣಚಿಕೊಪ್ಪಲ್‌ಗೆ ಭೇಟಿ:** ಮೈಸೂರಿನ ಜನತಾನಗರ, ವಸಂತನಗರ, ತೊಣಚಿಕೊಪ್ಪಲ್ ಬಡಾವಣೆಯಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ (ಕೆಪಿಎಸ್ ಶಾಲೆ ಕುವೆಂಪುನಗರ) ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿ, ಜಾಗೃತಿ ಮೂಡಿಸಲಾಗಿದೆ ಎಂದರು.

# ಮೈಸೂರು ಪಾಲಿಕೆಯಲ್ಲಿ ಶಾಸಕ ಶ್ರೀವತ್ಸರ ಕಚೇರಿ ಆರಂಭ

ಮೈಸೂರು, ಮಾ.6(ಎಂಕೆ)– ಮೈಸೂರು ನಗರಪಾಲಿಕೆ ಕೇಂದ್ರ ಕಚೇರಿಯಲ್ಲಿ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರ ನೂತನ ಕಾರ್ಯಾಲಯವನ್ನು ಉದ್ಘಾಟಿಸಲಾಯಿತು.

ಬುಧವಾರ ಸಂಸದ ಪ್ರತಾಪ್ ಸಿಂಹ ಶಾಸಕರ ನೂತನ ಕಚೇರಿ ಉದ್ಘಾಟಿಸಿ, ಶುಭ ಹಾರೈಸಿದರು. ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಶಾಸಕ ಟಿ.ಎಸ್.ಶ್ರೀವತ್ಸ, ಕ್ಷೇತ್ರದ ಮತದಾರರಿಗೆ ಹಾಗೂ ಸಾರ್ವಜನಿಕರಿಗೆ ಹತ್ತಿರದಲ್ಲಿರಬೇಕು ಎಂಬ ಉದ್ದೇಶದಿಂದ ನಗರಪಾಲಿಕೆ ಕೇಂದ್ರ ಕಚೇರಿಯಲ್ಲೇ ಕಾರ್ಯಾಲಯ ತೆರೆಯಲಾಗಿದೆ. ನಗರ ಬಸ್ ನಿಲ್ದಾಣ ಹತ್ತಿರದಲ್ಲೇ ಇರುವುದರಿಂದ ಕ್ಷೇತ್ರದ ಜನತೆ ಹಾಗೂ ಸಾರ್ವಜನಿಕರು ನನ್ನನ್ನು ಭೇಟಿ ಮಾಡಲು ಅನುಕೂಲವಾಗಲಿದೆ ಎಂದರು.

ಲೋಕಸಭೆ ಚುನಾವಣೆ ಬಳಿಕ ಪ್ರತಿನಿತ್ಯ ಬೆಳಗ್ಗೆ 7.30 ರಿಂದ 11.30ರವರೆಗೆ ಹಾಗೂ ಸಂಜೆ 4 ರಿಂದ ರಾತ್ರಿ 8 ಗಂಟೆಯವರೆಗೆ ಕಚೇರಿಯಲ್ಲೇ ಸಿಗಲಿದ್ದೇನೆ. ಉಳಿದ ಸಂದರ್ಭದಲ್ಲಿ ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದು, ಕ್ಷೇತ್ರದ ಜನರ ಕುಂದು–ಕೊರತೆ ಆಲಿಸುವ ನಿಟ್ಟಿನಲ್ಲಿ ಹೆಚ್ಚಿನ ಸಮಯ ನಿಗದಿ ಮಾಡಿಕೊಂಡಿದ್ದೇನೆ ಎಂದರು.



ಮೈಸೂರು ನಗರಪಾಲಿಕೆ ಕೇಂದ್ರ ಕಚೇರಿಯಲ್ಲಿ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರ ನೂತನ ಕಾರ್ಯಾಲಯವನ್ನು ಸಂಸದ ಪ್ರತಾಪ್ ಸಿಂಹ ಬುಧವಾರ ಉದ್ಘಾಟಿಸಿದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮತ್ತಿತರರಿದ್ದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಎಂಎಲ್‌ಸಿ ತೋಂಟದಾರ್ಯ, ಮಾಜಿ ಮೇಯರ್ ಶಿವಕುಮಾರ್, ಮಾಜಿ ಉಪ ಮೇಯರ್ ರೂಪ, ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಮ್ ಪ್ರಸಾದ್, ಕೆ.ಜೆ. ರಮೇಶ್, ಬಿಜೆಪಿ ರಾಜ್ಯ ವಕ್ತಾರ ಎಂ.ಜಿ. ಮಹೇಶ್, ನಗರ ಕಾರ್ಯದರ್ಶಿ ಬಿ.ಎಂ. ರಘು, ಮುಖಂಡರಾದ ಗಿರಿಧರ್, ಡಿ.ಟಿ. ಪ್ರಕಾಶ್, ಗೋಪಾಲ್ ರಾಜೇ ಅರಸ್, ಜೋಗಿ ಮಂಜು, ಕೆ.ಜೆ.ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

> **2 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲುತ್ತೇನೆ...!**
>
> ಸೈದ್ಧಾಂತಿಕ ಬದ್ಧತೆ, ಅಭಿವೃದ್ಧಿ ಕಾರ್ಯ, ಸದಾ ಬೆನ್ನಿಗೆ ನಿಲ್ಲುವ ಕಾರ್ಯಕರ್ತರ ಬೆಂಬಲದಿಂದ 2 ಲಕ್ಷಕ್ಕಿಂತ ಹೆಚ್ಚು ಅಂತರದಲ್ಲಿ ಮತ್ತೆ ಗೆಲ್ಲುತ್ತೇನೆ. ಇತ್ತೀಚಿನ ಬೆಳವಣಿಗೆ ನೋಡಿದರೆ, 3 ಲಕ್ಷವಾದರೂ ಆಶ್ಚರ್ಯವಿಲ್ಲ ಎಂದು ಸಂಸದ ಪ್ರತಾಪ್ ಸಿಂಹ ವಿಶ್ವಾಸ ವ್ಯಕ್ತಪಡಿಸಿದರು.
>
> ನಗರಪಾಲಿಕೆ ಕಚೇರಿಯಲ್ಲಿ ಬುಧವಾರ ಕೆ.ಆರ್.ಕ್ಷೇತ್ರದ ಶಾಸಕರ ಕಚೇರಿ ಉದ್ಘಾಟಿಸಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಲೋಕಸಭಾ ಚುನಾವಣೆ ಎಂದರೆ, ದೇಶದ ಚುನಾವಣೆ. ಈ ಚುನಾವಣೆಯಲ್ಲಿ ದೇಶದ ಜನ ಜಾತಿ–ಮತ ಬಿಟ್ಟು ಭಾರತೀಯ ಎಂಬ ಮನೋಭಾವದಿಂದ ಮತ ನೀಡುತ್ತಾರೆ. ದೇಶಕ್ಕೆ ಮೋದಿ ಬೇಕೆಂದು ಜನ ತೀರ್ಮಾನ ಮಾಡಿದ್ದಾರೆ. ಅದರಂತೆ ಕಳೆದ ಎರಡು ಬಾರಿಯೂ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರೇಳಿಕೊಂಡು ಗೆದ್ದಿದ್ದೇನೆ. ಈ ಬಾರಿಯೂ ಗೆಲ್ಲುತ್ತೇನೆ ಎಂದರು.
>
> ರಾಜ್ಯ ಸರ್ಕಾರದ ಐದು ಗ್ಯಾರಂಟಿಗಳು ಠುಸ್ ಆಗಿವೆ ಎಂಬುದು ಈಗಾಗಲೇ ರಾಜ್ಯದ ಜನತೆಗೆ ಅರಿವಾಗಿದೆ. ಮುಖ್ಯವಾಗಿ ಉಚಿತವಾಗಿ ಕೊಡುವ ಯೋಜನೆಯನ್ನು ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿ ಅವರೇ ಮೊದಲು ಆರಂಭಿಸಿದ್ದು. ಉಚಿತ ಅಕ್ಕಿ ವಿತರಣೆ ಆರಂಭವಾಗಿ 24 ವರ್ಷವೇ ಆಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವಾಜಪೇಯಿ ಅವರು ಮಾಡಿದ್ದ ಯೋಜನೆಗಳನ್ನೇ ಪುನರುಚ್ಚರಿಸಿ ಸಾರುತ್ತಿದ್ದಾರೆ. ಮೈಸೂರು ಭಾಗದಲ್ಲಿ ಸಿದ್ದರಾಮಯ್ಯ ಅವರಿಗೆ ಟಕ್ಕರ್ ಕೊಡುವವರು ಯಾರಾದರೂ ಇದ್ದರೆ ಪ್ರತಾಪ್ ಸಿಂಹ ಮಾತ್ರ ಎಂಬುದು ಅವರಿಗೂ ಗೊತ್ತಿದೆ. ಹಾಗಾಗಿ ಎದುರಾಳಿ ಯಾರೆಂಬುದನ್ನು ನೋಡದೆ ನಮ್ಮಲ್ಲಿನ ಸೈದ್ಧಾಂತಿಕ ಬದ್ಧತೆ, ಮಾಡಿರುವ ಅಭಿವೃದ್ಧಿ ಕಾರ್ಯ ಹಾಗೂ ಸದಾ ಬೆನ್ನಿಗೆ ನಿಲ್ಲುವ ಕಾರ್ಯಕರ್ತರ ಬಲದಿಂದ ಮತ್ತೆ ಲೋಕಸಭೆಗೆ ಆಯ್ಕೆಯಾಗುತ್ತೇನೆ ಎಂದರು.

# ಮೈಸೂರಲ್ಲಿ ಯುವತಿ ನಾಪತ್ತೆ



ಮೈಸೂರು, ಮಾ.6– ಯುವತಿ ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಠಾಣಾ ವ್ಯಾಪ್ತಿಯಲ್ಲಿ ವಾಸವಿದ್ದ ಪ್ರಿಯಾಂಕ ರಾಥೋಡ್(18) ಮಾ.1 ರಂದು ಮಧ್ಯಾಹ್ನ ಮೈಸೂರು ಕೈಗಾರಿಕಾ ಪ್ರದೇಶದಲ್ಲಿನ ರಾಣಿ ಮದ್ರಾಸ್ ರಸ್ತೆಯಲ್ಲಿ ಪ್ಲಾಸ್ಟಿಕ್ ಪೈಪ್ ಸೆಂಟರ್‌ನಿಂದ ಹೋದವರು ಈವರೆಗೂ ಮನೆಗೆ ವಾಪಸ್ ಬಂದಿಲ್ಲ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈಕೆಯ ಬಗ್ಗೆ ತಿಳಿದಿರುವವರು ಹೆಬ್ಬಾಳ ಠಾಣೆ ದೂ.ಸಂ: 0821–2418318 ಅಥವಾ ಮೈಸೂರು ನಗರ ಪೊಲೀಸ್ ಕಂಟ್ರೋಲ್ ರೂಂ ಸಂ:2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

# ಮಂಡ್ಯ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ

**ಮಂಡ್ಯ:** ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದ ಅಭಿವೃದ್ಧಿ ಕಾಮಗಾರಿಯ ಉದ್ಘಾಟನೆ ಹಾಗೂ 2023–24ನೇ ಸಾಲಿನ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಮಾ.11 ಹಾಗೂ 12 ರಂದು ಬೆಳಿಗ್ಗೆ 10 ಗಂಟೆಗೆ ಮಂಡ್ಯ ಸರ್.ಎಂ. ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಂಘಟಿಸಲಾದ ತಾಲೂಕು ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಭಾಗವಹಿಸಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಹಾಗೂ ಗುಂಪು ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದವರು ಹಾಗೂ ನೇರ ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವ ಸ್ಪರ್ಧಿಗಳು ಮಾ.11 ರಂದು ಬೆಳಿಗ್ಗೆ 9 ಗಂಟೆಗೆ ಮಂಡ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಲ್ಲಿ ವರದಿ ಮಾಡಿಕೊಂಡು ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮಂಡ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಮೆಡಿಕಲ್ ರೆಪ್‌ಗಳು ಆಯೋಜಿಸಿದ್ದ ಕೆಎಂಪಿಎಲ್ 5ನೇ ಆವೃತ್ತಿ ಕ್ರಿಕೆಟ್ ಪಂದ್ಯಾವಳಿಯ ಚಾಂಪಿಯನ್ ತಂಡಕ್ಕೆ ಶಾಸಕ ಕೆ. ಹರೀಶ್‌ಗೌಡ ಬಹುಮಾನ ವಿತರಿಸಿದರು. ಮೈಸೂರಿನ ಮಾನಸ ಗಂಗೋತ್ರಿ ಜೆ ಸಿ ಕಾಲೇಜು ಮೈದಾನದಲ್ಲಿ ಮೂರು ದಿನ ನಡೆದ ಈ ಪಂದ್ಯಾವಳಿಯಲ್ಲಿ 10 ತಂಡಗಳು ಭಾಗವಹಿಸಿದ್ದವು. ಫೈನಲ್ ಪಂದ್ಯದಲ್ಲಿ ಡೈನಾಮಿಕ್ ದೂಡ್ಸ್ ತಂಡವನ್ನು ಮಣಿಸಿದ ವಿ ಇ ಸರ್ಜಿಕಲ್ ಚಾಂಪಿಯನ್ ಆಗಿ ಹೊರಹೊಮ್ಮಿತು. ವಿಜೇತ ತಂಡಕ್ಕೆ 50 ಸಾವಿರ ನಗದು ಹಾಗೂ ಬೃಹತ್ ಟ್ರೋಫಿ, ರನ್ನರ್ಸ್ ಅಪ್ ತಂಡಕ್ಕೆ 30 ಸಾವಿರ ನಗದು ಹಾಗೂ ಆಕರ್ಷಕ ಟ್ರೋಫಿ ನೀಡಲಾಯಿತು. ಉತ್ತಮ ಪ್ರದರ್ಶನ ನೀಡಿದ ಪ್ರತಾಪ್ ಹಾಗೂ ರಾಜು ಅವರಿಗೆ ಬೈಸಿಕಲ್ ಬಹುಮಾನವಾಗಿ ನೀಡಲಾಯಿತು.

# ಎರಡು ಬೈಕ್‌ಗಳ ಮುಖಾಮುಖಿ ಡಿಕ್ಕಿ: ಇಬ್ಬರು ಸಾವು

ಗುಡ್ಡೆಹೊಸೂರು, ಮಾ.6– ಎರಡು ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಇಬ್ಬರು ಮೃತಪಟ್ಟಿದ್ದು, ಒಬ್ಬನಿಗೆ ತೀವ್ರವಾಗಿ ಗಾಯವಾಗಿರುವ ಘಟನೆ ಇಲ್ಲಿನ ಸಿದ್ದಾಪುರ ರಸ್ತೆಯ ತಿರುವಿನಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಸಮೀಪದ ಹೊಸಪಟ್ಟಣ ಗ್ರಾಮದ ನಿವಾಸಿ, ಕುಶಾಲನಗರದ ಐಸಿಡಿಸಿ ಸಂಸ್ಥೆಯ ಭದ್ರತಾ ಸಿಬ್ಬಂದಿ ನಿಶ್ವಂತ್(21) ಮತ್ತು ರಾಣಿಗೇಟ್ ಗ್ರಾಮದ ಶಿವಕುಮಾರ್(20) ಅಪಘಾತದಲ್ಲಿ ಮೃತಪಟ್ಟಿದ್ದು, ರಾಣಿಗೇಟ್ ಗ್ರಾಮದ ಸಿದ್ದೇಶ್(21) ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ರಾತ್ರಿ ಸುಮಾರು 9 ಗಂಟೆಯಲ್ಲಿ ನಿಶ್ವಂತ್ ಹೊಸಪಟ್ಟಣ ಗ್ರಾಮದಿಂದ ಕುಶಾಲನಗರಕ್ಕೆ ಬೈಕ್‌ನಲ್ಲಿ ಹೋಗುತ್ತಿದ್ದ. ಇದೇ ವೇಳೆ ಗುಡ್ಡೆಹೊಸೂರಿನಿಂದ ರಾಣಿಗೇಟ್ ಗ್ರಾಮಕ್ಕೆ ಶಿವಕುಮಾರ್ ಹಾಗೂ ಸಿದ್ದೇಶ್ ಹೋಗುತ್ತಿದ್ದ ಬೈಕ್ ಸಿದ್ದಾಪುರ ರಸ್ತೆಯ ತಿರುವಿನಲ್ಲಿ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಪರಿಣಾಮ ನಿಶ್ವಂತ್ ಮತ್ತು ಶಿವಕುಮಾರ್ ಮೃತಪಟ್ಟಿದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್, ಡಿವೈಎಸ್ಪಿ ಗಂಗಾಧರಪ್ಪ, ವೃತ್ತ ನಿರೀಕ್ಷಕ ರಾಜೇಶ್ ಕೊಟ್ಯಾನ್, ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಗಳಾದ ಪ್ರಕಾಶ್ ಮತ್ತು ಕುಸುಮ ಸ್ಥಳ ಪರಿಶೀಲಿಸದರು.

ಈ ಸಂಬಂಧ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಿಶ್ವಂತ್



ಶಿವಕುಮಾರ್

# ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಕೆರೆ ತುಂಬಿಸಲು ಆಗ್ರಹಿಸಿ ರೈತರ ಪ್ರತಿಭಟನೆ

ಮೈಸೂರು, ಮಾ.6(ಎಂಟಿವೈ)– ಕಾವೇರಿ, ಕಬಿನಿ ಅಚ್ಚುಕಟ್ಟು ಪ್ರದೇಶದ ಕೆರೆಗಳಿಗೆ ನೀರು ತುಂಬಿಸಿ, ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ನೀಗಿಸುವಂತೆ ಒತ್ತಾಯಿಸಿ ಮೈಸೂರಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಗನ್‌ಹೌಸ್ ವೃತ್ತದಿಂದ ಕಾಡಾ ಕಚೇರಿವರೆಗೆ ಮೆರವಣಿಗೆ ನಡೆಸಿದ ರೈತರು, ಕಾಡಾ ಕಚೇರಿ ಮುಂದೆ ಧರಣಿ ನಡೆಸಿ ಜಾನುವಾರುಗಳ ಹಿತ ಕಾಯಲು ನಾಲೆಗಳಿಗೆ ನೀರು ಹರಿಸಿ, ಕೆರೆಗಳನ್ನು ತುಂಬಿಸುವಂತೆ ಆಗ್ರಹಿಸಿದರು. ಬರಗಾಲದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಬಹುತೇಕ ಕೆರೆಗಳು ಬತ್ತಿ ಹೋಗಿವೆ. ಜಾನುವಾರುಗಳಿಗೆ ಮೇವಿನ ಕೊರತೆ ಒಂದೆಡೆ ಕಾಡುತ್ತಿದ್ದರೆ, ಮತ್ತೊಂದೆಡೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುತ್ತಿದೆ. ಈ ಹಿನ್ನೆಲೆಯಲ್ಲಿ ನಾಲೆಗಳ ಮೂಲಕ ಕೆರೆಗಳಿಗೆ ನೀರುಣಿಸುವಂತೆ ಪ್ರತಿಭಟನಾಕಾರರು ಮನವಿ ಮಾಡಿದರು.

ಈ ವೇಳೆ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ನೀರಾವರಿ ಸಚಿವರೂ ಆದ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರಾಜ್ಯದ ಜನರ ಹಿತ ಕಾಯದೆ ಒತ್ತಡಕ್ಕೆ ಮಣಿದು ಕಾವೇರಿ ಅಚ್ಚುಕಟ್ಟು ಪ್ರದೇಶದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸಿ ಜಲಾಶಯ ಖಾಲಿ ಮಾಡಿದ್ದರಿಂದ ಇಂದು ಕಾವೇರಿ ಕಣಿವೆಯ ಜನರು ಸಂಕಷ್ಟಕ್ಕೀಡಾಗುವಂತಾಗಿದೆ. ಬೆಂಗಳೂರಿಗೆ ಕುಡಿಯುವ ನೀರು ಸರಬರಾಜು ಮಾಡಲಾಗದಂತಹ ದುಸ್ಥಿತಿ ನಿರ್ಮಾಣವಾಗಿದೆ. ಕಾವೇರಿ ಅಚ್ಚುಕಟ್ಟು ಭಾಗದ ರೈತರು ನೀರಿನ ಸಮಸ್ಯೆಗೆ ಬಲಿಯಾಗಿದ್ದಾರೆ. ಅಚ್ಚುಕಟ್ಟು ಭಾಗದ ಕೆರೆಕಟ್ಟೆಗಳು ಒಣಗಿ ಹೋಗಿವೆ. ಜನ–ಜಾನುವಾರುಗಳು ಕುಡಿಯುವ ನೀರಿಗೆ ಪರಿತಪಿಸುವಂತಾಗಿದೆ. ಸರ್ಕಾರ ಕೂಡಲೇ ನಾಲೆಗಳಿಗೆ ನೀರು ಹರಿಸಿ ರೈತರು, ಜಾನುವಾರುಗಳನ್ನು ರಕ್ಷಿಸಬೇಕು ಎಂದು ಒತ್ತಾಯಿಸಿದರು.



ಕೆರೆಗಳಿಗೆ ನೀರು ತುಂಬಿಸುವಂತೆ ಕಾಡಾ ಕಚೇರಿ ಬಳಿ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಪ್ರತಿಭಟನೆ ಮಾಡಿದರು.

ರಾಜ್ಯದಲ್ಲಿ ಈ ಬಾರಿ ಸೂಕ್ತ ಮಳೆಯಾಗದೇ ಬರಗಾಲ ಆವರಿಸಿದೆ. ರೈತರು ಮಾಡಿದ ಸಾಲ ತೀರಿಸಲಾಗದೇ ಸಂಕಷ್ಟಕ್ಕೀಡಾಗಿದ್ದಾರೆ. ಸರ್ಕಾರವೇ ಬರಗಾಲ ಘೋಷಣೆ ಮಾಡಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಬರ ಪರಿಹಾರ ಎಕರೆಗೆ ಕನಿಷ್ಠ 25 ಸಾವಿರ ಹಾಗೂ ಜೀವನ ನಿರ್ವಹಣೆಗೆ ಪ್ರತಿ ತಿಂಗಳು ಪ್ರತಿ ಕುಟುಂಬಕ್ಕೆ 10 ಸಾವಿರ ರೂ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಪಿ.ಸೋಮಶೇಖರ್, ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಜಿಲ್ಲಾ ಉಪಾಧ್ಯಕ್ಷ ಮಾರ್ಬಳ್ಳಿ ನೀಲಕಂಠಪ್ಪ, ಮುಖಂಡರಾದ ಸಿದ್ದೇಶ್, ವೆಂಕಟೇಶ್, ರಾಜೇಶ್, ದೇವನೂರು ವಿಜಯೇಂದ್ರ, ಪ್ರದೀಪ್, ಸೂರಿ, ಉಮೇಶ್, ಕಾಟೂರು ನಾಗೇಶ್, ಅಂಬಳೆ ಮಂಜುನಾಥ್, ಸುನಿಲ್, ಶಿವಸ್ವಾಮಿ ಚೇತನ್, ಶಂಭು, ಶಾಂತರಾಜ್, ಶಿವಮೂರ್ತಿ, ಮಂಜುನಾಥ್ ಶಿವಕುಮಾರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

## ವಿದ್ಯಾರ್ಥಿಗಳೊಂದಿಗೆ ಅಂಡರ್ ವಾಟರ್ ಮೆಟ್ರೋ ಸುರಂಗದಲ್ಲಿ ಪ್ರಧಾನಿ ಮೋದಿ ಪ್ರಯಾಣ

ಕೊಲ್ಕತ್ತ: ಪ್ರಧಾನಮಂತ್ರಿ ನರೇಂದ್ರ ಮೋದಿ, ಇಂದು ಪಶ್ಚಿಮ ಬಂಗಾಳದ ಕೋಲ್ಕತಾದಲ್ಲಿ ಅನಾವರಣಗೊಳಿಸಿದ ಭಾರತದ ಮೊದಲ "ಅಂಡರ್ ವಾಟರ್ ಮೆಟ್ರೋ ಸುರಂಗ'' ಮೂಲಕ ಪ್ರಯಾಣವನ್ನು ಮಾಡಿದರು.



ಪ್ರಯಾಣದ ಸಮಯದಲ್ಲಿ ಅವರು ಮಹಾಕರನ್ ಮೆಟ್ರೋ ನಿಲ್ದಾಣದಲ್ಲಿ ದೇಶದ ಉದ್ಘಾಟನಾ ಅಂಡರ್ ವಾಟರ್ ಮೆಟ್ರೋ ರೈಲಿನಲ್ಲಿ ಕುಳಿತಿದ್ದ ಶಾಲಾ ವಿದ್ಯಾರ್ಥಿಗಳೊಂದಿಗೆ ಸಂಭಾಷಣೆ ಕೂಡ ನಡೆಸಿದರು. ಅಂಡರ್ ವಾಟರ್ ಮೆಟ್ರೋದಲ್ಲಿ ಪ್ರಧಾನಿಯೊಂದಿಗೆ ಮೆಟ್ರೋ ಪ್ರಯಾಣವನ್ನು ಪ್ರಾರಂಭಿಸುವ ಮೊದಲು, ಶಾಲಾ ವಿದ್ಯಾರ್ಥಿನಿ ಪ್ರಜ್ಞಾ, 'ಪ್ರಧಾನಿ ಮೋದಿಯವರನ್ನು ಭೇಟಿಯಾಗಲು ಮತ್ತು ಅವರೊಂದಿಗೆ ನೀರೊಳಗಿನ ಮೆಟ್ರೋದಲ್ಲಿ ಪ್ರಯಾಣಿಸಲು ನಾನು ತುಂಬಾ ಉತ್ಸುಕನಾಗಿದ್ದೇನೆ' ಎಂದು ಹೇಳಿದರು.

ಏತನ್ಮಧ್ಯೆ, ಮತ್ತೊಬ್ಬ ಶಾಲಾ ವಿದ್ಯಾರ್ಥಿನಿ ಇಶಿಕಾ ಮಹತೋ ಅವರು ಪ್ರಧಾನಿ ಮೋದಿಯವರನ್ನು ಭೇಟಿಯಾಗುವ ಅವಕಾಶ ಸಿಕ್ಕಿದ್ದಕ್ಕೆ ತುಂಬಾ ಸಂತೋಷವಾಗಿದೆ ಎಂದು ಹೇಳಿದ್ದಾರೆ. ಹೌರಾ ಮೈದಾನ–ಎಸ್ಪ್ಲನೇಡ್ ಮೆಟ್ರೋ ವಿಭಾಗವನ್ನು ಒಳಗೊಂಡಿರುವ ಕೋಲ್ಕತಾ ಮೆಟ್ರೋ ವಿಸ್ತರಣೆಯು ಮಹತ್ವದ ನದಿಯ ಕೆಳಗೆ ಹಾದುಹೋಗುವ ಭಾರತದ ಮೊದಲ ಸುರಂಗ ಮೆಟ್ರೋ ಮಾರ್ಗವಾಗಿದೆ. ಬುಧವಾರ ಪ್ರಧಾನಿ ಮೋದಿ ಅವರು ಕೋಲ್ಕತ್ತಾದಲ್ಲಿ 15,400 ಕೋಟಿ ರೂ.ಗಳ ವಿವಿಧ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಿದರು.

## ಇಂದು ಬಿಜೆಪಿ ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆ ಸಾಧ್ಯತೆ

ನವದೆಹಲಿ, ಮಾ. 6– ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಬುಧವಾರ ನಡೆದ ಸಂಸದೀಯ ಮಂಡಳಿ ಸಭೆಯಲ್ಲಿ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿದ್ದು, ಗುರುವಾರ ಬಿಜೆಪಿ ಅಭ್ಯರ್ಥಿಗಳ 2ನೇ ಪಟ್ಟಿ ಬಿಡುಗಡೆಯಾಗುವ ಸಾಧ್ಯತೆ ಇದೆ.

ಈ ಸಭೆಯಲ್ಲಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭಾಗವಹಿಸಿದ್ದರು. ಸಭೆಯು 5 ಗಂಟೆಗಳ ಕಾಲ ನಡೆದಿದ್ದು, ಪ್ರತಿಯೊಂದು ಕ್ಷೇತ್ರದ ಅಭ್ಯರ್ಥಿಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಪಟ್ಟಿ ಅಂತಿಮಗೊಳಿಸಲಾಯಿತು.

## ರಾಮೇಶ್ವರಂ ಕೆಫೆ ಸ್ಫೋಟದ ಆರೋಪಿ ಸುಳಿವು ನೀಡಿದ್ರೆ 10 ಲಕ್ಷ ಬಹುಮಾನ

**ಆರೋಪಿ ಫೋಟೋ ಬಿಡುಗಡೆ ಮಾಡಿದ NIA**

ಬೆಂಗಳೂರು, ಮಾ.6– ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟ ಪ್ರಕರಣದ ವಿಚಾರಣೆಯನ್ನು ತೀವ್ರಗೊಳಿಸಿರುವ ಎನ್‌ಐಎ ಬಾಂಬರ್ ಫೋಟೋ ಬಿಡುಗಡೆ ಮಾಡಿದ್ದು ಸುಳಿವು ನೀಡಿದವರಿಗೆ 10 ಲಕ್ಷ ರೂಪಾಯಿ ಬಹುಮಾನ ಘೋಷಿಸಿದೆ.



ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ತನಿಖೆಯನ್ನು NIA ಅಧಿಕಾರಿಗಳು ಅಧಿಕೃತವಾಗಿ ಕೈಗೆತ್ತಿಕೊಂಡಿದ್ದು, ಇದೀಗ ಬಾಂಬರ್ ಫೋಟೋ ಬಿಡುಗಡೆ ಮಾಡಿದೆ. ಅಲ್ಲದೇ ಈ ಬಾಂಬರ್ ಬಗ್ಗೆ ಸುಳಿವು ನೀಡಿದವರಿಗೆ 10 ಲಕ್ಷ ರೂಪಾಯಿ ಬಹುಮಾನ ನೀಡಲಾಗುವುದು ಎಂದು ಘೋಷಣೆ ಮಾಡಿದೆ. ಇದಕ್ಕೂ ಮುನ್ನ ಸಿಸಿಬಿ ನಡೆಸಿದ್ದ ತನಿಖೆ ವೇಳೆ ಬಾಂಬರ್ ಮಾಸ್ಕ್ ಹಾಕಿಕೊಳ್ಳದ ಫೋಟೋ ಪತ್ತೆಯಾಗಿತ್ತು. ಇದೀಗ ಆ ಫೋಟೋವನ್ನು ಎನ್‌ಐಎ ಬಿಡುಗಡೆ ಮಾಡಿದೆ. ಅಲ್ಲದೇ ಆರೋಪಿ ಬಗ್ಗೆ ತಿಳಿದರೆ ಕೂಡಲೇ 080–29510900, 8904241100 ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡುವಂತೆ ಎನ್‌ಐಎ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

NIA ಅಧಿಕಾರಿಗಳು ನಿನ್ನೆ ಕೆಫೆಗೆ ಭೇಟಿ ನೀಡಿ ಸ್ಥಳ ಮಹಜರು ನಡೆಸಿದ್ದರು. ಕ್ಯಾಶ್ ಕೌಂಟರ್, ಸಿಸಿಕ್ಯಾಮರಾ ಪರಿಶೀಲನೆ ನಡೆಸಿ ಸಿಬ್ಬಂದಿಯಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಇನ್ನು ಪೊಲೀಸರು ಸಹ ಸ್ಥಳದಲ್ಲಿ ಕಲೆ ಹಾಕಿರುವ 38 ಸ್ಯಾಂಪಲ್‌ಗಳ ಮಾಹಿತಿಯನ್ನು NIA ಅಧಿಕಾರಿಗಳಿಗೆ ನೀಡಿದ್ದಾರೆ.

## ಮಾ.15 ವಿಶ್ವ ಗ್ರಾಹಕರ ದಿನಾಚರಣೆ

ಮೈಸೂರು, ಮಾ.6(ಎಸ್‌ಪಿಎನ್)– ವಿಶ್ವಾದ್ಯಂತ ವಿಶ್ವ ಗ್ರಾಹಕರ ದಿನಾಚರಣೆಯನ್ನು ಮಾ.15 ರಂದು ಆಚರಿಸಲಿದ್ದು, ಮೈಸೂರಲ್ಲೂ ಮೈಸೂರು ಗ್ರಾಹಕರ ಪರಿಷತ್ (ಮೈಗ್ರಾಪ) ವಿಶಿಷ್ಟವಾಗಿ ಆಚರಿಸಲು ತೀರ್ಮಾನಿಸಿದೆ.

1989ರಲ್ಲಿ ಡಬ್ಲ್ಯುಸಿಆರ್‌ಡಿಯಲ್ಲಿ ಮೈಸೂರು ಗ್ರಾಹಕರ ಪರಿಷತ್ ಆರಂಭಿಸಲಾಗಿದ್ದು, ಅಂದಿನಿಂದಲೂ 'ಗ್ರಾಹಕರೇ ರಾಜ' ಎಂಬ ಸಂದೇಶದೊಂದಿಗೆ ಆಚರಿಸಲಾಗುತ್ತದೆ. ಈ ನಿಟ್ಟಿನಲ್ಲಿ ಮಾ.10ರಂದು ಸಂಜೆ 4 ಗಂಟೆಗೆ ಯಾದವಗಿರಿ ವಿವೇಕಾನಂದ ರಸ್ತೆಯ ಮೈಗ್ರಾಪ ಕಚೇರಿಯಲ್ಲಿ ಸದಸ್ಯರ ಸಾಮಾನ್ಯ ಸಭೆ ಕರೆಯಲಾಗಿದ್ದು, ಎಂದು ಮೈಗ್ರಾಪ ಕಚೇರಿ ಪ್ರಕಟಣೆ ತಿಳಿಸಿದೆ. ವಿವರಗಳಿಗಾಗಿ ದೂ.ಸಂಖ್ಯೆ:0821–2515150 ಸಂಪರ್ಕಿಸಬಹುದು.



ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾದ ನಾಡೋಜ ಪ್ರೊ. ಭಾಷ್ಯಂ ಸ್ವಾಮೀಜಿ ಅವರನ್ನು ಸುತ್ತೂರು ಮಠದ ವತಿಯಿಂದ ಗೌರವ ಸಮರ್ಪಿಸಲಾಯಿತು. ಚಿತ್ರದಲ್ಲಿ ನೀಲಕಂಠಸ್ವಾಮಿ ಮಠದ ಶ್ರೀ ಸಿದ್ದಮಲ್ಲ ಸ್ವಾಮಿ, ಕುಂದೂರು ಮಠದ ಶಾಂತಚಂದ್ರ ಸ್ವಾಮೀಜಿ, ಬರಡನಪುರ ಮಠದ ಶ್ರೀ ಪರಶಿವಮೂರ್ತಿ ಸ್ವಾಮೀಜಿ, ಮುಡಿಗುಂಡ ಮಠದ ಶ್ರೀಕಂಠಸ್ವಾಮಿ, ಪಂಚಗವಿ ಮಠದ ಶ್ರೀಗುರು ಬಸವಲಿಂಗ ಸ್ವಾಮಿ, ಮೈಸೂರು ವಿಜಯನಗರ ಯೋಗನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ಇದ್ದಾರೆ.



ಮೈಸೂರು ಮಹಾನಗರಪಾಲಿಕೆಯಲ್ಲಿ ಕೆಆರ್ ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರ ಕಚೇರಿ ಉದ್ಘಾಟನೆ ಸಂದರ್ಭದಲ್ಲಿ ಸಂಸದ ಪ್ರತಾಪ್ ಸಿಂಹ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮಾಜಿ ಮೇಯರ್ ಶಿವಕುಮಾರ್, ಯಶಸ್ವಿ ಸೋಮಶೇಖರ್, ಇನ್ನಿತರರು ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.

## ಪಾಕ್ ಪರ ಘೋಷಣೆ ಕೂಗಿದವರಿಗೆ ಕಾಂಗ್ರೆಸ್ ನಂಟು: ಸಿ.ಟಿ.ರವಿ ಪ್ರಶ್ನೆ

ಬೆಂಗಳೂರು, ಮಾ.6(ಕೆಎಂಶಿ)– ರಾಜ್ಯದ ಶಕ್ತಿ ಕೇಂದ್ರ ವಿಧಾನ ಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿದ ಮೂವರನ್ನು ಸರ್ಕಾರ ಬಂಧಿಸಿದೆಯಾದರೂ, ಎಫ್‌ಎಸ್‌ಎಲ್ ವರದಿಯನ್ನು ಏಕೆ ಬಿಡುಗಡೆ ಮಾಡಿಲ್ಲ ಎಂದು ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಇಂದಿಲ್ಲಿ ಪ್ರಶ್ನಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಂಧಿತರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ತಬ್ಬಿಕೊಂಡಿರುವ ಫೋಟೋಗಳು ಸುದ್ದಿ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ. ದೇಶದ್ರೋಹಿಗಳಿಗೂ ಕಾಂಗ್ರೆಸ್ ನಾಯಕರಿಗೂ ಅಪ್ಪುಗೆಯ ನಂಟಿದೆ ಎಂದು ನಮಗೆ ತಿಳಿದಿರಲಿಲ್ಲ, 'ಪಾಕಿಸ್ತಾನ ಜಿಂದಾಬಾದ್' ನಂಟು ಅಂದುಕೊಂಡಿದ್ದಕ್ಕಿಂತ ಹೆಚ್ಚಾಗಿಯೇ ಇದೆ. ಕೂಡಲೇ ಎಫ್‌ಎಸ್‌ಎಲ್ ವರದಿ ಬಿಡುಗಡೆ ಮಾಡಬೇಕು.

ಘಟನೆ ನಡೆದ ಮರುದಿನವೇ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿ 'ಅವರು ಹಾಗೆ ಕೂಗಿಲ್ಲ, ಪಾಕಿಸ್ತಾನ ಜಿಂದಾಬಾದ್ ಎಂದು ಇಲ್ಲವೇ ಇಲ್ಲ' ಎಂದಿದ್ದರು. ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯದ ಒಬ್ಬೊಬ್ಬ ಸಚಿವರು ಒಂದೊಂದು ರೀತಿ ಹೇಳಿಕೆ ಕೊಡುತ್ತಿದ್ದಾರೆ, ಕೆಲವರು ಬಾಂಬ್ ಇಟ್ಟವರು ಬಿಜೆಪಿಯವರೇ ಇರಬಹುದು ಎಂದಿದ್ದಾರೆ.

2000 ಇಸವಿಯಲ್ಲಿ ಚರ್ಚ್‌ಗಳ ಮೇಲೆ ಬಾಂಬ್ ಸ್ಫೋಟ ಪ್ರಕರಣ ನಡೆದಾಗ, ಅಂದಿನ ಗೃಹ ಸಚಿವ, ಈಗಿನ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ತನಿಖೆಗೆ ಮುಂಚೆಯೇ 'ಘಟನೆ ಹಿಂದೆ ಆರೆಸ್ಸೆಸ್ ಪಿತೂರಿ ಇದೆ' ಎಂದು ಫರ್ಮಾನು ಹೊರಡಿಸಿ, ಸಾರ್ವಜನಿಕ ಹೇಳಿಕೆಯನ್ನೂ ನೀಡಿದ್ದರು.

ತನಿಖೆ ನಂತರ, ಪಾಕಿಸ್ತಾನ ಪ್ರೇರಿತ ಭಯೋತ್ಪಾದಕ ಸಂಘಟನೆಯವರು ಚರ್ಚ್‌ಗಳಿಗೆ ಬಾಂಬ್ ಇಟ್ಟಿದ್ದರು ಎಂಬುದು ಬೆಳಕಿಗೆ ಬಂತು. ಅಂದು ಫ್ಲೈಓವರ್‌ನಲ್ಲಿ ಬಾಂಬ್ ಒಯ್ಯುವಾಗ ಸ್ಫೋಟ ಸಂಭವಿಸಿ ಭಯೋತ್ಪಾದಕನೂ ಸತ್ತಿದ್ದ, ಭಯೋತ್ಪಾದನಾ ಜಾಲವೂ ಹೊರಗಡೆ ಬಂದಿತ್ತು.

ಕಾಂಗ್ರೆಸ್ ಸಚಿವರು ಭಯೋತ್ಪಾದಕರನ್ನು ರಕ್ಷಿಸುವ ರೀತಿಯಲ್ಲಿ ಹೇಳಿಕೆ ಕೊಡುತ್ತಿದ್ದಾರೆ. ಇಂಥ ವಿಷಯದಲ್ಲಿ ರಾಜಕಾರಣ ಮಾಡುವುದು ಬೇಡ ಎಂಬುದಾಗಿ ಮುಖ್ಯಮಂತ್ರಿ ಹೇಳುತ್ತಾರೆ. ಇನ್ನೊಬ್ಬ ಸಚಿವರು ಭೀತರಾಗದಿರಿ, ಇದೊಂದು ಲಘು ಸ್ಫೋಟ ಎಂದಿದ್ದಾರೆ. ಪ್ರಕರಣದ ತನಿಖೆಗೆ ಮೊದಲೇ ವಿಷಯಾಂತರ ಮಾಡುವ, ದಿಕ್ಕು ತಪ್ಪಿಸುವ ಕೆಲಸವನ್ನು ಕರ್ನಾಟಕದ ಕಾಂಗ್ರೆಸ್ ಸಚಿವರು ಮಾಡುತ್ತಿರುವುದು, ಯಾರನ್ನೋ ರಕ್ಷಿಸುವ ಉದ್ದೇಶ ಹೊಂದಿದ್ದಾರೆ ಎಂಬ ಅನುಮಾನಕ್ಕೆ ಕಾರಣವಾಗಿದೆ ಎಂದರು.

## ಸಂಯೋಜಕರಾಗಿ ದೇವಗಳ್ಳಿ ಸೋಮಶೇಖರ್ ಆಯ್ಕೆ



ಮೈಸೂರು, ಮಾ.6–ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮಿತಿಯ ಸಂಘಟನಾ ಸಂಯೋಜಕರಾಗಿ ದೇವಗಳ್ಳಿ ಸೋಮಶೇಖರ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ರೈತರ ಒಕ್ಕಲೆಬ್ಬಿಸಿ ನಕಲಿ ದಾಖಲೆ ಮೂಲಕ ಪ್ರಭಾವಿಗಳಿಗೆ ಸರ್ಕಾರಿ ಜಮೀನು: ಸಮತಾ ಸೈನಿಕ ದಳ ಪ್ರತಿಭಟನೆ



ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಬಳಿ ಕರ್ನಾಟಕ ಸಮತಾ ಸೈನಿಕ ದಳದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.6(ಎಂಟಿವೈ)– ಸರ್ಕಾರಿ ಖರಾಬ್ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿರುವ ರೈತ ಕುಟುಂಬಗಳನ್ನು ಒಕ್ಕಲೆಬ್ಬಿಸಿ ನಕಲಿ ದಾಖಲೆ ಸೃಷ್ಟಿಸಿ ಪ್ರಭಾವಿಗಳಿಗೆ ಜಮೀನು ನೀಡಲಾಗುತ್ತಿದೆ ಎಂದು ಆರೋಪಿಸಿ ಕರ್ನಾಟಕ ಸಮತಾ ಸೈನಿಕ ದಳದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಕರ್ನಾಟಕ ಸಮತಾ ಸೈನಿಕ ದಳದ ಕಾರ್ಯಕರ್ತರು, ಕೆಲ ಅಧಿಕಾರಿಗಳು ದಾಖಲೆಗಳನ್ನು ತಿರುಚಿ, ಹಣವಂತರೊಂದಿಗೆ ಸೇರಿ ಸಾಗುವಳಿದಾರರ ಮೇಲೆ ದೌರ್ಜನ್ಯವೆಸಗುತ್ತಿದ್ದಾರೆ. ಸರ್ಕಾರಿ ಖರಾಬ್ ಜಾಗದಲ್ಲಿ 40 ವರ್ಷಗಳಿಂದ ವ್ಯವಸಾಯ ಮಾಡುತ್ತಿರುವ ರೈತ ಕುಟುಂಬಗಳನ್ನು ಒಕ್ಕಲೆಬ್ಬಿಸಿ, ನಕಲಿ ದಾಖಲೆಗಳ ಮೂಲಕ ಪ್ರಭಾವಿಗಳ ಪರ ನಿಲುವು ತಾಳುತ್ತಿದ್ದಾರೆ ಎಂದು ಆರೋಪಿಸಿದರು.

ಚಕ್ರ ಇನಾಮ್ ಜಮೀನಿಗೆ ಸಂಬಂಧಿಸಿದಂತೆ ಅವಧಿ ಪೂರ್ವ ಮಾರಾಟ ಹಾಗೂ ಚಕ್ರ ಇನಾಮ್ ಇಲ್ಲದವರು ಇನಾಮ್ ಭೂಮಿಗಳನ್ನು ವರ್ಗಾವಣೆ ಮಾಡಿಕೊಂಡಿದ್ದು, ಇದನ್ನು ರದ್ದುಪಡಿಸಿ ಚಕ್ರ ಇನಾಮ್‌ದಾರರಿಗೆ ಮರು ಮಂಜೂರು ಮಾಡಬೇಕು. ಹುಣಸೂರಿನ ಸ.ನಂ. 352, 385ರ ಪರಿಶಿಷ್ಟ ಜಾತಿಯವರ ಜಮೀನು ಖರೀದಿ ರದ್ದುಪಡಿಸಿ, ಮೂಲ ಮಂಜೂರುದಾರರಿಗೆ ನೀಡಬೇಕು. ಮೈಸೂರು ತಾಲೂಕು ದೊಡ್ಡ ಮಾರಗೌಡನಹಳ್ಳಿ ಸ.ನಂ.186ರ 30 ದಲಿತ ಸಾಗುವಳಿದಾರರ ಪತ್ರ ರದ್ದುಪಡಿಸಿ ಬೇರೆಯವರಿಗೆ ಸಾಗುವಳಿ ನೀಡಿರುವುದನ್ನು ರದ್ದುಪಡಿಸಿ ಹಿಂದಿನ ಮಂಜೂರುದಾರರಿಗೆ ಹಿಂದಿರುಗಿಸಬೇಕು. ಕೆ.ಆರ್.ನಗರ ತಾಲೂಕಿನ ಸ.ನಂ.7ರಲ್ಲಿ ಮುಳುಗಡೆ ಬಾಬ್ತಿಗೆ ಸಂಬಂಧಿಸಿದಂತೆ ಮುಳುಗಡೆಗೆ ಒಳಪಟ್ಟ ಕುಟುಂಬದವರಿಗೆ ಕೆ.ಆರ್.ನಗರ ಗ್ರಾಮ ಠಾಣೆಯ ಭೂಮಿ ಮಂಜೂರು ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಗೋವಿಂದರಾಜು, ಉಪಾಧ್ಯಕ್ಷರಾದ ದೇವರಾಜು.ಜೆ, ಮಂಜುನಾಥ್, ದೊಡ್ಡತಿಮಯ್ಯ, ಕಾರ್ಯದರ್ಶಿ ಮರಿಸ್ವಾಮಿ, ಸಹ ಕಾರ್ಯದರ್ಶಿ ಚಲುವರಾಜು, ಖಜಾಂಚಿ ಈ.ಈರಭದ್ರ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಬಹು ಆಯಾಮದ ಸಂಶೋಧನೆಗಳಿಂದ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ

**ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಮತ**

ಮೈಸೂರು,ಮಾ.6(ಎಂಟಿವೈ)– ಉನ್ನತ ಶಿಕ್ಷಣದಲ್ಲಿ ಬಹು ಆಯಾಮದ ಸಂಶೋಧನೆಗಳಿಂದ ಮಾತ್ರ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಮಾನವಿಕ ವಿಭಾಗಗಳಾದ ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಸಮಾಜಶಾಸ್ತ್ರ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಿದ್ದ ಮುಂದುವರೆದ ಸಂಶೋಧನಾ ವಿಧಾನಗಳು ಮತ್ತು ಮಾರ್ಗಗಳು ಎಂಬ ವಿಷಯದ ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಉನ್ನತ ಶಿಕ್ಷಣದಲ್ಲಿ ಸಂಶೋಧನೆಯು ಪ್ರಮುಖವಾದ ಅಂಗವಾಗಿದೆ. ಅದು ವಿವಿಧ ಆಯಾಮಗಳಲ್ಲಿ ಸತ್ಯಶೋಧನೆಗೆ ಹೆಚ್ಚು ಒತ್ತು ಕೊಡುವ ಮೂಲಕ ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ಶ್ರಮಿಸಬೇಕು. ನಾವು ಆಯ್ಕೆ ಮಾಡುವ ಸಂಶೋಧನಾ ವಿಷಯಗಳು ಸಮಾಜಕ್ಕೆ ಕೊಡುಗೆ ನೀಡುವಂತಿರಬೇಕು ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ 'ಮುಂದುವರೆದ ಸಂಶೋಧನಾ ವಿಧಾನಗಳು ಮತ್ತು ಮಾರ್ಗಗಳು' ಕುರಿತ ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟಿಸಿದರು.

ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಸಮಿತಿ ನಿರ್ದೇಶಕ ಪ್ರೊ. ಆನಂದ್ ಡಿ. ಮಾತನಾಡಿ, ಮಾನವಿಕ ವಿಷಯಗಳಿಂದ ಮಾನವೀಯತೆಯ ಮೌಲ್ಯಗಳು, ತತ್ವಗಳು ಮತ್ತು ಸಿದ್ಧಾಂತಗಳನ್ನು ಸಂಶೋಧನಾರ್ಥಿಗಳು ಅಳವಡಿಸಿಕೊಂಡು ಸಮಾಜದಲ್ಲಿರುವ ಬಡತನ, ಸಾಮಾಜಿಕ ಅನ್ಯಾಯಗಳನ್ನು ಸರಿಪಡಿಸುವಲ್ಲಿ ಸಂಖ್ಯಾಶಾಸ್ತ್ರ ಮತ್ತು ಗಣಿತಶಾಸ್ತ್ರದ ಅಂಕಿ–ಅಂಶಗಳ ಮೂಲಕ ಸಮಸ್ಯೆಗಳನ್ನು ದಾಖಲೆಗಳ ಮೂಲಕ ತಿಳಿಯಪಡಿಸುತ್ತಾ, ಸಮಾಜದ ಒಳಿತಿಗೆ ಸದಾ ಶ್ರಮಿಸಲು ಮುಂದಾಗಬೇಕು. ಇದಕ್ಕೆ ಸಂಶೋಧನೆಗಳು ಜ್ಞಾನದ ವಿಕಾಸ ಮತ್ತು ನವಪ್ರವರ್ತನೆಗಳಿಗೆ ಹೆಚ್ಚು ಒತ್ತುಕೊಡುವಂತಿರಬೇಕೆಂದು ವಿವರಿಸಿದರು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಇಂದಿನ ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಸಂಶೋಧನೆಗಳು ನೇರವಾಗಿ ಸಮಸ್ಯೆಗಳನ್ನು ಬಗೆಹರಿಸುವಂತಿರಬೇಕೆಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಅರ್ಥಶಾಸ್ತ್ರ ವಿಭಾಗದ 'ಕೌಟಿಲ್ಯ' ಪತ್ರಿಕೆ ಬಿಡುಗಡೆ ಮಾಡಲಾಯಿತು. ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಸಿ.ಕೆ. ರೇಣುಕಾರ್ಯ, ಮಹಾಜನ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಪಿ ಸರೋಜಮ, ಐಕ್ಯೂಎಸಿ ಸಂಚಾಲಕಿ ಗೀತಾ ಡಿ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಸೋಮಶೇಖರ್ ಕೆ.ಕೆ. ಉಪಸ್ಥಿತರಿದ್ದರು. ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಶೈಕ್ಷಣಿಕ ಡೀನ್ ಡಾ. ಶ್ರೀಧರ ಎಚ್ ಸ್ವಾಗತಿಸಿದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ವೆಂಕಟಲಕ್ಷ್ಮಿ ಎಂ.ಎನ್ ಕಾರ್ಯಾಗಾರದ ಉದ್ದೇಶ ತಿಳಿಸಿದರು. ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ದೀಪು ವಂದಿಸಿದರು. ಡಾ.ಇಂದ್ರಾಣಿ ಎಂ.ಆರ್. ನಿರೂಪಿಸಿದರು. ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಎಚ್.ಆರ್.ತಿಮ್ಮೇಗೌಡ ಮತ್ತು ಮಾನವಿಕ ವಿಭಾಗಗಳ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಅಧ್ಯಾಪಕರು, ಸಂಶೋಧನಾರ್ಥಿಗಳು ಹಾಗೂ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಾಗಾರವನ್ನು ಯಶಸ್ವಿಗೊಳಿಸಿದರು.

ಮೈಸೂರು ಮಿತ್ರ ಗುರುವಾರ 7 ಮಾರ್ಚ್ 2024

# ನಾಳೆ ಜ.ತಿಮ್ಮಯ್ಯ ಪ್ರತಿಮೆ ಮರುಸ್ಥಾಪನೆ

● ಮೈಸೂರಿನಿಂದ ಮಡಿಕೇರಿವರೆಗೆ ಪ್ರತಿಮೆ ಮೆರವಣಿಗೆ ● ಕೊಡವ ಸಮಾಜದಿಂದ ಮಾಹಿತಿ





ಮಡಿಕೇರಿ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ ಮಾತನಾಡಿದರು. ಮಡಿಕೇರಿ ಕೊಡವ ಸಮಾಜ ಅಧ್ಯಕ್ಷ ಎಂ.ಪಿ.ಮುತ್ತಪ್ಪ, ಪದಾಧಿಕಾರಿಗಳಾದ ಕನ್ನಂಡ ಸಂಪತ್, ಕೇಕಡ ವಿಜು ದೇವಯ್ಯ, ಚೊಟ್ಟೆಯಂಡ ಸಂಜು, ಕಾಳಚಂಡ ಅಪ್ಪಣ್ಣ ಇದ್ದರು.

ಮಡಿಕೇರಿ, ಮಾ.6–ವಿಶ್ವ ಖ್ಯಾತಿಯ ಸೇನಾನಿ ಜನರಲ್ ತಿಮ್ಮಯ್ಯ ಅವರ ಪ್ರತಿಮೆ ಮರುಸ್ಥಾಪನೆ ಕಾರ್ಯ ಮಾ.8ರಂದು ನಡೆಯಲಿದೆ ಎಂದು ಮಡಿಕೇರಿ ಕೊಡವ ಸಮಾಜದ ಪದಾಧಿಕಾರಿಗಳು ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಡಿಕೇರಿ ಕೊಡವ ಸಮಾಜ ಅಧ್ಯಕ್ಷ ಎಂ.ಪಿ. ಮುತ್ತಪ್ಪ, ಕಳೆದ 6 ತಿಂಗಳ ಹಿಂದೆ ಕೆಎಸ್ಆರ್‌ಟಿಸಿ ಬಸ್ ಅಪಘಾತದಿಂದ ನಗರದ ಜನರಲ್ ತಿಮ್ಮಯ್ಯ ವೃತ್ತ ಸಹಿತ ಪ್ರತಿಮೆಗೆ ಹಾನಿಯಾಗಿತ್ತು. ಇದೀಗ ಮೈಸೂರಿನ ಶಿಲ್ಪ ಕಲಾ ಅಕಾಡೆಮಿಯ ಮೂಲಕ ಪ್ರತಿಮೆ ದುರಸ್ತಿ ಮಾಡಲಾಗಿದ್ದು, ಮಾ.8ರಂದು ಮತ್ತದೇ ಸ್ಥಳದಲ್ಲಿ ಮರುಸ್ಥಾಪನೆ ಮಾಡಲಾಗುವುದು. ಜಿಲ್ಲಾಡಳಿತ, ನಗರಸಭೆ ಮತ್ತು ಜಿಲ್ಲೆಯ ಜನಪ್ರತಿನಿಧಿಗಳು ಪ್ರತಿಮೆ ಮರುಸ್ಥಾಪನೆಗೆ ಸಹಕಾರ ನೀಡಿದ್ದು, ಮಡಿಕೇರಿ ಕೊಡವ ಸಮಾಜ ಈ ಕಾರ್ಯದಲ್ಲಿ ಕೈಜೋಡಿಸಿದೆ ಎಂದು ಹೇಳಿದರು.

ಮಾ.8ರಂದು ಮೈಸೂರಿನ ಶಿಲ್ಪ ಕಲಾ ಅಕಾಡೆಮಿಯಿಂದ ಪ್ರತಿಮೆಯನ್ನು ಮೆರವಣಿಗೆ ಮೂಲಕ ಮಡಿಕೇರಿಗೆ ತರಲಾಗುವುದು. ಮೈಸೂರು, ಕೊಡವ ಸಮಾಜ, ಮಾಜಿ ಸೈನಿಕರು, ವಿವಿಧ ಸಂಘ–ಸಂಸ್ಥೆಗಳು, ಶಾಸಕರು ಜನರಲ್ ತಿಮ್ಮಯ್ಯ ಪ್ರತಿಮೆಯನ್ನು ಬೀಳ್ಕೊಡಲಿದ್ದಾರೆ. ಜನರಲ್ ತಿಮ್ಮಯ್ಯ ಅವರ ಸೇವೆ, ಸಾಧನೆಗಳ ಮಾಹಿತಿಯನ್ನು ಒಳಗೊಂಡಂತೆ ಅಲಂಕೃತ ವಾಹನದ ಮೂಲಕ ಪ್ರತಿಮೆ ಮೈಸೂರಿನಿಂದ ಜಿಲ್ಲೆಗೆ ತರಲಾಗುವುದು ಎಂದರು.

ಪ್ರತಿಮೆ ಮೆರವಣಿಗೆಯಲ್ಲಿ ಮೈಸೂರಿನಿಂದ ಮಡಿಕೇರಿ ವರೆಗೆ ಸುಮಾರು 200ಕ್ಕೂ ಅಧಿಕ ಬೈಕ್‌ಗಳು ಜಾಥಾ ನಡೆಸಲಿವೆ. ಕುಶಾಲನಗರ ಗಡಿಯಲ್ಲಿ ಕೊಡವ ಸಮಾಜ, ವಿವಿಧ ಸಂಘ–ಸಂಸ್ಥೆಗಳು, ಮಾಜಿ ಯೋಧರು ಅದ್ದೂರಿಯಾಗಿ ಪ್ರತಿಮೆಯನ್ನು ಬರ ಮಾಡಿಕೊಳ್ಳಲಿದ್ದಾರೆ. ಮಡಿಕೇರಿ ಪ್ರವೇಶಿಸುತ್ತಿದ್ದಂತೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಸಾರ್ವತ್ರಿಕವಾಗಿ ಪ್ರತಿಮೆಯನ್ನು ಸ್ವಾಗತಿಸಲಾಗುದು. ಅಲ್ಲಿಂದ ಕೊಡಗಿನ ಸಾಂಪ್ರದಾಯಿಕ ವಾಲಗದೊಂದಿಗೆ ಅದ್ದೂರಿಯಾಗಿ ಮೆರವಣಿಗೆ ನಡೆಸಲಾಗುವುದು. ಬಳಿಕ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಪ್ರತಿಮೆ ಮರುಸ್ಥಾಪನೆ ಕಾರ್ಯ ನಡೆಯಲಿದೆ ನಿವೃತ್ತ ಏರ್ ಮಾರ್ಷಲ್ ನಂದಾ ಕಾರ್ಯಪ್ಪ ಪ್ರತಿಮೆ ಅನಾವರಣ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ ಮಾತನಾಡಿ, ಪ್ರತಿಮೆ ದುರಸ್ತಿ ವೃತ್ತ ನಿರ್ಮಾಣ ಕಾರ್ಯ ಸೇರಿದಂತೆ ಒಟ್ಟು 17 ಲಕ್ಷ ರೂ. ಅನ್ನು ವಿನಿಯೋಗ ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಡಿಕೇರಿ ಕೊಡವ ಸಮಾಜದ ಪದಾಧಿಕಾರಿಗಳಾದ ಕನ್ನಂಡ ಸಂಪತ್, ಕೇಕಡ ವಿಜು ದೇವಯ್ಯ, ಚೊಟ್ಟೆಯಂಡ ಸಂಜು, ಕಾಳಚಂಡ ಅಪ್ಪಣ್ಣ ಉಪಸ್ಥಿತರಿದ್ದರು.

# ತನಿಖೆ ಮುಗಿಯುವವರೆಗೆ ನಾಸಿರ್ ಹುಸೇನ್‌ಗೆ ಪ್ರಮಾಣ ವಚನ ಬೇಡ



ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್‌ರಾವ್ ಮಾತನಾಡಿದರು. ಹಿಂದೂಪರ ಸಂಘಟನೆಯ ರವೀಂದ್ರ ಮತ್ತು ಉಮಾಶಂಕರ್ ಇದ್ದರು.

ಮಡಿಕೇರಿ, ಮಾ.6–ವಿಧಾನಸಭೆಯಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿದ ಪ್ರಕರಣದ ತನಿಖೆ ಪೂರ್ಣಗೊಳ್ಳುವವರೆಗೆ ರಾಜ್ಯಸಭಾ ಸದಸ್ಯ ನಾಸಿರ್ ಹುಸೇನ್ ಅವರಿಗೆ ಪ್ರಮಾಣ ವಚನ ಬೋಧನೆ ಮಾಡಬಾರದು ಎಂದು ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್‌ರಾವ್ ಆಗ್ರಹಿದರು.

ನಗರದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಪಾಕಿಸ್ತಾನ ಪರ ಘೋಷಣೆ ಕೂಗಿದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸದಿರುವುದು ಸರಿಯಲ್ಲ. ಯಾವುದೇ ಘೋಷಣೆ ಕೂಗಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಪ್ರಿಯಾಂಕ್ ಖರ್ಗೆ, ಲಕ್ಷ್ಮೀ ಹೆಬ್ಬಾಳ್ಕರ್ ಸಹಿತ ಕಾಂಗ್ರೆಸ್‌ನ ಹಲವರು ಸಮರ್ಥಿಸಿಕೊಂಡಿರುವುದು ಜನರ ದಾರಿ ತಪ್ಪಿಸುವ ತಂತ್ರವಾಗಿದೆ ಎಂದು ಆರೋಪಿಸಿದರು.

ನಾಸಿರ್ ಹುಸೇನ್ ಬೆಂಬಲಿಗರು ದೇಶದ್ರೋಹದ ಘೋಷಣೆ ಕೂಗಿದ್ದಾರೆ. ಇಂತಹ ಘೋಷಣೆ ಕೂಗಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಇಂತಹ ವ್ಯಕ್ತಿಗಳನ್ನು ಪಕ್ಷದಿಂದ ಹೊರಹಾಕಬೇಕು. ಈ ಪ್ರಕರಣದ ತನಿಖೆ ಪೂರ್ಣವಾಗುವವರೆಗೆ ಯಾವುದೇ ಕಾರಣಕ್ಕೂ ರಾಜ್ಯಸಭಾ ಸದಸ್ಯರಾಗಿ ನಾಸಿರ್ ಹುಸೇನ್ ಅವರಿಗೆ ಪ್ರಮಾಣ ವಚನ ಬೋಧಿಸಬಾರದು ಎಂದು ಒತ್ತಾಯಿಸಿದರು.

ಸರ್ಕಾರ ಪಿಎಫ್‌ಐ ಸಂಘಟನೆಯ ಮೇಲಿನ ಕೇಸ್‌ಗಳನ್ನು ಹಿಂಪಡೆದ ಕಾರಣದಿಂದಲೇ ಶಾಸಕರಾಗಿದ್ದ ತನ್ವೀರ್ ಸೇಠ್ ಅವರ ಮೇಲೆ ದಾಳಿ ನಡೆಸಲಾಯಿತು. ಕೇಸ್‌ಗಳನ್ನು ಹಿಂಪಡೆಯುವ ನಂಬಿಕೆಯಿಂದಲೇ ರಾಜ್ಯದಲ್ಲಿ ಇಂತಹ ಪ್ರಕರಣಗಳು ನಡೆಯುತ್ತಿವೆ. ಸಮಾಜಘಾತುಕ ಶಕ್ತಿಗಳಿಗೆ ಬೆಂಬಲ ನೀಡೋದು ಸರಿಯಲ್ಲ. ಇದರಿಂದ ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗುತ್ತದೆ. ಎಫ್‌ಎಸ್ಎಲ್ ವರದಿಯನ್ನು ಮುಚ್ಚಿಡಲು ಸಾಧ್ಯವಿಲ್ಲ. ಆದರೆ, ಪ್ರಕರಣದ ಪೊಲೀಸ್ ತನಿಖಾಧಿಕಾರಿಗಳಿಗೆ ಅದರ ಗಂಭೀರತೆಯೇ ಇಲ್ಲವಾಗಿದೆ. ಈ ಪ್ರಕರಣದ ಎಫ್‌ಐಆರ್ ಪ್ರತಿಯನ್ನೇ ಆನ್‌ಲೈನ್‌ನಲ್ಲಿ ದಾಖಲಿಸದೇ ಮುಚ್ಚಿಡಲಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

**ರಾಜ್ಯದಲ್ಲಿ ಎಟಿಸಿ ಬಂದ್:** ರಾಜ್ಯದಲ್ಲಿ ಭಯೋತ್ಪಾದನಾ ಚಟುವಟಿಕೆಗಳ ಮೇಲೆ ಕಣ್ಣಿಡುವ ಸಲುವಾಗಿ ಭಯೋತ್ಪಾದನಾ ನಿಗ್ರಹ ಘಟಕಗಳನ್ನು(ಎಟಿಸಿ) ಸ್ಥಾಪಿಸಲಾಗಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ರಾಜ್ಯದ ಎಲ್ಲಾ ಎಟಿಸಿ ಘಟಕಗಳನ್ನು ಬಂದ್ ಮಾಡಿದೆ. ಇದು ಭಯೋತ್ಪಾದನಾ ಕೃತ್ಯಗಳು ನಡೆಯಲು ಕಾರಣವಾಗಿದೆ ಎಂದು ಆರೋಪಿಸಿದರು.

**ನಾನು ಟಿಕೆಟ್ ಆಕಾಂಕ್ಷಿ:** ನಾನು ಕೊಡಗು–ಮೈಸೂರು ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದು, ಪಕ್ಷದ ವರಿಷ್ಠರ ಗಮನಕ್ಕೆ ತರಲಾಗಿದೆ. ಪಕ್ಷ ಯಾರನೇ ಅಭ್ಯರ್ಥಿಯಾಗಿ ಕಣಕ್ಕಿಳಿಸಿದರೂ ಅವರಿಗೆ ಬೆಂಬಲ ನೀಡುವುದಾಗಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಹಿಂದೂಪರ ಸಂಘಟನೆಯ ರವೀಂದ್ರ ಮತ್ತು ಉಮಾಶಂಕರ್ ಇದ್ದರು.

## ದರೋಡೆ ಪ್ರಕರಣ: ಮೂವರ ಬಂಧನ

ಮಡಿಕೇರಿ, ಮಾ.6–ದರೋಡೆ ಪ್ರಕರಣದಲ್ಲಿ ತಲೆ ಮರೆಸಿಕೊಂಡಿದ್ದ ಮೂವರು ಆರೋಪಿಗಳನ್ನು ಗೋಣಿಕೊಪ್ಪ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೇರಳದ ತಲಚೇರಿ ಮೂಲದ ಶಾಲಿನ್ (30), ಟಿ.ಶ್ರೀಜಿತ್(38) ಮತ್ತು ಕೆ. ವೈಷ್ಣವ್(27) ಬಂಧಿತ ಆರೋಪಿಗಳು.

ಪೊನ್ನಂಪೇಟೆ ತಾಲೂಕಿನ ದೇವರಪುರದಲ್ಲಿ 2023ರ ಡಿಸೆಂಬರ್ 9ರಂದು ನಡೆದಿದ್ದ ದರೋಡೆ ಪ್ರಕರಣದಲ್ಲಿ ಈ ಮೂವರು ಭಾಗಿಯಾಗಿ ತಲೆ ಮರೆಸಿಕೊಂಡಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದೆ 8 ಮಂದಿಯನ್ನು ಬಂಧಿಸಲಾಗಿತ್ತು. ಈ ಮೂಲಕ ಒಟ್ಟು 11 ಆರೋಪಿಗಳು ಸೆರೆ ಸಿಕ್ಕಿದಂತಾಗಿದೆ.

ದರೋಡೆ ಕೃತ್ಯಕ್ಕೆ ಬಳಸಿದ 30 ಲಕ್ಷ ರೂ. ಮೌಲ್ಯದ ಒಟ್ಟು 5 ವಾಹನ ಹಾಗೂ 7 ರಿಂದ 8 ಲಕ್ಷ ರೂ. ನಗದನ್ನು ಜಪ್ತಿ ಮಾಡಲಾಗಿದೆ. ಈ ದರೋಡೆ ಪ್ರಕರಣದಲ್ಲಿ ಮತ್ತಷ್ಟು ಆರೋಪಿಗಳು ಶಾಮೀಲಾಗಿರುವ ಹಿನ್ನೆಲೆಯಲ್ಲಿ ತಲೆ ಮರೆಸಿಕೊಂಡಿರುವ ಎಲ್ಲಾ ಆರೋಪಿಗಳ ಪತ್ತೆಗೆ ವಿಶೇಷ ತನಿಖಾ ತಂಡ ರಚಿಸಿ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಇಲಾಖೆ ಮಾಹಿತಿ ನೀಡಿದೆ.

# ಭಯೋತ್ಪಾದನಾ ವಿರೋಧಿ ಹೋರಾಟದಿಂದ ಪ್ರತಿಭಟನೆ




ರಾಜ್ಯದಲ್ಲಿ ಭಯೋತ್ಪಾದಕ ಕೃತ್ಯಗಳು ನಡೆಯುತ್ತಿವೆ ಎಂದು ಆರೋಪಿಸಿ ಭಯೋತ್ಪಾದನಾ ವಿರೋಧಿ ಹೋರಾಟ ಸಮಿತಿಯ ವತಿಯಿಂದ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಯಿತು.

ಮಡಿಕೇರಿ, ಮಾ.6–ರಾಜ್ಯದಲ್ಲಿ ಭಯೋತ್ಪಾದಕ ಕೃತ್ಯಗಳು ನಡೆಯುತ್ತಿವೆ ಎಂದು ಆರೋಪಿಸಿ ಭಯೋತ್ಪಾದನಾ ವಿರೋಧಿ ಹೋರಾಟ ಸಮಿತಿಯ ಕೊಡಗು ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಜಮಾಯಿಸಿದ ಸಮಿತಿಯ ಪ್ರಮುಖರು ಹಾಗೂ ಕಾರ್ಯಕರ್ತರು ಮಾನವ ಸರಪಳಿ ರಚಿಸಿ, ರಾಜ್ಯದಲ್ಲಿ ನಡೆದ ಭಯೋತ್ಪಾದಕ ಕೃತ್ಯಗಳ ವಿರುದ್ಧ ತಕ್ಷಣ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ತುಷ್ಟೀಕರಣ ನೀತಿ ಮತ್ತು ವೋಟ್ ಬ್ಯಾಂಕ್ ರಾಜಕೀಯದಿಂದ ರಾಜ್ಯದಲ್ಲಿ ಮತ್ತೆ ಭಯೋತ್ಪಾದನೆ ಚಿಗುರೊಡೆಯುತ್ತಿದೆ. ವಿಧಾನಸೌಧದಲ್ಲಿ ರಾಷ್ಟ್ರವಿರೋಧಿ ಘೋಷಣೆಯನ್ನು ಕೂಗಿರುವ ರಾಷ್ಟ್ರದ್ರೋಹಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ದಿ ರಾಮೇಶ್ವರಂ ಕೆಫೆ ಹೋಟೆಲ್‌ನಲ್ಲಿ ನಡೆದ ಬಾಂಬ್ ಸ್ಫೋಟದ ಆರೋಪಿಯನ್ನು ಬಂಧಿಸಬೇಕು. ಹಿಂದೂ ಸಂಘಟನೆಗಳ ಕಾರ್ಯಕರ್ತರ ಮೇಲೆ ಸುಳ್ಳು ಕೇಸ್‌ಗಳನ್ನು ದಾಖಲಿಸಲಾಗುತ್ತಿದೆ. ಉದ್ದೇಶ ಪೂರ್ವಕವಾಗಿ ಕೆಲವರನ್ನು ಗಡಿಪಾರು ಮಾಡುವ ಬೆದರಿಕೆ ಒಡ್ಡಲಾಗುತ್ತಿದೆ. ಇಂತಹ ಕೃತ್ಯಗಳ ವಿರುದ್ಧ ಹಿಂದೂ ಸಮಾಜ ಬೃಹತ್ ಹೋರಾಟ ರೂಪಿಸಲಿದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್, ಸುನಿಲ್ ಸುಬ್ರಮಣಿ, ಬಿಜೆಪಿ ಜಿಲ್ಲಾಧ್ಯಕ್ಷ ರವಿ ಕಾಳಪ್ಪ, ಪ್ರಮುಖರಾದ ಮನು ಮಂಜುನಾಥ್, ಸುಬ್ರಹ್ಮಣ್ಯ ಉಪಾಧ್ಯಯ, ನಾಗೇಶ್ ಕುಂದಲ್ಪಾಡಿ ಹಾಗೂ ಮತ್ತಿತರರರು ಭಾಗವಹಿಸಿದ್ದರು.

# 29.81 ಲಕ್ಷ ರೂ.ಗೆ ಪುರಸಭೆ ಮಳಿಗೆಗಳು ಹರಾಜು



ವಿರಾಜಪೇಟೆ ಪುರಸಭೆ ಮಾರಾಟ ಮಳಿಗೆಗಳ ಹರಾಜು ಪ್ರಕ್ರಿಯೆಯಲ್ಲಿ ಮುಖ್ಯಾಧಿಕಾರಿ ಚಂದ್ರಕುಮಾರ್ ಮಾತನಾಡಿದರು.

ವಿರಾಜಪೇಟೆ, ಮಾ.6–ವಿರಾಜಪೇಟೆ ಪುರಸಭೆಯ ಸಂತೆ ಸುಂಕ ಮತ್ತು ಹಂದಿ ಮಾಂಸ ಮಾರುಕಟ್ಟೆ ಮಳಿಗೆ ಹಾಗೂ ಹಸಿ ಮೀನು ಮಾರುಕಟ್ಟೆಯ ಮಳಿಗೆಗಳು 29.81 ಲಕ್ಷ ರೂ.ಗೆ ಹರಾಜು ಮಾಡಲಾಗಿದೆ ಎಂದು ಮುಖ್ಯಾಧಿಕಾರಿ ಚಂದ್ರಕುಮಾರ್ ತಿಳಿಸಿದರು.

ಬುಧವಾರ ನಡೆದ ಮಾರಾಟ ಮಳಿಗೆಗಳ ಹರಾಜು ಪ್ರಕ್ರಿಯೆಯಲ್ಲಿ ಮಾತನಾಡಿದ ಅವರು, ಕಳೆದ (2023–24) ಸಾಲಿನಲ್ಲಿ ಮೀನು ಮಾರಾಟ ಮಳಿಗೆಗಳಲ್ಲಿ 8,47,000 ಲಕ್ಷರೂ., ಹಂದಿ ಮಾಂಸ ಮಾರಾಟ ಮಳಿಗೆಯಲ್ಲಿ 35,000 ಸಾವಿರ ರೂ., ಸಂತೆ ಸುಂಕದಿಂದ 1,60,600 ರೂ. ಸಂಗ್ರಹವಾಗಿತ್ತು. ಆದರೆ, ಈ (2024–25) ಸಾಲಿನಲ್ಲಿ ಮೀನು ಮಾರಾಟ ಮಳಿಗೆ 11,82,500 ಲಕ್ಷ ರೂ., ಹಂದಿ ಮಾಂಸ ಮಳಿಗೆ 2,01,000 ಲಕ್ಷ ರೂ., ಸಂತೆ ಸುಂಕ 16,20,00 ಲಕ್ಷ ರೂ. ಸೇರಿದಂತೆ ಒಟ್ಟು 29,81,600 ರೂ.ಗೆ ಹರಾಜಾಗಿದೆ ಎಂದರು. ಹರಾಜು ಪ್ರಕ್ರಿಯೆಯಲ್ಲಿ ಪುರಸಭೆ ಸದಸ್ಯರಾದ ಆಶಾ ಸುಬ್ಬಯ್ಯ, ಮಹಮ್ಮದ್ ರಫಿ, ಸಿ.ಕೆ.ಪೃಥ್ವಿನಾಥ್, ಅಬ್ದುಲ್ ಜಲೀಲ್, ಹೆಚ್.ಪಿ.ಮಹದೇವ್, ರಜನಿಕಾಂತ್, ಹೆಚ್.ಎಂ.ಪೂರ್ಣಿಮಾ, ಎಸ್.ಹೆಚ್.ಮತೀನ್, ಎಂ.ಕೆ.ದೇಚಮ್ಮ, ಅಧಿಕಾರಿಗಳು, ಸಿಬ್ಬಂದಿ, ಬಿಡ್‌ದಾರರು ಭಾಗವಹಿಸಿದ್ದರು.

# ಇಂದಿನಿಂದ ಮ.ಬೆಟ್ಟದಲ್ಲಿ ಶಿವರಾತ್ರಿ ಜಾತ್ರೆ

● ಲಕ್ಷಾಂತರ ಭಕ್ತರು ಭಾಗಿ ● ಕುಡಿಯುವ ನೀರು, ವಿಶೇಷ ದಾಸೋಹ ವ್ಯವಸ್ಥೆ





ಹನೂರು, ಮಾ.6–ಶ್ರೀಕ್ಷೇತ್ರ ಮಲೆಮಹದೇಶ್ವರ ಬೆಟ್ಟದಲ್ಲಿ ಮಾ.7 ರಿಂದ 10ರವರೆಗೆ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ನಡೆಯಲಿದ್ದು, ಲಕ್ಷಾಂತರ ಭಕ್ತರು ಭಾಗವಹಿಸುವುದರಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಮಾ.7ರಂದು ಮಹದೇಶ್ವರಸ್ವಾಮಿಗೆ ವಿಶೇಷ ಪೂಜೆ ನೆರವೇರಿಸಲಾಗುವುದು. 8ರಂದು ಎಣ್ಣೆ ಮಜ್ಜನ ಸೇವೆ, ವಿವಿಧ ಉತ್ಸವ, 9ರಂದು ಅಮಾವಾಸ್ಯೆ ಪೂಜೆ ಹಾಗೂ 10ರಂದು ಬೆಳಗ್ಗೆ ಮಹಾರಥೋತ್ಸವ ಜರುಗಲಿದ್ದು, ರಾತ್ರಿ ಅಭಿಷೇಕ, ಪೂಜೆ ಮುಗಿದ ನಂತರ ಕೊಂಡೋತ್ಸವ ನಡೆಯಲಿದೆ.

ಬಿಸಿಲಿನಲ್ಲಿ ಪಾದಯಾತ್ರೆ ಮೂಲಕ ಬೆಟ್ಟಕ್ಕೆ ಬರುವ ಭಕ್ತರಿಗೆ ತಾಳುಬೆಟ್ಟದಿಂದ ಮಹದೇಶ್ವರ ಬೆಟ್ಟದವರೆಗೆ ಕುಡಿಯುವ ನೀರಿಗಾಗಿ ಟ್ಯಾಂಕ್‌ಗಳ ಮೂಲಕ 10 ಕಡೆ ವ್ಯವಸ್ಥೆ ಮಾಡಲಾಗಿದೆ. ವಿಶೇಷ ದಾಸೋಹ ವ್ಯವಸ್ಥೆ ಕಲ್ಪಿಸಲಾಗಿದ್ದು, ಒಂದು ಬಾರಿಗೆ 2 ಸಾವಿರಕ್ಕೂ ಹೆಚ್ಚು ಭಕ್ತರು ಪ್ರಸಾದ ಸ್ವೀಕರಿಸಬಹುದು. ಜೊತೆಗೆ ಹಳೇ ದಾಸೋಹದ ಮುಂಭಾಗ ನಿರಂತರ ದಾಸೋಹ ವ್ಯವಸ್ಥೆ ಸಹ ಮಾಡಲಾಗಿದೆ.

ದೇವರ ದರ್ಶನ ಪಡೆಯಲು ಸರತಿ ಸಾಲಿನಲ್ಲಿ ನಿಲ್ಲಲು ಭಕ್ತರಿಗೆ ದೇವಸ್ಥಾನದ ರಾಜಗೋಪುರದ ಎಡ ಹಾಗೂ ಬಲ ಭಾಗದಲ್ಲಿ ಶಾಮಿಯಾನ ಹಾಕಲಾಗಿದೆ. ಜಾತ್ರಾ ಆವರಣದಲ್ಲಿ ಸ್ವಚ್ಛತೆಗೆ ಪೌರಕಾರ್ಮಿಕರನ್ನು ನಿಯೋಜಿಸಲಾಗಿದೆ.

**ಹೆಚ್ಚುವರಿ ಬಸ್:** ಶಿವರಾತ್ರಿ ಜಾತ್ರಾ ಮಹೋತ್ಸವಕ್ಕೆ ಕೆಎಸ್ಆರ್‌ಟಿಸಿಯಿಂದ 500 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಬಸ್‌ಗಳು ಕೆಟ್ಟರೆ ದುರಸ್ತಿಪಡಿಸಲು 15 ತಾಂತ್ರಿಕ ಸಿಬ್ಬಂದಿ ಸಹ ನೇಮಕ ಮಾಡಲಾಗಿದೆ. ತಾಳುಬೆಟ್ಟದಲ್ಲಿ ತಾತ್ಕಾಲಿಕ ಆರೋಗ್ಯ ಕೇಂದ್ರವನ್ನು ತೆರೆಯಲಾಗಿದ್ದು, ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೆಚ್ಚು ಸಿಬ್ಬಂದಿ ನಿಯೋಜಿಸಲಾಗಿದೆ. ಭಕ್ತರ ಆರೋಗ್ಯ ದೃಷ್ಟಿಯಿಂದ ಮೂರು 108 ಆಂಬುಲೆನ್ಸ್ ಹಾಗೂ ಅಗ್ನಿಶಾಮಕ ವಾಹನ ಬಳಸಿಕೊಳ್ಳಲಾಗುತ್ತಿದೆ.

ತಾಳುಬೆಟ್ಟ ಹಾಗೂ ಶಂಕಮ್ಮನ ನಿಲಯ ಸಮೀಪ 100 ಮೊಬೈಲ್ ಶೌಚಾಲಯವನ್ನು ತಾತ್ಕಾಲಿಕವಾಗಿ ನಿರ್ಮಿಸಲಾಗಿದೆ. ದಿನದ 24 ಗಂಟೆ ಕುಡಿಯುವ ನೀರು ಪೂರೈಕೆ ಮಾಡಲಾಗುವುದು. ಜಾತ್ರಾ ಮಹೋತ್ಸವದ ಅಂಗವಾಗಿ ಸೂಕ್ತ ಪೊಲೀಸ್ ಬಂದೋಬಸ್ತ್‌ಗಾಗಿ 2, ಡಿವೈಎಸ್‌ಪಿ, 2 ಸರ್ಕಲ್ ಇನ್ಸ್‌ಪೆಕ್ಟರ್, 10 ಸಬ್‌ಇನ್ಸ್‌ಪೆಕ್ಟರ್, 40 ಸಹಾಯಕ ಸಬ್‌ಇನ್ಸ್‌ಪೆಕ್ಟರ್, 50 ಪೇದೆಗಳು, 90 ಮಹಿಳಾ ಪೊಲೀಸರು, 400 ಗೃಹರಕ್ಷಕ ದಳದ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ವೃತ್ತ ನಿರೀಕ್ಷಕ ಜಗದೀಶ್ ತಿಳಿಸಿದ್ದಾರೆ.

## ದ್ವಿಚಕ್ರ ವಾಹನ, ಆಟೋಗಳಿಗೆ ನಿರ್ಬಂಧ

ಮಲೆಮಹದೇಶ್ವರ ಬೆಟ್ಟಕ್ಕೆ ಶಿವರಾತ್ರಿ ಜಾತ್ರೆ ಅಂಗವಾಗಿ ಮಾ.7ರ ಬೆಳಗ್ಗೆ 6 ರಿಂದ ಮಾ.11ರ ಸಂಜೆ 7 ಗಂಟೆ ವರೆಗೆ ದ್ವಿಚಕ್ರ ವಾಹನ ಮತ್ತು ಆಟೋಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಶಿಲ್ಪನಾಗ್ ಆದೇಶ ಹೊರಡಿಸಿದ್ದಾರೆ.

ಜಾತ್ರಾ ಸಂಬಂಧ ಜಿಲ್ಲೆ, ಹೊರಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಲಕ್ಷಾಂತರ ಭಕ್ತರು ಮಲೆಮಹದೇಶ್ವರ ಬೆಟ್ಟಕ್ಕೆ ಆಗಮಿಸಲಿದ್ದು, ವಾಹನ ದಟ್ಟಣೆ ಹೆಚ್ಚಾಗುವುದರಿಂದ ಅರಣ್ಯ ಪ್ರದೇಶ ಹಾಗೂ ತುಂಬಾ ಕಡಿದಾದ ತಿರುವುಗಳಿಂದ ಬೆಟ್ಟದ ರಸ್ತೆ ಕೂಡಿರುವುದರಿಂದ ವಾಹನ ದಟ್ಟಣೆ ಉಂಟಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವುದರಿಂದ ಮಹದೇಶ್ವರಬೆಟ್ಟಕ್ಕೆ ಮಾ.7 ರಿಂದ 11ರವರೆಗೆ ದ್ವಿಚಕ್ರ ವಾಹನ ಮತ್ತು ಆಟೋಗಳಲ್ಲಿ ಭಕ್ತರು ತೆರಳುವುದನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ. ಕೌದಳ್ಳಿ ಗ್ರಾಮದ ಖಾಸಗಿ ಬಡಾವಣೆಯಲ್ಲಿ ಭಕ್ತರು ತಮ್ಮ ವಾಹನಗಳನ್ನು ಪಾರ್ಕಿಂಗ್ ಮಾಡಿ, ಅಲ್ಲಿಂದ ಮಹದೇಶ್ವರಬೆಟ್ಟಕ್ಕೆ ವಿಶೇಷ ಬಸ್‌ಗಳಲ್ಲಿ ತೆರಳಬೇಕು.

**ಶಿವರಾತ್ರಿ ಜಾತ್ರಾ ಮಹೋತ್ಸವ ಪ್ರಯುಕ್ತ ಮಹದೇಶ್ವರಬೆಟ್ಟಕ್ಕೆ ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿದ್ದು, ಭಕ್ತರಿಗೆ ಎಲ್ಲಾ ಮೂಲಸೌಲಭ್ಯ ಕಲ್ಪಿಸಲಾಗಿದೆ. ಯಾವುದೇ ಸಮಸ್ಯೆ ಆಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಲಾಗಿದೆ.**

**–ಎ.ಇ.ರಘು, ಕಾರ್ಯದರ್ಶಿ, ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರ**

# ಕುಡಿಯುವ ನೀರಿನ ಸಮಸ್ಯೆ ಪರಿಹರಿಸಿ



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಡಿಸಿ ಶಿಲ್ಪನಾಗ್ ಮಾತನಾಡಿದರು.

ಚಾಮರಾಜನಗರ, ಮಾ.6– ಮುಂಬರುವ ಏಪ್ರಿಲ್‌ನಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗಬಹುದಾದ ಗ್ರಾಮಗಳಿಗೆ ಆಯಾ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ, ಯಾವುದೇ ಸಮಸ್ಯೆಯಾಗದಂತೆ ಪೂರ್ವ ಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ತೊಂದರೆ ಕಾಣಿಸಿಕೊಳ್ಳುವ ಗ್ರಾಮಗಳ ಪಟ್ಟಿ ಮಾಡಲಾಗಿದ್ದು, ಈ ಗ್ರಾಮಗಳಿಗೆ ಕುಡಿಯುವ ನೀರಿನ ಕೊರತೆಯಾಗದಂತೆ ಈಗಿನಿಂದಲೇ ಸಿದ್ಧತೆ ಮಾಡಬೇಕು. ಖಾಸಗಿ ಕೊಳವೆಬಾವಿಗಳ ಮೂಲಕ ನೀರು ಪೂರೈಸಲು ಒಪ್ಪಂದ ಪ್ರಕ್ರಿಯೆ ಸೇರಿದಂತೆ ಇನ್ನಿತರ ಕ್ರಮಗಳಿಗೆ ಅಧಿಕಾರಿಗಳು ತುರ್ತಾಗಿ ಮುಂದಾಗಬೇಕು. ನಗರ, ಪಟ್ಟಣ ಪ್ರದೇಶಗಳಲ್ಲೂ ಸಮರ್ಪಕವಾಗಿ ನೀರು ಪೂರೈಸಬೇಕು ಎಂದು ನಿರ್ದೇಶಿಸಿದರು.

ಬರಗಾಲ ಹಿನ್ನೆಲೆಯಲ್ಲಿ ಕುಡಿಯುವ ನೀರಿಗೆ ಎಲ್ಲಿಯೂ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ನೀರಿನ ಸಮಸ್ಯೆ ಎದುರಾದಲ್ಲಿ ಸಾರ್ವಜನಿಕರು ಮಾಹಿತಿ ನೀಡುವ ಸಲುವಾಗಿ ಸಹಾಯವಾಣಿ ತೆರೆಯಲಾಗಿದೆ. ಸಾರ್ವಜನಿಕರಿಂದ ಸ್ವೀಕೃತವಾಗುವ ಕರೆಗಳಿಗೆ ತುರ್ತಾಗಿ ಸ್ಪಂದಿಸಿ ಸಮಸ್ಯೆ ಪರಿಹರಿಸಬೇಕು. ಜನರಿಗೆ ಸ್ಪಂದಿಸದಿದ್ದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಜಾನುವಾರುಗಳಿಗೆ ಮೇವು, ನೀರು ಲಭ್ಯವಾಗಬೇಕು. ಹೊರ ರಾಜ್ಯಗಳಿಗೆ ಮೇವು ಸಾಗಿಸುವುದನ್ನು ನಿರ್ಬಂಧಿಸಿ ಹಿಂದೆಯೇ ಆದೇಶ ಹೊರಡಿಸಲಾಗಿದೆ. ಸ್ಥಳೀಯವಾಗಿ ಮೇವು ದಾಸ್ತಾನು ಇರಬೇಕು. ಮೇವಿನ ಕಿಟ್‌ಗಳನ್ನು ವಿತರಿಸಲಾಗಿದ್ದು, ಈ ಬಗ್ಗೆ ಪರಿಶೀಲಿಸಬೇಕು. ಬರಗಾಲ ನಿರ್ವಹಣೆಯಲ್ಲಿ ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ, ಉಪವಿಭಾಗಾಧಿಕಾರಿ ಎಂ.ಶಿವಮೂರ್ತಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಮಧುಸೂದನ್, ಜಂಟಿ ಕೃಷಿ ನಿರ್ದೇಶಕ ಆಬೀದ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಿವಪ್ರಸಾದ್, ಸೆಸ್ಕ್ ಕಾರ್ಯಪಾಲಕ ಇಂಜಿನಿಯರ್ ವಸಂತ್‌ಕುಮಾರ್, ಎಲ್ಲಾ ತಾಲೂಕುಗಳ ತಹಶೀಲ್ದಾರ್, ತಾಪಂ ಇಓಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಚಂದಕವಾಡಿಯಲ್ಲಿ ಕೊಂಡೋತ್ಸವ

**ಚಾಮರಾಜನಗರ:** ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ಲಕ್ಷ್ಮೀದೇವಿ ಅಮ್ಮನವರ ಜಾತ್ರೆಯ ಅಂಗವಾಗಿ ಬುಧವಾರ ಮುಂಜಾನೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಕೊಂಡೋತ್ಸವ ನೆರವೇರಿತು.

ಮಂಗಳವಾರ ರಾತ್ರಿಯಿಡಿ ಪೂಜಾ ಕಾರ್ಯಗಳು ನೆರವೇರಿಸಲಾಯಿತು. ಸುವರ್ಣಾವತಿ ನದಿಯ ತಟದಲ್ಲಿರುವ ದೇವರ ಅರಳಿಮರದ ಬಳಿ ಪೂಜೆ ಸಲ್ಲಿಸಿ, ದೇವಿಯನ್ನು ಹೊತ್ತು ತರಲಾಯಿತು. ಸತ್ತಿಗೆ ಸೂರಿಪಾನಿಯೊಂದಿಗೆ ಮೆರವಣಿಗೆ ನಡೆಸಿ, ಬಳಿಕ ದೇವಸ್ಥಾನ ಪ್ರದಕ್ಷಿಣೆ ಹಾಕಿಕೊಂಡ ಹಾಯಲಾಯಿತು. ಹರಕೆ ಹೊತ್ತ ಭಕ್ತರು ಕೊಂಡ ಹಾಯ್ದರು. ದೇವಿಗೆ ಮಹಿಳೆಯರು ತಂಬಿಟ್ಟಿನ ತಮಪು ಸೇವೆ ಸಮರ್ಪಿಸಿದರು. ಚಂದಕವಾಡಿ, ಕೋಡಿಮೋಳೆ, ಬಸವನಪುರ, ಸರಗೂರು ಬಸಪ್ಪನಪಾಳ್ಯ, ಸರಗೂರು ಮೊಳೆ, ಅರಳಿಪುರ, ದಡದಹಳ್ಳಿ ಹಂಚಿತಾಳಪುರ ಸುತ್ತಮುತ್ತಲ ಗ್ರಾಮಸ್ಥರು ಪಾಲ್ಗೊಂಡಿದ್ದರು.



ಚಂದಕವಾಡಿಯಲ್ಲಿ ಲಕ್ಷ್ಮೀದೇವಿ ಜಾತ್ರೆ ಅಂಗವಾಗಿ ಭಕ್ತರ ಸಮ್ಮುಖದಲ್ಲಿ ಕೊಂಡೋತ್ಸವ ನೆರವೇರಿತು.

# ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ



ರಾಜ್ಯ ಸರ್ಕಾರದ ವಿರುದ್ಧ ಭಯೋತ್ಪಾದನಾ ವಿರೋಧಿ ಹೋರಾಟ ಸಮಿತಿ ಕಾರ್ಯಕರ್ತರು ಚಾಮರಾಜನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಮಾ.6–ರಾಜ್ಯ ಸರ್ಕಾರ ಹಿಂದೂ ವಿರೋಧಿಯಾಗಿದ್ದು, ಬೆಂಗಳೂರು ಬಾಂಬ್ ಬ್ಲಾಸ್ಟ್ ಪ್ರಕರಣ ಹಾಗೂ ಪಾಕಿಸ್ತಾನ ಪರ ಘೋಷಣೆ ಕೂಗಿದವರನ್ನು ರಕ್ಷಿಸಲು ಮುಂದಾಗಿರುವ ಕಾಂಗ್ರೆಸ್ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಭಯೋತ್ಪಾದನಾ ವಿರೋಧಿ ಹೋರಾಟ ಸಮಿತಿಯಿಂದ ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಕಾರ್ಯಕರ್ತರು ಹಾಗೂ ಮುಖಂಡರು, ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿ ಹಾಗೂ ಭಯೋತ್ಪಾದಕರ ಪರವಾಗಿರುವ ಭ್ರಷ್ಟ ಎಂದು ಘೋಷಣೆ ಕೂಗಿದರು. ನಂತರ ಭುವನೇಶ್ವರಿ ವೃತ್ತದಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು.

ಮಾಜಿ ಶಾಸಕ ಎಸ್.ಬಾಲರಾಜು ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ಭ್ರಷ್ಟಚಾರ ಹಾಗೂ ಭಯೋತ್ಪಾದಕರ ಪರವಾದ ನಿಲುವು ಹೊಂದಿದೆ. ಕೇವಲ ಒಂದು ಧರ್ಮವರನ್ನು ತೃಷ್ಟಿಕರಿಸುವ ಮೂಲಕ ದೇಶವನ್ನು ಭಯೋತ್ಪಾದನೆಯ ಕೂಪಕ್ಕೆ ತಳ್ಳುತ್ತಿದೆ. ಬೆಂಗಳೂರಿನಲ್ಲಿ ನಡೆದ ಬಾಂಬ್ ಬ್ಲಾಸ್ಟ್ ಹಾಗೂ ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿರುವುದು ದೇಶ ವಿರೋಧಿ ಕೃತ್ಯವಾಗಿದೆ ಎಂದು ಆರೋಪಿಸಿದರು. ಹಿಂದೂ ಜಾಗರಣಾ ವೇದಿಕೆಯ ಸಹಸಂಚಾಲಕ ಮಹೇಶ್ ಮಾತನಾಡಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಹಂಗಳ ಪ್ರಣಯ್, ಪಿ.ಬಿ.ಶಾಂತಮೂರ್ತಿ ಕುಲಗಾಣ, ಸುಂದರರಾಜ್, ಮಹೇಂದ್ರಕುಮಾರ್, ವಿಜಯ್, ಆರ್.ರಂಗಸ್ವಾಮಿ, ಕಾಡಹಳ್ಳಿ ಕುಮಾರ್, ಆರ್.ಎಂ.ಪುಟ್ಟಣ್ಣ, ನಂದೀಶ್ ಕೆಬ್ಬೇಪುರ, ಶಿವು ವಿರಾಟ್, ಸಿ.ಎಂ.ಶಿವರಾಜು, ಚಿಕ್ಕರಾಜು, ಚಂದ್ರಶೇಖರ್ ರಾವ್, ಸುರೇಶ್ ಭಾಗವಹಿಸಿದ್ದರು.

# ನಗರದಲ್ಲಿ ಕೊಬ್ಬರಿ ಖರೀದಿ ಕೇಂದ್ರಕ್ಕೆ ಚಾಲನೆ



ಚಾಮರಾಜನಗರದಲ್ಲಿ ಕೊಬ್ಬರಿ ಖರೀದಿ ಕೇಂದ್ರವನ್ನು ಎಪಿಎಂಸಿ ಅಧ್ಯಕ್ಷ ಎಚ್.ಎನ್. ಮಹದೇವಸ್ವಾಮಿ ಉದ್ಘಾಟಿಸಿದರು.

ಚಾಮರಾಜನಗರ, ಮಾ.6–ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ಬೆಂಬಲ ಬೆಲೆ ಯೋಜನೆಯಡಿಯ ಉಂಡೆ ಕೊಬ್ಬರಿ ಖರೀದಿ ಕೇಂದ್ರಕ್ಕೆ ಬುಧವಾರ ಚಾಲನೆ ನೀಡಲಾಯಿತು.

ನಗರದ ಎಪಿಎಂಸಿ ಕಚೇರಿ ಸಭಾಂಗಣದಲ್ಲಿ ಆನ್‌ಲೈನ್ ಮೂಲಕ ಕೊಬ್ಬರಿ ಖರೀದಿಸಲು ರೈತರ ನೋಂದಾಣಿಗೆ ಚಾಲನೆ ನೀಡಿದ ಎಪಿಎಂಸಿ ಅಧ್ಯಕ್ಷ ಎಚ್.ಎನ್.ಮಹದೇವಸ್ವಾಮಿ ಮಾತನಾಡಿ, 2024ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಎಫ್ಎಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್ ಉಂಡೆ ಕೊಬ್ಬರಿಗೆ 12 ಸಾವಿರ ರೂ. ದರ ಘೋಷಿಸಲಾಗಿದೆ. ಬೆಂಬಲ ಬೆಲೆಯ ಜೊತೆಗೆ ರಾಜ್ಯ ಸರ್ಕಾರದಿಂದ ಪ್ರತಿ ಕ್ವಿಂಟಾಲ್ ಉಂಡೆ ಕೊಬ್ಬರಿಗೆ 1500 ರೂ. ಪ್ರೋತ್ಸಾಹಧನ ನಿಗದಿಪಡಿಸಲಾಗಿದೆ. ಒಟ್ಟಾರೆ ಪ್ರತಿ ಕ್ವಿಂಟಾಲ್ ಕೊಬ್ಬರಿಗೆ 13,500 ರೂ. ನಂತೆ ಖರೀದಿಸಲಾಗುವುದು ಎಂದರು.

ಉಂಡೆ ಕೊಬ್ಬರಿ ಖರೀದಿಸಲು ನಾಫೆಡ್ ಸಂಸ್ಥೆಯನ್ನು ಕೇಂದ್ರ ಸರ್ಕಾರದ ಖರೀದಿ ಸಂಸ್ಥೆಯನ್ನಾಗಿ ಮತ್ತು ರಾಜ್ಯದ ವತಿಯಿಂದ ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳವನ್ನು ಖರೀದಿ ಸಂಸ್ಥೆಯನ್ನಾಗಿ ನೇಮಿಸಲಾಗಿದೆ. ಮೇ ಕೊನೆಯ ವಾರದವರೆಗೆ ಖರೀದಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ ಎಂದರು.

ಎಪಿಎಂಸಿ ಉಪಾಧ್ಯಕ್ಷ ರಾಮಚಂದ್ರ, ಮಾಜಿ ಅಧ್ಯಕ್ಷ ಮನೋಜ್ ಪಟೇಲ್, ನಿರ್ದೇಶಕರಾದ ವೆಂಕಟರಾವ್ ಸಾಠೆ, ವಿಜಯಲಕ್ಷ್ಮಮ್ಮ, ಸಹಾಯಕ ಕಾರ್ಯದರ್ಶಿ ಮಧುಕುಮಾರ್ ಇತರರಿದ್ದರು.



ಬುಧವಾರ ಮೈಸೂರು ನಗರ ಪಾಲಿಕೆಯಲ್ಲಿ ತಮ್ಮ ಕಚೇರಿ ಆರಂಭಿಸಿದ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರನ್ನು ಬಿಜೆಪಿ ಜಿಲ್ಲಾ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ರಾಜ್ಯ ವಕ್ತಾರ ಎಂ.ಜಿ. ಮಹೇಶ್, ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ. ರಘು, ಕೆ.ಜೆ. ರಮೇಶ್, ಪ್ರದೀಪ್‌ಕುಮಾರ್, ಶಿವಕುಮಾರ್ ಇತರರು ಅಭಿನಂದಿಸಿದರು.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

**ಮಳಿಗೆ ಬಾಡಿಗೆಗೆ**
2 ಮಳಿಗೆ 15x15, CFTRI ಕಾಲೋನಿ, ಈಶ್ವರ ಟೆಂಪಲ್ ರಸ್ತೆ, ಬೋಗಾದಿ. ಸಂಪರ್ಕಿಸಿ:
Mob: 9844113423

**ಡ್ರೈವರ್ಸ್ ಬೇಕಾಗಿದ್ದಾರೆ**
ಪ್ರಸಿದ್ಧ ವಿದ್ಯಾಸಂಸ್ಥೆಗೆ ಬಸ್ ಡ್ರೈವರ್ಸ್ ಬೇಕಾಗಿದ್ದಾರೆ. ನಿವೃತ್ತ ಕೆ.ಎಸ್.ಆರ್.ಟಿ.ಸಿ. ಡ್ರೈವರ್ಸ್‌ಗೆ ಮೊದಲ ಆದ್ಯತೆ. ಸಂಪರ್ಕಿಸಿ:
Mob: 9986002207

**ಮನೆ ಮಾರಾಟಕ್ಕಿದೆ**
ಜೆಪಿ ನಗರ ಪಕ್ಕದಲ್ಲಿರುವ ಮಾನಂದವಾಡಿ ಮುಖ್ಯ ರಸ್ತೆಗೆ ತಾಗಿಕೊಂಡಿರುವ ಪ್ರಕೃತಿ ಬಡಾವಣೆಯಲ್ಲಿ ಸುಸಜ್ಜಿತವಾದ 20X30 ಡ್ಯೂಪ್ಲೆಕ್ಸ್ ಹೊಸ ಮನೆ ಮಾರಾಟಕ್ಕಿದೆ. ನೇರ ಮಾಲೀಕರನ್ನು ಸಂಪರ್ಕಿಸಲು ಕರೆ ಮಾಡಿ.
Mob: 7019188932

**HOUSE FOR LEASE**
3 BHK near Shubhodini Choultry, Hebbal, Mysore
Rs. 8.5 Lakhs
Ph: 9900382883

**COMMERCIAL SHOP FOR RENT**
Front approx 300 sq ft & Back 80 Sq ft.
Address - K. R Circle. Near cycle stand. Mysore.
Contact -9742717345

**ಬೇಕಾಗಿದ್ದಾರೆ**
1) ಬ್ಯೂಟಿಷಿಯನ್
2) ಟೈಲರ್
Mob: 9880402729

**ಮನೆ ಮಾರಾಟಕ್ಕಿದೆ**
House for Sale
Size: 15 x 40
N.R. Mohalla, Mysuru
Mob: 9845972973



SUNZONE SOLAR SYSTEM
Vishwamanava Double Road, Kuvempunagar, Mysuru
9845175443

**DTCP SITES FOR SALE**
DTCP Sites
Rs. 699 per sq.ft., Near Jayapura,
H.D. Kote Road, Mysore.
9590491194,9606783264

**WANTED**
OFFICE ASSISTANT (Female) PUC / Any Degree
HELPERS BOYS
Preferable for ITI- Electricals
Two Wheeler must, Age18-25
Saraswathipuram, Mysuru
98808 28999

**ತಕ್ಷಣ ಬೇಕಾಗಿದ್ದಾರೆ**
ಕೂರ್ಗಳ್ಳಿ ಮತ್ತು ಬನ್ನಿಮಂಟಪದ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.
12.00 ಘಂಟೆ–12000 ರೂ. ಸಂಪರ್ಕಿಸಿ:
9035367083

**100% NEEM WOOD PLYWOOD & DOORS**
@ FACTORY DEPOT RATES
NEEM BOND PLATINUM® 10yrs WARRANTY
ISO 9001:2015 Certified Depot
CALL 99012 91267 98454 26862

**WANTED**
Wanted Diploma / ITI / GTTC Candidates 2 Years Experience in the Field of Tool Room, Production, Contact: Immediately the following Mobile
Lokesh
7022540475

**IMKTA - PRE-SCHOOL TEACHER TRAINING**
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

**ಬೇಕಾಗಿದ್ದಾರೆ**
ಕಾರ್ಖಾನೆಯಲ್ಲಿ General Shiftನಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಈ ಕೆಳಕಂಡ ಮೊಬೈಲ್ ಫೋನ್‌ಗೆ ಸಂಪರ್ಕಿಸಿ:
96060 03196

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್**
Mob: 8880558064

**WANTED**
A Hall / 1 BHK in Ground Floor for running Art Classes and Tuitions in Yadavagiri / Vontikoppal / Gokulam, Jayalakshmipuram in 8K budget. Contact:
9535232320

**ಸುವರ್ಣ ಯಾತ್ರ**
- ಕಾಶಿ, ಆಯೋಧ್ಯೆ ಬಾಬಾ ವೈದ್ಯನಾಥ ಜ್ಯೋತಿರ್ಲಿಂಗ ಪ್ರವಾಸ 7 ದಿನಗಳು 24/3/24
- ನೇಪಾಳ ಪಶುಪತಿನಾಥ, ಮುಕ್ತಿನಾಥ ಪ್ರವಾಸ 9 ದಿನಗಳು 14/04/24
- ಭೂತಾನ್ ಪ್ರವಾಸ 7 ದಿನಗಳು 11/4/24
- ವೈಷ್ಣೋದೇವಿ ಸಿಮ್ಲಾ ಮನಾಲಿ ಅಮೃತ್ ಸರ್ ಪ್ರವಾಸ 11 ದಿನಗಳು 18/04/24
- ಚಾರ್‌ಧಾಮ್ ಯಾತ್ರ 13 ದಿನಗಳು 8/05/24 ಹಾಗೂ 22/5/24

9019462508,8660233673

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್**
Mob: 8861401315

**ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ**
(ಕನ್ನಡ ಮಾತನಾಡಬಲ್ಲವರು)
ಸ್ಥಳ – ಚಾಮುಂಡಿಪುರಂ ಮತ್ತು ಎನ್ ಆರ್ ಮೊಹಲ್ಲಾ (10000)
Team leaders ಬೇಕಾಗಿದ್ದಾರೆ ಸಂಬಳ – 12000
ಮೊಬೈಲ್ ನಂಬರ್: 8150005111

**S.K. CONSTRUCTION**
ಹೊಸ ಮನೆ ಕಟ್ಟಬೇಕೆ, ಚಿಂತೆ ಬೇಡ, ನಿಮ್ಮ ಕೈಗೆಟುಕುವ ಬೆಲೆಯಲ್ಲಿ 63 ಅಡಿ ಉತ್ತಮ ಗುಣಮಟ್ಟದಲ್ಲಿ Engineer Plan 3D Elevation ಸಹಿತ ಎಲ್ಲ Construction ಸರ್ವಿಸ್ ಮಾಡಿಕೊಡಲಾಗುತ್ತದೆ.
Ph: 9620528490

**WANTED JOB!JOB**
ತಕ್ಷಣ ಬೇಕಾಗಿದ್ದಾರೆ
Office Staff / Team Leader
SSLC / PUC / ITI / DIP / DEGREE
Helpers / Plumbers
98444-44214

**ಬೋಳು ತಲೆಯ ಸಮಸ್ಯೆಯೇ?**

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಥಳಾವಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
# 574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

**ಸೈಟ್ ಮಾರಾಟಕ್ಕಿದೆ**
ಟಿ.ನರಸೀಪುರ ರಸ್ತೆ ವರಕೋಡು ಗೇಟ್ ಹತ್ತಿರ SBM ಆಫೀಸರ್ಸ್ ಎನ್‌ಕ್ಲೈವ್ (ಹೊನ್ನಸಿರಿ ಗಾರ್ಡನ್) 30x37.4 - 16 ಲಕ್ಷ
ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ರಿಜಿಸ್ಟ್ರೇಷನ್ ಫ್ರೀ (ಉಚಿತ)
7676077678

**ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ**
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

**ಉದ್ಯೋಗ ಅವಕಾಶ**
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
6364308851, 7892046990

**ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ.**
Mob: 9945230505

**FOR RENT**
Industrial Shed near B.B. Mill Road, 3,800 Sqft., 50 HP Power
Ph: 9980613761 9900898555

**ಉಚಿತ ತರಬೇತಿ**
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

**ಸ್ಟಾರ್ ಮ್ಯಾರೇಜಸ್**
ಎಲ್ಲಾ ಜನಾಂಗದ ವಧು–ವರರು ವಿಚ್ಛೇದಿತರು ಹಾಗೂ ವಿಧುರ–ವಿಧವೆಯರು ಸಂಪರ್ಕಿಸಿ:
8105747339
8197607559

**WANTED FOR Bhaskar Heart Centre**

| Post | Qualification |
|---|---|
| Receptionist | Degree / PUC |
| Marketing / PRO (M) | Degree / PUC |
| Staff Nurses (F) | GNM / ANM |
| Pharma Aid | PUC / Degree |
| Office Boy | SSLC |

0821-2499188 / 9880186386

**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಗೆ ಕೆಲಸ ಮಾಡಲು ಸಮಾಜ ಸೇವಾ ಮನೋಭಾವದ ವಿದ್ಯಾವಂತ ಯುವತಿಯರು ಬೇಕಾಗಿದ್ದಾರೆ.
Mob: 6361740522

**ಬೇಕಾಗಿದ್ದಾರೆ**
ಸಪ್ಲೈಯರ್ ಕೆಲಸಕ್ಕೆ: 2 Nos.
ಕ್ಲೀನಿಂಗ್ ಕೆಲಸಕ್ಕೆ: 2 Nos.
ಕಿಚನ್‌ಗೆ: 1 No.
ನ್ಯೂ ಹೋಟೆಲ್ ದೇವಿ ಅನೆಕ್ಸ್ ಸರಸ್ವತಿಪುರಂ.
9916779020 / 9739211543

**ಕೆಲಸಕ್ಕೆ ಬೇಕಾಗಿದ್ದಾರೆ ಕಲೆಕ್ಷನ್ ಎಕ್ಸಿಕ್ಯೂಟಿವ್**
(ರಿಕವರಿ ಏಜೆನ್ಸೀಸ್‌ಗೆ)
ಕೆ.ಆರ್. ಪೇಟೆ, ನಾಗಮಂಗಲ, ಶ್ರೀರಂಗಪಟ್ಟಣ, ಪಾಂಡವಪುರ, ಮದ್ದೂರು, ಮಳವಳ್ಳಿ.
Mob: 9972044442

**ಬೇಕಾಗಿದ್ದಾರೆ**
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವವಿರುವ ಇಲ್ಲದೆ ಇರುವ ಹೋಮ್ ನರ್ಸ್ ಹುಡುಗ ಹುಡುಗಿಯರು ಬೇಕಾಗಿದ್ದಾರೆ. ಬೆಳಿಗ್ಗೆ ಅಥವಾ ರಾತ್ರಿ ಅಥವಾ 24 ಗಂಟೆ ಸೇವೆ ಮಾಡುವವರು ಸಂಪರ್ಕಿಸಿ:
Mob: 8152863106
ಸಂಬಳ: 12,000 ರಿಂದ 25,000

**2 Sites for Sale**
(30x40) @ "Olive Enclave"
MUDA Approved on Mys-B'lore Highway, 5 km from Columbia Hospital. 26 Lakhs.
Mob: 95388-39926

**ಸಪ್ತಪದಿ ಹಿಂದು ವಧು–ವರರ ಮಾಹಿತಿ ಕೇಂದ್ರ**
8 ವರ್ಷದ ಸೇವೆಯೊಂದಿಗೆ BE, MBA, M.Tech, MBBS / MD / MS, Ph.D ಎಲ್ಲಾ ಡಿಗ್ರಿಯ India / USA / UK / Australia / Canada / Germany / Mysore / Bangalore ರಿಜಿಸ್ಟ್ರೇಷನ್‌ಗಾಗಿ ಸಂಪರ್ಕಿಸಿ:
Mob: 9663199511
Wanted Female Staff

**FOR SALE**
1) 20x30, 30x40, 30x50 near Defence Apartment H.D. Kote Road. Bank loan 80%. Ready to Registration.
2) 20x30, 30x40 Bogadi Road.
3) 2, 3 BHK flats in Ramakrishnanagar.
4) 100x100 Farm house KRS Back Water attach 19 Lakhs starts.
5) 40x72 house Vidyaranyapuram.
6) 18x40, 40 Ft Road Kuvempunagar.

PRAKRUTHI PROPERTIES
9538690359, 9035990359

**ಅನುಬಂಧ ಮ್ಯಾರೇಜಸ್**
ವಧುವರರನ್ನು ಹುಡುಕಲು ಸಹಾಯ ಬೇಕೆ ? ನಮಗೆ ಕರೆ ಮಾಡಿ
Mob: 6361740552

**ಹೊಸ ಮನೆಗಳು ಮಾರಾಟಕ್ಕೆ**
20x30 Dpx VJ4 - 90 ಲಕ್ಷ.
20x30 GF+FF+ ರೂಂ - 90 ಲಕ್ಷ.
20X30, 2 ಮನೆ, ಶಾಪ್ಸ್, ರೂಂಗಳು - 90 ಲಕ್ಷ.
20x30 GF only VJ2 - 62 ಲಕ್ಷ.
Mob: 74838 94889

**FOR RENT**
5 Flats of 1 BHK each suitable for PG, behind Chamundi Temple, K.G. Koppal. Contact:
Mob: 9886307094

**ಬೇಕಾಗಿದ್ದಾರೆ**
ಮನೆ ಕೆಲಸ ಮತ್ತು ಅಡುಗೆ ಮಾಡಲು ಬೇಕಾಗಿದ್ದಾರೆ, ಕುವೆಂಪುನಗರ. (ಮಹಿಳೆಯರು.)
Mob: 9972805819

**ಬೇಕರಿ ಕೆಲಸಕ್ಕೆ ಬೇಕಾಗಿದ್ದಾರೆ**
ಬೇಕರಿ ಕೆಲಸಕ್ಕೆ ಅನುಭವವಿರುವ ವ್ಯಕ್ತಿ ಬೇಕಾಗಿದ್ದಾರೆ.
ಸಂಪರ್ಕಿಸಿ: 9880857936
ಸ್ಥಳ: ವಿದ್ಯಾರಣ್ಯಪುರಂ, ಕರಿಮಾರಿಯಮ್ಮ ದೇವಸ್ಥಾನದ ಹತ್ತಿರ, ಮೈಸೂರು

**ಬೇಕಾಗಿದ್ದಾರೆ**
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಮಹಿಳೆಯರು, ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಕ್ಯಾಷಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ: ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
Mob: 9739816440

**Rent - Lease - Sale**
JPN, SRP, ಹೆಬ್ಬಾಳು, ಕುವೆಂಪು, ಸಿದ್ಧಾರ್ಥ, ವಿಜಯನಗರ ಸುತ್ತಮುತ್ತ. ಬಾಡಿಗೆ - ಭೋಗ್ಯ ಸೈಟು ಮನೆ ಕೊಳ್ಳಲು, ಮಾರಲು ಸಂಪರ್ಕಿಸಿ:
Mob: 74838 94889

**ಕಳೆದಿದೆ**
ಎಂ. ಪ್ರಶಾಂತ ಮತ್ತು ಆಶಾ ಸಾವಿತ್ರಿ ಕೆ.ಆರ್., ಇವರ ಜಾಜಿ ಎನ್‌ಕ್ಲೇವ್ ಬಡಾವಣೆಯ ಸೈಟ್ ನಂ. 62, ಮೈಸೂರು ತಾಲ್ಲೂಕು-16, ಸರ್ವೆ ನಂ. 51/1 & 51/2ರ ಕಸಬಾ ಹೋಬಳಿ ಶ್ಯಾದನಹಳ್ಳಿ ಗ್ರಾಮದ 9 x 12 ವಿಸ್ತೀರ್ಣದ ಸ್ವತ್ತಿನ ನಿವೇಶನ ಖಾತಾ ಮತ್ತು ಕಂದಾಯ ಪತ್ರ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob 9164275508

**ಬೇಕಾಗಿದ್ದಾರೆ**
ಮೈಸೂರಿನ ಬಂಡೀಪಾಳ್ಯದಲ್ಲಿರುವ ಎ.ಪಿ.ಎಂ.ಸಿ. ಹೋಲ್‌ಸೇಲ್ ಅಂಗಡಿಯಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡಲು 50-60 ವರ್ಷ ವಯೋಮಾನದ ಒಬ್ಬರು ಪುರುಷ ವ್ಯಕ್ತಿ ಬೇಕಾಗಿದ್ದಾರೆ. ಸಂಪರ್ಕಿಸಿ: ಕೆ. ನಂದಿಬಸಪ್ಪ & ಸನ್ಸ್, ಶಾಪ್ ನಂ. 3, 'ಎ' ಬ್ಲಾಕ್, ಬಂಡೀಪಾಳ್ಯ, ಮೈಸೂರು.

**MUDA ಸೈಟು ಮಾರಾಟಕ್ಕಿದೆ**
ದಟ್ಟಗಳ್ಳಿಯ ಆದಿತ್ಯ ಸರ್ಕಲ್ ಪಕ್ಕದಲ್ಲಿರುವ "ಅಶ್ವತ್ಥಾಮ ಲೇಔಟ್" ನಲ್ಲಿ 40x60 ಅಳತೆಯ East facing ಸೈಟು ಮಾರಾಟಕ್ಕಿದೆ. ಬೆಲೆ: ರೂ. 99 ಲಕ್ಷ.
Mob: 9886048471

**ಬೇಕಾಗಿದ್ದಾರೆ**
ಫ್ಯಾಕ್ಟರಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 45. ಸಂಬಳ: 16,000 + ESI + PF = 19,000. 8 hrs duty ಹಾಗೂ Week off ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಖುದ್ದಾಗಿ ಬಂದು ಪಡೆಯತಕ್ಕದ್ದು. ಸ್ಥಳ: C PET ಕಾಲೇಜ್ ಹತ್ತಿರ, ಮೇಟಗಳ್ಳಿ, ರಿಂಗ್‌ರೋಡ್, ಮೈಸೂರು.
Mob: 9986874574

**WANTED**
For Medical / Pharma Distributor
Male staff - 3
SSLC / PUC pass / fail. with or without experience.
9986108208 / 9739377827

**ಬೇಕಾಗಿದ್ದಾರೆ**
ಮೈಸೂರು, ಕೊಡಗು, ಮಂಗಳೂರು ಮಾರ್ಗಗಳಲ್ಲಿ ದಿನ ನಿತ್ಯ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ಯುವಕರು / ಡ್ರೈವರ್ ಬೇಕಾಗಿದ್ದಾರೆ.
(1. ಡೆಲಿವರಿ ಬಾಯ್ ಆರಂಭಿಕ ವೇತನ 12000)
2. ಹೆವಿ ಡ್ರೈವರ್ 20,000.
ಸಂಪರ್ಕಿಸಿ: Mob: 9740408488

**ಶ್ರೀ ಪುಟ್ಟಸ್ವಾಮಿ ಚಿಟ್ ಫಂಡ್ಸ್ ಪ್ರೈವೇಟ್ ಲಿಮಿಟೆಡ್**
ಸರ್ಕಾರದಿಂದ ಮಾನ್ಯತೆ ಪಡೆದಿದೆ
1 ಲಕ್ಷದಿಂದ 10 ಲಕ್ಷದವರೆಗಿನ ಚೀಟಿಗಳು ಪ್ರಾರಂಭವಾಗಿದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 8747965423

**ಕಾರ್ ಡ್ರೈವರ್ ಬೇಕಾಗಿದ್ದಾರೆ**
Wanted Car Driver
Mob: 8050888088

**Cellar ಬಾಡಿಗೆಗಿದೆ**
(Commercial)
JP Nagar ಗೊಬ್ಬಳಿ ಮರ Bus Stop HDFC Bank, ನೆಲ ಮಳಿಗೆ, Opp. Vidyaranyapuram Police Station. Area: 1500 sq.ft. Separate entrance.
Mob: 9686225522

**HOUSE FOR SALE**
30x40 site at North East of N.R. Mohalla is for sale.
Mob: 8123304534

**HOUSE FOR SALE**
E/F, 30x40 Triplex New House Very good Location, Vijayanagar 4th Stage, near Teju Corner.
Ph: 9164456176

**PROPERTY FOR SALE**
3 BHK corner house for sale built in 2000 sq.ft. area. 600 sq.ft. corner site for sale @ Vijayanagar 3rd Stage 'A' Block. Contact:
Mob: 9663712345

**ಮಸಾಲೆ ಅಕ್ಕಿ ಹಪ್ಪಳ ದೊರೆಯುತ್ತದೆ.**
ಒಂದು ಹಪ್ಪಳಕ್ಕೆ 1 ರೂ.ಗಳು.
ಸಂಪರ್ಕಿಸಿ: ಬಿ.ಎಸ್. ಮಹದೇವಪ್ಪ
8453510492 / 9342341998
9740466592

**HOUSE FOR SALE**
@ MUDA Layout 2+1 BHK, 20x30 South facing site East facing door, Shanthaveri Gopal Gowda Nagar, Mysore.
9740019514 / 9738884777

**ಸೈಟುಗಳನ್ನು ಕೊಳ್ಳಲು/ಮಾರಲು ಸೈಟುಗಳು ಮಾರಾಟಕ್ಕಿವೆ**
MUDA/MUDA Approved
ಸಂಪರ್ಕಿಸಿ: 9538412881

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ESI, PF ನೊಂದಿಗೆ ಊಟ ಮತ್ತು ಉಚಿತ ವಸತಿ ಸೌಲಭ್ಯವಿರುತ್ತದೆ. ಸ್ಥಳ: ಬಂಡಿಪಾಳ್ಯ, ಮೈಸೂರು
9739294107 / 8951715624

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಹೂಟಗಳ್ಳಿ & ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು SSLC, PUC, ITI, Any Trade ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು: 18 ರಿಂದ 30. ಸಂಬಳ: 14500 ರಿಂದ 19500. ಅನುಕೂಲತೆ: ESI, PF, Canteen ಸೌಲಭ್ಯವಿರುತ್ತದೆ. ಸಂಪರ್ಕಿಸಿ:
6362491336, 7019380847
8105651601

**CHANGE OF NAME**
I, Vaishnavi, W/o N.D. Sridhar, residing at D.No. 478, Near Royal Oak Showroom, Ahsraya Colony, Bogadi, Mysuru-26, I have changed my name from Bhagirathi Bai to Vaishnavi in front of Notary Somanna M.E. on 2-3-2024 at Mysuru.
Sd/- Viashnavi

**A BLUE STAR ELEVATOR**
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC, PUC, ITI, ಮೈಸೂರು.
9448032352 / 9113545825

**ಲೇಯರ್ ಕೋಳಿ ಫಾರಂ (ಮೊಟ್ಟೆ ಫಾರಂ)**
ಸಾಮರ್ಥ್ಯ 21,000 ಸಾವಿರ ಬಾಡಿಗೆಗೆ ದೊರೆಯುತ್ತದೆ.
ಚನ್ನಪಟ್ಟಣ.
Mob: 9448978383

**Royal Couch Furniture Sofa Factory**
We do all types of customise new sofas & old sofa repairs with waranty available.
Contact: Raghavendra K.
7899243456 / 7975751388

**SITE FOR SALE**
(MUDA Approved)
30x50 West Face
Rajya Sarkari Noukarara Kshemabivruddi Sangha Layout, Near Vijayanagara 4th Stage (just 300 mtrs from Rastrothana School). Rate: 3000 per sq.ft.
Contact Mob: 9986174154

**HOUSE FOR SALE**
20X30 3 Floor Building
87 Lakhs Slightly Negotiable
S/F Site E/D, Near Marimallappa Compound Vijaynagar 4th Stage 2 nd phase, Mysore
Contact: 8073723223

**CHANGE OF NAME**
I, Devika S, W/o G.J. Shekar, No. 120, 5th Cross, Ist Main Road, B.M. Sri Nagar, Mysuru-570 016, after my marriage I have changed my name as Devika Shekar in front of Notary C. Mangala on 27-2-2024 at Mysuru.
Sd/- Devika Shekar

**ನಿವೇಶನಗಳು ಮಾರಾಟಕ್ಕಿವೆ**
ಬನ್ನೂರು ರಸ್ತೆಯಲ್ಲಿ ಭುಗತಗಳ್ಳಿ ಚೆಕ್‌ಪೋಸ್ಟ್ ಹತ್ತಿರ ರಿಂಗ್ ರಸ್ತೆಯಿಂದ 2 ಕಿ.ಮೀ ತಕ್ಷಣ ಮನೆ ನಿರ್ಮಿಸಲು ಸೂಕ್ತವಾದ 30X40, 30X 30 ಅಳತೆಯ ಮುಡಾ ಅನುಮೋದಿತ ನಿವೇಶನಗಳು ಮಾರಾಟಕ್ಕಿವೆ. ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ದೊರೆಯುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಮೈಸೂರು ಈಸ್ಟ್ ಪ್ರಾಪರ್ಟೀಸ್
9916766389 / 6363400519

**JOBS IN MYSORE**
Age (18-24) 10th, PUC ಮೇಲ್ಪಟ್ಟು. Earn (8500 ರಿಂದ 16,500) PM only freshers.
No fee ವಿವರಗಳೊಂದಿಗೆ ನೇರ ಸಂಪರ್ಕಿಸಿ:
ನಂದಿನಿ: 9342827788
Time to meet us: (11 am to 3 pm)

**ಉಚಿತವಾಗಿ ಪಡೆಯಿರಿ**
26 ಕೆ.ಜಿ. ಐ.ಟಿ. ರೈಸ್ ಖರೀದಿಸಿದರೆ, 2 ಕೆಜಿ ಸಕ್ಕರೆ, 1 ಕೆಜಿ ತೊಗರಿಬೇಳೆ, 1 ಕೆಜಿ ಕಡ್ಲೆಬೇಳೆ, 1 ಲೀಟರ್ ಗೋಲ್ಡ್ ವಿನ್ನರ್ ಎಣ್ಣೆ, 1 ಪ್ಯಾಕೆಟ್ ಹಪ್ಪಳವನ್ನು ಉಚಿತವಾಗಿ ಪಡೆಯಿರಿ. ಬೆಲೆ ರೂ. 2000 ಮಾತ್ರ (ಚಿಲ್ಲರೆ ಅಕ್ಕಿ ದೊರೆಯುತ್ತದೆ).
ಶ್ರೀ ಅನ್ನಪೂರ್ಣೇಶ್ವರಿ ರೈಸ್ ಕಾರ್ನರ್ #1498, 1ನೇ ಕ್ರಾಸ್, ಶಿವರಾಂಪೇಟೆ, ಮೋರ್ ಮೆಗಾ ಸ್ಟೋರ್ ಎದುರಿನ ರಸ್ತೆ, ಮೈಸೂರು-1.
ಕರೆಮಾಡಿ
9741859037, 9902158019

**2.5 BHK HOME INTERIORS @ ₹ 2.5 Lacs***
Home Space Mart™
TALK TO OUR DESIGN TEAM
9108923123

**ಬೇಕಾಗಿದ್ದಾರೆ**
ಹೂಟಗಳ್ಳಿಯಲ್ಲಿರುವ ಕಾರ್ಖಾನೆಗೆ ಶಿಫ್ಟ್‌ಗಳಲ್ಲಿ ಕೆಲಸ ಮಾಡಲು ಸಹಾಯಕರು ಬೇಕಾಗಿದ್ದಾರೆ. ಈ ತಕ್ಷಣ ಕೆಳಕಂಡ ಫೋನ್‌ಗೆ ಸಂಪರ್ಕಿಸಿ: ಸಿದ್ದರಾಜು
9606262809

ಒಂದನೇ ಪುಟದಿಂದ

## ದೇವಸ್ಥಾನಗಳ ಐತಿಹಾಸಿಕ ಹಿನ್ನೆಲೆ ಅರಿಯಿರಿ

ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ತಾವು ಭೇಟಿ ನೀಡುವ ದೇವಸ್ಥಾನದಲ್ಲಿ ಪ್ರತಿಷ್ಠಾಪನೆಗೊಂಡಿರುವ ಮೂರ್ತಿಯ ದೈವ ಸೃಷ್ಟಿಯೋ, ರಾಜ ಪ್ರತಿಷ್ಠಾಪನೆಯೋ, ಸ್ವಯಂ ಸೃಷ್ಟಿಯೋ ಅದರ ಮೂಲವನ್ನು ಅರಿಯಬೇಕು ಎಂದು ಹೇಳಿದರು.

ಯಾತ್ರಾ ಸ್ಥಳಗಳಿಗೆ ಹೋದಾಗ ಹೋಟೆಲ್‌ನಲ್ಲಿ ರುಚಿ ರುಚಿಯಾದ ತಿಂಡಿ-ತಿನಿಸು ತಿಂದೆ, ಗಣ್ಯರ ಸಾಲಿನಲ್ಲಿ ದರ್ಶನ ಪಡೆದೆ ಎಂದು ಇತರರ ಜೊತೆ ತಮ್ಮ ಅನುಭವ ಹಂಚಿಕೊಳ್ಳುತ್ತಾರೆ. ಹೀಗೆ ಯಾತ್ರೆಗೆ ಹೋದ ಮೂಲ ಉದ್ದೇಶವನ್ನೇ ಮರೆಯುತ್ತಾರೆ. ಆದ ಕಾರಣ ಯಾತ್ರಾ ಸ್ಥಳಗಳಿಗೆ ಹೋಗುವುದನ್ನು ಫ್ಯಾಷನ್ ಎಂದು ಭಾವಿಸಬಾರದು. ಅಲ್ಲಿನ ದೇವಸ್ಥಾನಗಳ ಪೌರಾಣಿಕ ಹಿನ್ನೆಲೆ, ಇತಿಹಾಸ ಸೇರಿದಂತೆ ಹಲವು ವಿಚಾರಗಳನ್ನು ತಿಳಿದುಕೊಳ್ಳಬೇಕು ಎಂದು ಸ್ವಾಮೀಜಿ ಕಿವಿಮಾತು ಹೇಳಿದರು.

ಫ್ಯಾಷನ್‌ಗಾಗಿ ಯಾತ್ರಾ ಸ್ಥಳಗಳಿಗೆ ಭೇಟಿ ನೀಡಿ ದೇವರ ದರ್ಶನ ಮಾಡಿದರೆ ಮನಸ್ಸಿಗೆ ತೃಪ್ತಿಯಾಗುತ್ತದೆಯೇ ಎಂದು ಪ್ರಶ್ನಿಸಿದ ಸ್ವಾಮೀಜಿ, ಇದರಿಂದ ಭಕ್ತಿಗೆ ಮಹತ್ವವೇ ಇಲ್ಲದಂತಾಗುತ್ತದೆ. ಆದ ಕಾರಣ ದೇವಸ್ಥಾನಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಭಕ್ತಿ ಭಾವ ಮೆರೆಯಬೇಕು. ಆಗ ದೇವಸ್ಥಾನಕ್ಕೆ ಹೋಗಿರುವುದಕ್ಕೂ ಸಾರ್ಥಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಕಾಶಿ ಸೇರಿದಂತೆ ಕೆಲವು ದೇವಸ್ಥಾನಗಳಿಗೆ ಭಾರಿ ಭದ್ರತಾ ವ್ಯವಸ್ಥೆ ಕಲ್ಪಿಸಿರುವ ಕುರಿತಂತೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರ ಮಾತನ್ನು ಉಲ್ಲೇಖಿಸಿದ ಸ್ವಾಮೀಜಿ, ದೇವರಿಗೆ ರಕ್ಷಣೆ ಅವಶ್ಯವಿಲ್ಲ. ಆದರೆ ದೇವರಿಗೆ ಧರಿಸಿರುವ ಆಭರಣಗಳಿಗೆ ರಕ್ಷಣೆ ಬೇಕಿದೆ. ದೇವರ ಮೇಲಿರುವ ಆಭರಣವನ್ನು ಯಾರಾದರೂ ಕದ್ದೊಯ್ಯಬಹುದು ಎಂಬ ಮುಂಜಾಗ್ರತಾ ಕ್ರಮವಾಗಿ ರಕ್ಷಣೆ ನೀಡಲಾಗುತ್ತದೆ ಎಂದು ಹೇಳಿದರು. ಇನ್ನು ಶಿವನಿಗಂತೂ ರಕ್ಷಣೆಯೇ ಬೇಕಿಲ್ಲ. ಏಕೆಂದರೆ ಶಿವ ಯಾವ ಆಭರಣವನ್ನೂ ಧರಿಸುವುದಿಲ್ಲ. ಆದರೆ ದೇವಾಲಯದ ಸುತ್ತಲಿನ ಜನರಿಗೆ ರಕ್ಷಣೆ ನೀಡಬೇಕಿದೆ. ಆದ ಕಾರಣದಿಂದ ದೇವಸ್ಥಾನಕ್ಕೆ ಭದ್ರತಾ ವ್ಯವಸ್ಥೆ ಮಾಡಲಾಗಿರುತ್ತದೆ ಎಂದು ಸ್ವಾಮೀಜಿ ತಿಳಿಸಿದರು.

ಮನುಷ್ಯನಿಗೆ ಜ್ಞಾನ ಎಂಬುವುದು ಅತೀ ಮುಖ್ಯ. ಮನುಷ್ಯ 50 ಅಥವಾ 100 ವರ್ಷ ಬದುಕಿರುತ್ತಾನೆ. ಇದರಲ್ಲಿ 12 ವರ್ಷ ಬಾಲ್ಯಾವಸ್ಥೆಯಾದರೆ, ನಂತರ ಯೌವನಾವಸ್ಥೆಗೆ ಬರುತ್ತಾನೆ. ಉಳಿದ ಜೀವನ ವೃದ್ಧಾಪ್ಯವಾಗಿರುತ್ತದೆ. ವೃದ್ಧಾಪ್ಯದಲ್ಲಿ ಒಂಟಿತನ ಕಾಡುತ್ತದೆ. ಕಣ್ಣು ಕಾಣಿಸದೆ, ಕಿವಿ ಕೇಳಿಸದಿರುವ ಪರಿಸ್ಥಿತಿ ಎದುರಾಗುತ್ತದೆ. ಇಂತಹ ಸಂದರ್ಭದಲ್ಲಿ ಒಂಟಿತನ ಬಯಸುತ್ತಾನೆ. ಆದ ಕಾರಣ ಮಾನಸಿಕ ಹಾಗೂ ದೈಹಿಕವಾಗಿ ಸಾಮರ್ಥ್ಯವಿರುವ ಯೌವನಾವಸ್ಥೆಯಲ್ಲಿ ಸೋಮಾರಿತನ ತೋರದೆ ಜ್ಞಾನ ವೃದ್ಧಿಸಿಕೊಳ್ಳಬೇಕು ಎಂದು ಸ್ವಾಮೀಜಿ ಸಲಹೆ ನೀಡಿದರು.

ಈಗಂತೂ ಹಸುವಿನ ಹಾಲು, ಹರಿಯುವ ಗಂಗೆ ಎಲ್ಲವೂ ಮಲಿನವಾಗಿರುತ್ತದೆ. ಆದ ಕಾರಣ ಭಕ್ತರು ದೇವರಿಗೆ ಆತ್ಮ ತೃಪ್ತಿಯಿಂದ ನಿಷ್ಕಲ್ಮಶವಾದ ಭಕ್ತಿಯನ್ನು ಧಾರೆಯೆರೆಯಬೇಕು ಎಂದು ಸ್ವಾಮೀಜಿ ಸಲಹೆ ನೀಡಿದರು. ಕಾಶಿಯ ಜ್ಞಾನವ್ಯಾಪಿಯ ನೀರು ಸ್ಪರ್ಶಿಸಿದರೆ, ಕುಡಿದರೆ ಜ್ಞಾನ ವೃದ್ಧಿಯಾಗುತ್ತದೆ ಎಂದು ಪುರಾಣ ಹೇಳುತ್ತದೆ. ಹಾಗಾದರೆ ಈ ತನಕ ಅಲ್ಲಿನ ನೀರು ಸ್ಪರ್ಶಿಸದವರಿಗೆ ಕುಡಿದವರಿಗೆ ಜ್ಞಾನವೇ ಬಂದಿಲ್ಲವಲ್ಲ ಎಂದು ಕೆಲವರು ಪ್ರಶ್ನೆ ಮಾಡಬಹುದು. ನಾವು ಆ ಪವಿತ್ರ ಸ್ಥಳದಲ್ಲಿ ಶಿವಲಿಂಗದ ನೀರು ಕುಡಿಯುವಾಗ ಮನಸ್ಸು, ಭಕ್ತಿ ಭಾವದಿಂದ ಕುಡಿಯಬೇಕು. ಆಗ ಜ್ಞಾನ ವೃದ್ಧಿಯಾಗುತ್ತದೆ ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು. ಕಾಶಿ ಮೇಲೆ ಹಲವು ದಾಳಿಗಳು ನಡೆದಿದ್ದರೂ ಇಂದಿಗೂ ಕಾಶಿ ವಿಶ್ವನಾಥ ದೇವಸ್ಥಾನ ತನ್ನ ಅಸ್ತಿತ್ವ ಹಾಗೂ ಪಾವಿತ್ರ್ಯತೆ ಉಳಿಸಿಕೊಂಡಿದೆ ಎಂದು ಪುಸ್ತಕದ ಲೇಖಕ ಡಾ.ವಿಕ್ರಂ ಸಂಪತ್ ಅಭಿಪ್ರಾಯಪಟ್ಟರು. ಹಿಂದಿನ ರಾಜ ಮಹಾರಾಜರು ದೇವರ ಬಗ್ಗೆ ಹೊಂದಿದ್ದ ಭಕ್ತಿ, ದೇವಸ್ಥಾನಗಳ ಬಗ್ಗೆ ಇದ್ದ ಕಾಳಜಿ ಹಾಗೂ ಪೂಜ್ಯನೀಯ ಭಾವನೆಯನ್ನು ಅಲ್ಲಿ ಲಭ್ಯವಿರುವ ಶಾಸನಗಳು ಹಾಗೂ ಪ್ರಾಚ್ಯ ಕುರುಹುಗಳು ಪುಷ್ಟೀಕರಿಸುತ್ತವೆ ಎಂದು ಹೇಳಿದರು. ಕಾಶಿಯಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶಾಖೆ ನವೆಂಬರ್ 10, 2019ರಲ್ಲಿ ಉದ್ಘಾಟನೆಗೊಂಡಿದೆ. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ, ಪುಸ್ತಕದ ಲೇಖಕರಾದ ಡಾ. ವಿಕ್ರಂ ಸಂಪತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಶಿವರಾತ್ರಿಯಂದು ಜ್ಞಾನವ್ಯಾಪಿಯಲ್ಲಿ ಶಿವ ದರ್ಶನ ಸಂತಸದ ಸಂಗತಿ

ಈ ಬಾರಿಯ ಶಿವರಾತ್ರಿಯಂದು ಕಾಶಿಯ ಜ್ಞಾನವ್ಯಾಪಿ ದೇವಸ್ಥಾನದಲ್ಲಿ ಶಿವ ದರ್ಶನ ಆಗುತ್ತಿರುವುದು ಸಂತೋಷದ ಸಂಗತಿ ಎಂದು ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಹೇಳಿದರು. ಈಗ ಜ್ಞಾನವ್ಯಾಪಿ ದೇವಸ್ಥಾನದಲ್ಲಿ ಶಿವ ದರ್ಶನಕ್ಕೆ ಅವಕಾಶ ದೊರೆತಿದ್ದು, ಈ ಮೂಲಕ ಧನ್ಯತಾಭಾವ ಮೆರೆಯಬೇಕು ಎಂದು ಸಲಹೆ ನೀಡಿದರು. ಅಯೋಧ್ಯೆಯಲ್ಲಿ ಶ್ರೀ ರಾಮಮಂದಿರ ನಿರ್ಮಾಣದಂತೆ ಮಥುರದಲ್ಲೂ ಆಗಬೇಕು ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು.

ಡಾ.ವಿಕ್ರಂ ಸಂಪತ್ ಅವರು ಬರೆದಿರುವ ಪುಸ್ತಕದಲ್ಲಿ ಕಾಶಿ, ಕಾಶಿ ವಿಶ್ವನಾಥ, ಜ್ಞಾನವ್ಯಾಪಿ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಬಹಳ ಶ್ರಮವಹಿಸಿ ಮಾಹಿತಿ ಕಲೆ ಹಾಕಿ ವಾಸ್ತವತೆಯನ್ನು ವಿವರಿಸಿದ್ದಾರೆ ಎಂದರು.

ಈಗಿನ ಯುವಕರು ಡಾ.ವಿಕ್ರಂ ಸಂಪತ್ ಅವರಂತೆ ಇಂತಹ ಪುಸ್ತಕಗಳನ್ನು ಬರೆಯ ಬೇಕು. ಭಾರತ ಮಾತೆಯ ಕುರಿತಂತೆಯೂ ಹೆಚ್ಚು ಪುಸ್ತಕಗಳನ್ನು ಬರೆಯಬೇಕು. ಈ ಮೂಲಕ ಅಡಗಿರುವ ಬಹಳಷ್ಟು ಸತ್ಯಗಳನ್ನು ಬಯಲಿಗೆಳೆಯುವ ಪ್ರಯತ್ನ ಮಾಡಬೇಕು ಎಂದು ಸ್ವಾಮೀಜಿ ಸಲಹೆ ನೀಡಿದರು.

## ವೇಟಿಂಗ್ ಫಾರ್ ಶಿವ: ಅನ್‌ಅರ್ಥಿಂಗ್ ದ ಟ್ರುಥ್ ಆಫ್ ಕಾಶಿಸ್ ಜ್ಞಾನವ್ಯಾಪಿ ಕಾಶಿ, ಕಾಶಿ ದೇವಸ್ಥಾನ, ಜ್ಞಾನವ್ಯಾಪಿ ಬಗ್ಗೆ ಸಮಗ್ರ ವಿವರ

ಬೆಂಗಳೂರು ಮೂಲದ ಇತಿಹಾಸಕಾರ ಡಾ.ವಿಕ್ರಂ ಸಂಪತ್ ಅವರ 'ವೇಟಿಂಗ್ ಫಾರ್ ಶಿವ: ಅನ್‌ಅರ್ಥಿಂಗ್ ದ ಟ್ರುಥ್ ಆಫ್ ಕಾಶಿಸ್ ಜ್ಞಾನವ್ಯಾಪಿ(Waiting for Shiva: Unearthing the truth of Kashi's Gyan Vapi) ಪುಸ್ತಕ ಕಾಶಿ, ಕಾಶಿ ವಿಶ್ವನಾಥ ದೇವಸ್ಥಾನ, ಜ್ಞಾನವ್ಯಾಪಿ ಸೇರಿದಂತೆ ಹಲವು ಮಹತ್ವದ ಸಂಗತಿಗಳ ಬೆಳಕು ಚೆಲ್ಲುತ್ತದೆ. ಜ್ಞಾನವ್ಯಾಪಿಯಲ್ಲಿ ದೇವಸ್ಥಾನವಿದೆ ಎಂಬುದಕ್ಕೆ ಹಲವು ಪುರಾವೆಗಳು ಲಭ್ಯವಿದ್ದರೂ, ಅಯೋಧ್ಯೆಯ ರಾಮಮಂದಿರದಂತೆ ಜ್ಞಾನವ್ಯಾಪಿ ಕೂಡ ಕಾನೂನು ವಿವಾದಕ್ಕೆ ಸಿಲುಕಿರುವ ಬಗ್ಗೆ ಡಾ.ವಿಕ್ರಂ ಸಂಪತ್ ವಿವರಿಸಿದ್ದಾರೆ. ಅಲ್ಲದೆ ಕಾಶಿಯ ಬಗ್ಗೆ ವೇದ, ಪುರಾಣ, ಸಂಸ್ಕೃತ ಸಾಹಿತ್ಯ, ಪುಣ್ಯಕಥೆ, ಪರ್ಷಿಯನ್ ಪ್ರವಾಸಿಗರು ದಾಖಲಿಸಿದ ಅಂಶ, ವಿದೇಶಿ ಪ್ರವಾಸಿಗರ ಕಥನವನ್ನು ಪುಸ್ತಕ ಒಳಗೊಂಡಿದೆ. ಬ್ರಿಟಿಷರ ಕಾಲದಿಂದ ಆರಂಭಗೊಂಡು ಆಧುನಿಕ ಭಾರತದ ತನಕ ಲಭ್ಯವಿರುವ ಅಧಿಕೃತ ದಾಖಲೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಪ್ರಮುಖವಾಗಿ ದೇವಸ್ಥಾನಗಳಲ್ಲಿ ಹುದುಗಿರುವ ಹಲವು ಸತ್ಯಗಳನ್ನು ತಿಳಿಸುತ್ತದೆ. ಈ ಪುಸ್ತಕದಲ್ಲಿ ಸ್ವಯಂ ಉದ್ಭವದ ಜ್ಯೋತಿರ್ಲಿಂಗ (ವಿಶ್ವೇಶ್ವರ) ಇತಿಹಾಸದ ಬಗ್ಗೆ ಬಹಳ ಆಳವಾದ ಅಧ್ಯಯನದ ಮೂಲಕ ವಿವರಣೆ ನೀಡಲಾಗಿದೆ. ಕಾಶಿಯಲ್ಲಿ ಕೊನೆಯುಸಿರೆಳೆದ ಭಕ್ತನಿಗೆ ಭಗವಂತ ಮುಕ್ತಿ ಕರುಣಿಸುತ್ತಾನೆ ಎಂದು ಐತಿಹ್ಯ ಹೇಳುತ್ತದೆ. ಆದ ಕಾರಣ ಇಂತಹ ಪರಮ ಪವಿತ್ರ ಕ್ಷೇತ್ರದಲ್ಲಿ ಬಹಳಷ್ಟು ಜನರು ಕೊನೆಯುಸಿರೆಳೆಯುತ್ತಾರೆ ಎಂದು ಪುಸ್ತಕದಲ್ಲಿ ಹೇಳಲಾಗಿದೆ.

## ಪಬ್ಲಿಕ್ ಪರೀಕ್ಷೆ ರದ್ದು

ಬಿಟ್ಟ ವಿಚಾರವಲ್ಲ ಎಂದು ಅರ್ಜಿದಾರರು ವಾದ ಮಂಡಿಸಿದ್ದರು. ಅಷ್ಟೇ ಅಲ್ಲ, ಸರ್ಕಾರವೇ ಸ್ವಯಂ ಪ್ರೇರಿತವಾಗಿ ತೀರ್ಮಾನ ಕೈಗೊಳ್ಳಲಾಗದು. ಕಾರಣ ಕಡ್ಡಾಯ ನಿಯಮವನ್ನೇ ಮಾಡಿಲ್ಲ ಎಂದು ಆಕ್ಷೇಪಿಸಿದ್ದರು. ನ್ಯಾಯಪೀಠ ಅರ್ಜಿದಾರರ ವಾದವನ್ನು ಪುರಸ್ಕರಿಸಿ ಸರ್ಕಾರದ ಆದೇಶವನ್ನು ರದ್ದುಗೊಳಿಸಿತು. ಕೋವಿಡ್ ನಂತರದ ದಿನಗಳಲ್ಲಿ ಮಕ್ಕಳ ಕಲಿಕೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಗೂ ಮುನ್ನ ನಾಲ್ಕು ಹಂತಗಳಲ್ಲಿ ಪಬ್ಲಿಕ್ ಪರೀಕ್ಷೆ ನಡೆಸಲು ಸರ್ಕಾರ ತೀರ್ಮಾನ ಕೈಗೊಂಡು ಆದೇಶ ಹೊರಡಿಸಿತ್ತು.

ಇದುವರೆಗೂ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಿಗಷ್ಟೇ ಬೋರ್ಡ್ ಪರೀಕ್ಷೆಗಳು ನಡೆಯುತ್ತಿದ್ದವು. ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ಸಂಸ್ಥೆಗಳನ್ನು ನಡೆಸಲು ಹಾಗೂ ವಿದ್ಯಾರ್ಥಿಗಳನ್ನು ಆಕರ್ಷಿಸಲು ಶ್ರೇಣೀಕೃತ ಫಲಿತಾಂಶ ನೀಡುತ್ತಿದ್ದವು. ಸರ್ಕಾರಿ, ಅನುದಾನಿತ, ಶಾಲೆಗಳ ಜೊತೆಗೆ ಅನುದಾನ ರಹಿತ ಶಾಲೆಗಳ ಮಕ್ಕಳು ಕೆಲವು ಘಟ್ಟಗಳಲ್ಲಿ ಬೋರ್ಡ್ ಪರೀಕ್ಷೆ ಬರೆಯಬೇಕೆಂದು ಸರ್ಕಾರ ತೀರ್ಮಾನ ಕೈಗೊಂಡಿತ್ತು. ವಿದ್ಯಾರ್ಥಿಗಳಿಗೆ ಪಬ್ಲಿಕ್ ಪರೀಕ್ಷೆ ನಡೆಸುವುದರಿಂದ ಅವರ ಕಲಿಕೆಯಲ್ಲಿ ಗಂಭೀರತೆ ಕಾಣಬಹುದೆಂಬ ಅಭಿಪ್ರಾಯ ಹೊಂದಿತ್ತು.

ಆದರೆ, ರಾಜ್ಯ ಸರ್ಕಾರ ಕಳೆದ ಡಿಸೆಂಬರ್‌ನಲ್ಲಿ ಹೊರಡಿಸಿದ್ದ ಸುತ್ತೋಲೆಗಳನ್ನು ಪ್ರಶ್ನಿಸಿ ಕರ್ನಾಟಕ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಸಂಘ ಕೋರ್ಟ್ ಮೆಟ್ಟಿಲೇರಿತ್ತು. ವಾದ-ಪ್ರತಿ ವಾದ ಆಲಿಸಿದ ಹೈಕೋರ್ಟ್ ಸರ್ಕಾರದ ಸುತ್ತೋಲೆ ರದ್ದುಗೊಳಿಸಿ ಆದೇಶಿಸಿದೆ. ಪರೀಕ್ಷೆ ಸುತ್ತೋಲೆಯನ್ನು ಹೈಕೋರ್ಟ್ ರದ್ದುಗೊಳಿಸಿರುವುದರಿಂದ ಸರ್ಕಾರದ ನಿರ್ಧಾರಕ್ಕೆ ಹಿನ್ನಡೆಯಾಗಿದ್ದು, ತಕ್ಷಣಕ್ಕೆ ಮೇಲ್ಮನವಿ ಸಲ್ಲಿಸಿ ಪರೀಕ್ಷೆ ನಡೆಸುವ ಸಾಧ್ಯತೆ ಕಡಿಮೆ ಇರುವುದರಿಂದ ಈ ವರ್ಷದ ಮಟ್ಟಿಗೆ 5, 8, 9 ಮತ್ತು 11ನೇ ತರಗತಿಗಳಿಗೆ ಪಬ್ಲಿಕ್ ಪರೀಕ್ಷೆ ಇರುವುದಿಲ್ಲ, ಅಲ್ಲದೆ, 9ನೇ ತರಗತಿವರೆಗೆ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸುವ ಪದ್ಧತಿಯೂ ಇಲ್ಲ. ಈಗ ರಾಜ್ಯದಲ್ಲಿ 10ನೇ ತರಗತಿ ಮತ್ತು ದ್ವಿತೀಯ ಪಿಯುಸಿಗೆ ಮಾತ್ರ ಪಬ್ಲಿಕ್ ಪರೀಕ್ಷೆ ನಡೆಸಲಾಗುತ್ತದೆ.

### ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಮುನ್ನುಡಿ

# 'ಜನಪದ ಸಂಭ್ರಮ'ಕ್ಕೆ ವರ್ಣರಂಜಿತ ಚಾಲನೆ





ಮೈಸೂರಿನ ರಂಗಾಯಣದ ಕಿಂದರಿಜೋಗಿ ಆವರಣದಲ್ಲಿ ಬುಧವಾರ ಬಹುರೂಪಿ ನಾಟಕೋತ್ಸವದ ಜನಪದ ಸಂಭ್ರಮಕ್ಕೆ ಚಾಲನೆ ನೀಡಲಾಯಿತು. ಮತ್ತೊಂದು ಚಿತ್ರದಲ್ಲಿ ಗದಗ ಜಿಲ್ಲೆಯ ರೋಣದ 'ಜೀವನ ಬೆಳಕು ಕಲಾ ತಂಡ'ದ ಕಲಾವಿದರು 'ಜೋಗತಿ ನೃತ್ಯ'ವನ್ನು ಸಾದರಪಡಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಮಾ.6(ಪಿಎಂ)-ಮೈಸೂರು ರಂಗಾಯಣದ ಪ್ರತಿಷ್ಠಿತ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ಮುನ್ನುಡಿಯಾಗಿ ಬುಧವಾರ ಜನಪದ ಸಂಭ್ರಮಕ್ಕೆ ಗಣ್ಯರ ಜನಪದ ಕುರಿತ ನುಡಿಗಳು ಹಾಗೂ ಜಾನಪದ ಕಲಾತಂಡಗಳ ಕಲಾ ಪ್ರದರ್ಶನದೊಂದಿಗೆ ವರ್ಣರಂಜಿತ ಚಾಲನೆ ದೊರೆಯಿತು.

ರಂಗಾಯಣದ ಕಿಂದರಿಜೋಗಿ ಆವರಣದಲ್ಲಿ ಗದಗ ಜಿಲ್ಲೆ ರೋಣದ ಜೀವನ ಬೆಳಕು ಕಲಾತಂಡದ ಕಲಾವಿದರು ಚೌಡಿಕೆ, ಢೋಲಕ್ ಮತ್ತು ಹಾರ್ಮೋನಿಯಂ ವಾದ್ಯಗಳ ನುಡಿಸಿ ನಾದ ಹೊಮ್ಮಿಸುತ್ತಿದ್ದರೆ, ಅವರಿಗೆ ಹೂಗಿಡಗಳನ್ನು ನೀಡುವ ಮೂಲಕ ಹಿರಿಯ ಜನಪದ ಗಾಯಕ ಡಾ.ಮಳವಳ್ಳಿ ಮಹದೇವಸ್ವಾಮಿ ಜನಪದ ಸಂಭ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಡಾ.ಮಳವಳ್ಳಿ ಮಹದೇವಸ್ವಾಮಿ, ಶರಣರೆಲ್ಲರಿಗೂ ಲಿಂಗಧಾರಣೆ ಮಾಡಿ ಅನುಭವ ಮಂಟಪ ಕಟ್ಟಿ ಮೇಲು-ಕೀಳು ಜಾತಿ ಎಂಬುದನ್ನು ದೂರು ಮಾಡಿ ಎಲ್ಲರನ್ನೂ ಒಂದುಗೂಡಿಸಿದವರು ಬಸವಣ್ಣ. ಅವರ ನೇತೃತ್ವದ ಶರಣರ ಸಮಾಜ ಸುಧಾರಣೆ ಮತ್ತು ಕೊಡುಗೆಗಳನ್ನು ಜಾನಪದ ಕಲಾವಿದರು ಕಥೆಯಾಗಿ ಹಾಡುತ್ತೇವೆ ಎಂದು ತಿಳಿಸಿದರು. ಜನಪದ ನಮ್ಮ ಸಾಹಿತ್ಯದ ಹಳೇ ಬೇರು. ಜನಪದ ಹಾಡುಗಳನ್ನು ಎಷ್ಟೋ ಸಿನಿಮಾಗಳಿಗೆ ಅಳವಡಿಸಿಕೊಳ್ಳಲಾಗಿದೆ. ಈ ವೇಳೆ ಹಲವು ಸಂದರ್ಭದಲ್ಲಿ ಜನಪದ ಹಾಡುಗಳನ್ನು ಸಿನಿಮಾದವರು ತಪ್ಪಾಗಿ ಹಾಡಿದ್ದೂ ಇದ್ದು, ಇದು ನಮಗೆ ನೋವು ತಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಲ್ಲದೆ, ಮಲೆ ಮಾದೇಶ್ವರರ ಒಂದು ಗೀತೆಯನ್ನು ಉದಾಹರಣೆಯಾಗಿ ವಿವರಿಸಿದ ಅವರು, 'ಸೋಜುಗಾದ ಸೂಜು ಮಲ್ಲಿಗೆ' ಹಾಡಿಗೆ 'ಅಂದಾವರೆ ಕೆಂದಾವರೆ' ಎನ್ನುವ ಬದಲು 'ಅಂದಾವರೆ ಮುಂದಾವರೆ' ಎಂದೂ, 'ಚಂದಕ್ಕೆ ಮಾಲೆ ಬಿಲ್ಪತ್ರೆ' ಎನ್ನುವ ಬದಲು 'ಚಂದಕ್ಕಿ' ಎಂದು ಹಾಡಿದ್ದಾರೆ. ಹೀಗೆ ಗೊತ್ತಿದ್ದೂ ಮಾಡಿದ್ದರೋ, ಗೊತ್ತಿಲ್ಲದೇ ಮಾಡಿದ್ದರೋ ಗೊತ್ತಿಲ್ಲ ಎಂದು ವಿಷಾದಿಸಿದರು.

ಬಸವಣ್ಣನ ಸಹೋದರಿ ನಾಗಮ್ಮನ ಪುತ್ರನಾಗಿ ಚೆನ್ನಬಸವಣ್ಣ ಜನ್ಮತಾಳುವ ಪ್ರಸಂಗ, ಹರಳಯ್ಯ ದಂಪತಿ ತಮ್ಮ ತೊಡೆ ಚರ್ಮದ ಮೂಲಕ ಪಾದರಕ್ಷೆ ಮಾಡಿ ಬಸವಣ್ಣನವರಿಗೆ ನೀಡುವ ಸನ್ನಿವೇಶವನ್ನು ವಿವರಿಸಿದ ಅವರು, ಜನಪದದಲ್ಲಿ ಬೇಕಾದಷ್ಟು ಕಥೆಗಳು ಇವೆ ಎಂದರಲ್ಲದೆ, ಬಹುರೂಪಿ ನಾಟಕೋತ್ಸವಕ್ಕೆ 'ಇವ ನಮ್ಮವ ಇವ ನಮ್ಮವ' ಶೀರ್ಷಿಕೆ ನೀಡಿರುವುದು ಅತ್ಯಂತ ಸಂತಸ ಉಂಟು ಮಾಡಿದೆ. ಭೂಮಿ ಮೇಲೆ ಹುಟ್ಟಿದ್ದೇವೆ, ಒಂದು ದಿನ ಎಲ್ಲರೂ ಹೋಗುತ್ತೇವೆ. ಈ ನಡುವೆ 'ಅವನ್ಯಾರು ಅವನ್ಯಾರು' ಎನ್ನುವ ಬದಲು ಬಸವಣ್ಣನವರ ಆಶಯದಂತೆ 'ಇವ ನಮ್ಮವ' ಎಂದು ಹೇಳುವ ಮೂಲಕ ಸಾಮರಸ್ಯದಿಂದ ಬದುಕಿ ಒಂದು ದಿನ ಭಗವಂತನ ಸನ್ನಿಧಿಗೆ ಸೇರಿಕೊಳ್ಳಬೇಕು ಎಂದು ನುಡಿದರು.

ಹಲವು ವರ್ಷಗಳ ಹಿಂದೆ ನಾನು ಹಾಡಿದ ಜೋಗಿ ಹಾಡು ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ ಎಂದು ತಿಳಿಸಿದ ಅವರು, ದ್ರೌಪದಿ ಜೊತೆಗೆ ಪಗಡೆ ಆಟ ಆಡಿ ಸೋತು ಅರ್ಜುನ ಸನ್ಯಾಸಿಯಾಗಿ ವೇಶ್ಯೆಯರ ಬೀದಿಯಲ್ಲಿ ಬರುವ ಸನ್ನಿವೇಶವದು ಎಂದವರೇ 'ಅನ್ಯಾಯಕಾರಿ ಬ್ರಹ್ಮ ಈ ಸುಂದರನ ಸನ್ಯಾಸಿ ಮಾಡಬಹುದೇ?' ಗೀತೆ ಸಾದರಪಡಿಸಿ, ಸಭಿಕರನ್ನು ರಂಜಿಸಿದರು.

ಮುಖ್ಯ ಅತಿಥಿಯಾಗಿದ್ದ ಜಾನಪದ ವಿದ್ವಾಂಸರಾದ ಡಾ.ಜಯಲಕ್ಷ್ಮಿ ಸೀತಾಪುರ ಮಾತನಾಡಿ, ಬಹುರೂಪಿ ನಾಟಕೋತ್ಸವ ಬಹುಸಂಸ್ಕೃತಿಯ ಸಂಭ್ರಮ. ನನ್ನ ಬಾಲ್ಯದಲ್ಲಿ ನಾಟಕ ಎಂದರೆ ಅತ್ಯಂತ ಆಸಕ್ತಿ. ಹಾಗಾಗಿ ಪೌರಾಣಿಕ ನಾಟಕಗಳಲ್ಲಿ ಅಭಿನಯಿಸುವ ಅವಕಾಶವನ್ನೂ ಬಳಸಿಕೊಂಡೆ. ಆ ಕಾಲಕ್ಕೆ ಗ್ರಾಮೀಣ ಪ್ರದೇಶದಲ್ಲಿ ಪೌರಾಣಿಕ ನಾಟಕಗಳು ಜನತೆಯನ್ನು ಜನಮುಖಿಯಾಗಿ ತಿದ್ದುವ ಕೆಲಸ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು ಎಂದು ತಿಳಿಸಿದರು.

ಜನಪದ ಹಾಡುಗಳು ಆ ಸಂದರ್ಭಕ್ಕೆ ಕಾಯಕದ ಅನುಭವದೊಂದಿಗೆ ಅನಾವರಣಗೊಂಡಿವೆ. ಶಿಕ್ಷಣ ಇಲ್ಲವಾದರೂ ಅದರ ಕೊರತೆ ನೀಗಿಸಲು ಅವರಿಗೆ ಅನುಭವದ ಜ್ಞಾನ ಇತ್ತು. ನಮ್ಮ ಜನಪದರು ಅದ್ಭುತ ಕಲಾವಿದರು. ನಮ್ಮಲ್ಲಿನ ಪ್ರಾದೇಶಿಕ ಭಿನ್ನತೆ ಒಂದು ಸೊಗಡು. ಜೊತೆಗೆ ಸಾಹಿತ್ಯದಲ್ಲಿ ದೊಡ್ಡ ನಿಧಿ ಎಂದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ರಂಗಾಯಣ ಉಪ ನಿರ್ದೇಶಕಿ ನಿರ್ಮಲ ಮಠಪತಿ, ಕನ್ನಡ ಸಾಹಿತ್ಯ ಅನೇಕ ಪ್ರಕಾರದಲ್ಲಿ ಕವಲು ಹೊಡೆದಿದೆ. ಈ ಎಲ್ಲಾ ಸಾಹಿತ್ಯ ಪ್ರಕಾರ ಸೃಷ್ಟಿಗೆ ಮೂಲ ಜಾನಪದ. ಹಾಗಾಗಿ ಜನಪದ ತಾಯಿಬೇರು ಎನ್ನಲಾಗಿದೆ. ನಮ್ಮ ಜನಪದರು ತಾವು ಹಾಡಿದ್ದು ಸಾಹಿತ್ಯ ಆಗುತ್ತದೆ ಎಂಬ ಕಲ್ಪನೆ ಹೊಂದಿರಲಿಲ್ಲ. ಅವರು ತಾವು ಮಾಡುವ ಕೆಲಸದಲ್ಲಿ ಶ್ರಮದ ದಣಿವು ಅರಿವಿಗೆ ಬಾರದೇ ಇರಲೆಂದು ಹಾಡಿ ಹಾಡು ಕಟ್ಟಿದರು ಎಂದು ತಿಳಿಸಿದರು. ತಮ್ಮ ಸಂತಸ, ದುಃಖ ದುಮ್ಮಾನಗಳ ಅನುಭವಗಳನ್ನು, ತಮ್ಮ ಸಮೂಹದೊಂದಿಗೆ ಹಂಚಿಕೊಂಡರು. ಅದರ ಪರಿಣಾಮವಾಗಿ ಜನಪದ ಸಾಹಿತ್ಯ ಸೃಷ್ಟಿಯಾಗಿ ಅನೇಕ ಜನಪದ ಕಲೆಗಳು ಜನ್ಮತಾಳಿದವು. ಹಬ್ಬ-ಶುಭ ಕಾರ್ಯ ಮಾಡುವ ಮುನ್ನ ಚಪ್ಪರದ ಪೂಜೆ ಎಂದು ಮಾಡಲಾಗುತ್ತದೆ. ಆ ಚಪ್ಪರದ ಪೂಜೆಯೇ ಬಹುರೂಪಿಯ ಈ ಜನಪದ ಸಂಭ್ರಮ. ನಮ್ಮ ಜನಪದರು ಮತ್ತು 12ನೇ ಶತಮಾನದ ಶರಣರಿಗೂ ಸಾಮ್ಯತೆ ಇದ್ದು, ಈ ಇಬ್ಬರು ಎಂದೂ ಸಮಾಜಕ್ಕೆ ಹೊರೆಯಾಗದೆ, ಪ್ರಕೃತಿಗೆ ಮಾರಕವಾಗದೇ ಬದುಕಿದವರು ಎಂದು ಸ್ಮರಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಬಹುರೂಪಿ ನಾಟಕೋತ್ಸವದ ಸಂಚಾಲಕರೂ ಆದ ಹಿರಿಯ ರಂಗ ಕರ್ಮಿ ಪ್ರೊ.ಹೆಚ್.ಎಸ್.ಉಮೇಶ್, ಜನಪದ ಸಂಭ್ರಮದ ಸಂಚಾಲಕಿ ಗೀತಾ ಮೋಂಟಡ್ಕ ಮತ್ತಿತರರು ಹಾಜರಿದ್ದರು.

### ಜೋಗತಿ ನೃತ್ಯದ ಪುಳಕ

ಉತ್ತರ ಕರ್ನಾಟಕದ ಬೆಳಗಾವಿಯ ಸವದತ್ತಿ ತಾಲೂಕಿನ ಪ್ರಸಿದ್ಧ ದೈವ ಎಲ್ಲಮ್ಮ ತಾಯಿಯನ್ನು ಸ್ಮರಿಸಿ ಆರಾಧಿಸುವ 'ಜೋಗತಿ ನೃತ್ಯ'ವನ್ನು ಗದಗ ಜಿಲ್ಲೆಯ ರೋಣದ 'ಜೀವನ ಬೆಳಕು ಕಲಾ ತಂಡ'ದ ಕಲಾವಿದರು ಸಾದರಪಡಿಸಿದರು. ಈ ಕಲಾವಿದರ ಪೈಕಿ ಕೆಲವರು ತಲೆಯ ಮೇಲೆ ದೀಪಾಲೆ ಕಂಬ, ಅದರ ಮೇಲೆ ಬಿಂದಿಗೆ ಮತ್ತು ಅದರ ಮೇಲೆ ದೇವಿ ಮುಖವಾಡ ಒಳಗೊಂಡಂತೆ ನವಿಲುಗರಿಗಳನ್ನು ಹೊತ್ತು ಮಾಡಿದ ನೃತ್ಯವು ನೋಡುಗರಲ್ಲಿ ರೋಮಾಂಚನ ಉಂಟುಮಾಡಿತು. ಚೌಡಿಕೆ, ಢೋಲಕ್ ಮತ್ತು ಹಾರ್ಮೋನಿಯಂ ವಾದನಗಳ ಮೆರುಗು ನೃತ್ಯಕ್ಕೆ ಮತ್ತಷ್ಟು ಸೊಬಗು ಹೆಚ್ಚಿಸಿತು. ಬಳಿಕ ಗದಗ ಜಿಲ್ಲೆಯ ನೀಲಗುಂದ ತಾಲೂಕಿನ 'ಜೈಭೀಮ್ ಗೀಗೀ ಕಲಾ ತಂಡ'ದ ಕಲಾವಿದರು ಗೀಗೀ ಪದ ಸಾದರಪಡಿಸಿದರು. ಕಿಕ್ಕಿರಿದು ತುಂಬಿದ್ದ ಪ್ರೇಕ್ಷಕರು ಈ ಜಾನಪದ ಕಾರ್ಯಕ್ರಮವನ್ನು ಸಂಭ್ರಮಿಸಿದರು. ಅಂತೆಯೇ ಮಾ.11ರವರೆಗೆ ಪ್ರತಿದಿನ ರಂಗಾಯಣದ ಕಿಂದರಿಜೋಗಿ ಆವರಣದಲ್ಲಿ ಜಾನಪದ ಕಲಾ ಪ್ರಕಾರಗಳ ಪ್ರದರ್ಶನ ನಡೆಯಲಿದೆ.



# ಲೋಕಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯ 2,915 ಮತಗಟ್ಟೆಗಳಲ್ಲಿ ಮತದಾನ ಜಾಗೃತಿ ಸಂದೇಶ

### ವಿಶೇಷವಾಗಿ ಇಂತಹ ಮತಗಟ್ಟೆಗಳ ವಿನ್ಯಾಸಗೊಳಿಸುವಂತೆ ಜಿಲ್ಲಾ ಚುನಾವಣಾಧಿಕಾರಿಯೂ ಆದ ಡಿಸಿ ಸೂಚನೆ

ಮೈಸೂರು, ಮಾ.6(ಎಂಕೆ)-ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜಿಲ್ಲೆಯ 2,915 ಮತಗಟ್ಟೆಗಳು ಮತದಾನ ಜಾಗೃತಿ ಸಂದೇಶಗಳೊಂದಿಗೆ ಸುಂದರವಾಗಿ ಕಂಗೊಳಿಸುವಂತೆ ವಿನ್ಯಾಸಗೊಳಿಸಿ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸೂಚಿಸಿದರು. ಜಿಪಂ ಸಭಾಂಗಣದಲ್ಲಿ ಬುಧವಾರ ನಡೆದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಚುನಾವಣಾ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚುನಾವಣಾ ನೀತಿ ಸಂಹಿತೆ ಜಾರಿಯಾದ ಬಳಿಕ ತಮ್ಮ ತಮ್ಮ ವ್ಯಾಪ್ತಿಯ ಮತಗಟ್ಟೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು, ಮತಗಟ್ಟೆಗಳನ್ನು ಆಕರ್ಷಕವಾಗಿ ಕಾಣುವಂತೆ ಮಾಡುವುದು ಮುಖ್ಯವಾಗಿದೆ. ಮತಗಟ್ಟೆ ವಿನ್ಯಾಸ ಕಾರ್ಯದಿಂದಲೂ ಮತದಾನದ ಜಾಗೃತಿ ಮೂಡಲಿದ್ದು, ಮತದಾನದ ಪ್ರಮಾಣವೂ ಹೆಚ್ಚಾಗಲಿದೆ. ಆದ್ದರಿಂದ ಜಿಲ್ಲೆಯ 2,915 ಮತಗಟ್ಟೆಗಳು ಸುಂದರವಾಗಿ ಕಾಣುವಂತಾಗಬೇಕು. ಎಲ್ಲಾ ಬಗೆಯ ಮೂಲಸೌಕರ್ಯಗಳೊಂದಿಗೆ ಸುಂದರವಾಗಿ ಕಾಣುವ ಪ್ರತಿ ತಾಲೂಕಿನ ಮೂರು ಮತಗಟ್ಟೆಗಳಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನ ನೀಡಲಾಗುವುದು ಎಂದರು.



ಲೋಕಸಭಾ ಚುನಾವಣೆ ಹಿನ್ನೆಲೆ ಜಿಪಂ ಸಭಾಂಗಣದಲ್ಲಿ ನಡೆದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಚುನಾವಣಾ ತರಬೇತಿ ಕಾರ್ಯಕ್ರಮದಲ್ಲಿ ಡಿಸಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿದರು.

ಈಗಾಗಲೇ ಗುರುತಿಸಿರುವ ಮತಗಟ್ಟೆಗಳಲ್ಲಿ ರಿಪೇರಿಗಳಿದ್ದರೆ ತಕ್ಷಣ ಮಾಡಿಸಿಕೊಳ್ಳಿ, ಚುನಾವಣಾ ನೀತಿ ಸಂಹಿತೆಗೂ ಮುನ್ನ ಮತಗಟ್ಟೆಗಳು ಶೇ.100ರಷ್ಟು ಸಿದ್ಧವಿರಬೇಕು. ಯಾವುದಾದರೂ ಮತಗಟ್ಟೆಯಲ್ಲಿ ನ್ಯೂನತೆಗಳಿದ್ದರೆ ತೊಂದರೆಯಾಗಲಿದೆ. ಮತದಾನ ಕಾರ್ಯಕ್ಕೆ ಆಗಮಿಸುವ ಸಿಬ್ಬಂದಿ, 14 ರಿಂದ 15 ಗಂಟೆಗಳ ಕಾಲ ನಿತ್ಯ ಕಾರ್ಯ ನಿರ್ವಹಿಸಬೇಕಾಗುತ್ತದೆ. ಹಾಗಾಗಿ ಅವರಿಗೆ ಉತ್ತಮ ಊಟ, ವಸತಿ ವ್ಯವಸ್ಥೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರಲ್ಲದೆ ಚುನಾವಣೆ ಘೋಷಣೆಯಾದ 24, 48 ಹಾಗೂ 72 ಗಂಟೆಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗೆಗೆ ತಿಳಿಸಿದ ಅವರು, 24 ಗಂಟೆಯೊಳಗೆ ಸರ್ಕಾರದ ಜಾಹೀರಾತುಗಳು, 48 ಗಂಟೆಯೊಳಗೆ ಸರ್ಕಾರಿ ಸ್ವಾಮ್ಯದ ನಿಗಮ ಮಂಡಳಿಗಳು ಹಾಗೂ 72 ಗಂಟೆಯೊಳಗೆ ಖಾಸಗಿ ವಲಯದ ನೀತಿ ಸಂಹಿತೆಗೆ ವಿರುದ್ಧವಾದ ಜಾಹೀರಾತುಗಳನ್ನು ತೆಗೆಯಬೇಕಾಗುತ್ತದೆ. ಹಾಗೆಯೇ ಯಾವುದೇ ಹೊಸ ಕಾಮಗಾರಿಗಳನ್ನು ಆರಂಭಿಸುವಂತಿಲ್ಲ ಹಾಗೂ ಹೊಸ ಕಾಮಗಾರಿಗಳಿಗೆ ಮಂಜೂರು ನೀಡುವಂತಿಲ್ಲ. ಕೆಲ ಪ್ರಚಾರ ಹಾಗೂ ಸಾಮಗ್ರಿಗಳ ಬಳಕೆಗೆ ಅನುಮತಿ ನೀಡುವಾಗ ಯಾವುದೇ ಗೊಂದಲಗಳಿಗೆ ಎಡೆಮಾಡಿಕೊಡದಂತೆ ಅನುಮತಿಗಳನ್ನು ನೀಡಬೇಕು ಎಂದು ಮಾಹಿತಿ ನೀಡಿದರು.

# ಪತ್ನಿ ಆತ್ಮಹತ್ಯೆಗೆ ಕಾರಣನಾದ ಪತಿಗೆ 3 ವರ್ಷಗಳ ಕಠಿಣ ಸಜೆ

ಮೈಸೂರು, ಮಾ.6(ಎಂಕೆ)- ವರದಕ್ಷಿಣೆ ಕಿರುಕುಳ ನೀಡಿ ಪತ್ನಿಯ ಆತ್ಮಹತ್ಯೆಗೆ ಕಾರಣನಾದ ಆರೋಪಿ ಪತಿಗೆ ಮೈಸೂರು ಜಿಲ್ಲಾ 5ನೇ ಎಡಿಜೆ ಮತ್ತು ಸೆಷನ್ ನ್ಯಾಯಾಲಯ 3 ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದೆ.


ಮೈಸೂರಿನ ರಾಜೀವ್‌ನಗರ 1ನೇ ಹಂತ, 1ನೇ ಕ್ರಾಸ್‌ನ ನಿವಾಸಿ ಇಮ್ರಾನ್ ಖಾನ್(28) ಶಿಕ್ಷೆಗೆ ಗುರಿಯಾದ ಆರೋಪಿ. 2013ರಲ್ಲಿ ಈತ ತನಗೆ ಕೊಟ್ಟಿರುವ ವರದಕ್ಷಿಣೆ ಹಣ ಕಡಿಮೆಯಾಯಿತೆಂದು ತನ್ನ ಪತ್ನಿಯ ಜೊತೆಗೆ ಜಗಳ ತೆಗೆದು ಕಿರುಕುಳ ನೀಡಿದ್ದ ಹಿನ್ನೆಲೆಯಲ್ಲಿ ನೊಂದ ಆತನ ಪತ್ನಿ ಮೈಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿಹಚ್ಚಿಕೊಂಡು ಗಾಯಗೊಂಡಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಈ ಸಂಬಂಧ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪ್ರಕರಣ ಸಂಬಂಧ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿದ ದೇವರಾಜ ವಿಭಾಗದ ಎಸಿಪಿ ಜಯಮಾರುತಿ, ಆರೋಪಿ ವಿರುದ್ಧ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಮೈಸೂರು ಜಿಲ್ಲಾ 5ನೇ ಎಡಿಜೆ ಮತ್ತು ಸೆಷನ್ ನ್ಯಾಯಾಲಯವು ಆರೋಪಿಗೆ ಫೆ.26 ರಂದು 3 ವರ್ಷ ಕಠಿಣ ಶಿಕ್ಷೆ ಹಾಗೂ 15 ಸಾವಿರ ದಂಡ ವಿಧಿಸಿದೆ. ಸಹಾಯಕ ಸರ್ಕಾರಿ ಅಭಿಯೋಜಕರಾದ ಬಿ.ಇ.ಯೋಗೇಶ್ವರ ವಾದ ಮಂಡಿಸಿದ್ದರು.

# ಮೈಸೂರಲ್ಲಿ ಕಣ್ಣಾಯಿಸಿದೆಡೆಯೆಲ್ಲಾ ಕಸ ಕಂಡು ಲೋಕಾಯುಕ್ತ ಪೊಲೀಸರಿಗೇ ಕಸಿವಿಸಿ...!

ಮೈಸೂರು, ಮಾ.6(ಎಂಕೆ)-ಮೈಸೂರು ನಗರದೆಲ್ಲೆಡೆ ಎಲ್ಲೆಂದರಲ್ಲಿ ಸುರಿದಿರುವ ಕಸದ ರಾಶಿ ಕಂಡು ಲೋಕಾಯುಕ್ತ ಪೊಲೀಸರು ಕಸಿವಿಸಿಗೊಳಗಾದ ಪ್ರಸಂಗ ನಡೆಯಿತು...!

ಕರ್ನಾಟಕ ಲೋಕಾಯುಕ್ತರ ಸೂಚನೆ ಮೇರೆಗೆ ಮೈಸೂರು ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ವಿ.ಜಿ.ಸಜೀತ್ ನೇತೃತ್ವದಲ್ಲಿ ಬುಧವಾರ ಮೂರು ತಂಡಗಳಾಗಿ ನಗರದೆಲ್ಲೆಡೆ ಕಸ ವಿಲೇವಾರಿ, ಪಾಲಿಕೆ ವಲಯ ಕಚೇರಿಯಗಳಲ್ಲಿನ ಕಾರ್ಯವೈಖರಿ, ಪೌರಕಾರ್ಮಿಕರ ಕುಂದು-ಕೊರತೆ ವಿಚಾರಿಸಿದ ಲೋಕಾಯುಕ್ತ ಪೊಲೀಸರು, ಎಲ್ಲೆಂದರಲ್ಲಿ ಸುರಿದಿರುವ ಕಸದ ರಾಶಿ ಕಂಡು ಪಾಲಿಕೆ ಪರಿಸರ ಇಂಜಿನಿಯರ್‌ಗಳಿಗೆ ವ್ಯವಸ್ಥಿತ ಕಸ ವಿಲೇವಾರಿ ಜೊತೆಗೆ ಸ್ವಚ್ಛತೆ ಕಾಪಾಡುವಂತೆ ತಾಕೀತು ಮಾಡಿದರು.





ಬುಧವಾರ ಇಡೀ ದಿನ ಮೈಸೂರಿನ ವಿವಿಧೆಡೆ ಕಸ ವಿಲೇವಾರಿ ಪರಿಶೀಲಿಸಿದ ಲೋಕಾಯುಕ್ತ ಪೊಲೀಸರಿಗೆ ಹೇಸಿಗೆ ಪಡುವಂತಹ ಚಿತ್ರಣ ಕಣ್ಣಿಗೆ ಬಿತ್ತು.

ಅಗ್ರಹಾರದ ರಾಮಾನುಜ ರಸ್ತೆ, ಎಲೆತೋಟ, ನಂಜುಮಳಿಗೆ, ಉದಯಗಿರಿ, ಹೆಬ್ಬಾಳು, ವಾಣಿವಿಲಾಸ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳು, ಕಸ ಬಿಸಾಡುವ ಸ್ಥಳಗಳು, ಕಸ ವಿಂಗಡಣೆ ಮಾಡುವ ಸ್ಥಳ, ಕಸ ಸಂಗ್ರಹಿಸಿ ವಿಲೇವಾರಿ ಸ್ಥಳಗಳಿಗೆ ಭೇಟಿ ನೀಡಿದ ಲೋಕಾಯುಕ್ತ ಪೊಲೀಸರು, ಕಸ ವಿಲೇವಾರಿ, ಕಸ ವಿಂಗಡಣೆ ವ್ಯವಸ್ಥಿತವಾಗಿರುವಂತೆ ಕಾರ್ಯರೂಪಿಸಬೇಕು. ಹಾಗೆಯೇ ಸಾರ್ವಜನಿಕರಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸಬೇಕು ಎಂದು ಪಾಲಿಕೆ ಅಧಿಕಾರಿ ಹಾಗೂ ಪರಿಸರ ಇಂಜಿನಿಯರ್‌ಗಳಿಗೆ ಸೂಚಿಸಿದರು. ನಂತರ ಪಾಲಿಕೆಯ ವಲಯ ಕಚೇರಿಗಳಿಗೆ ಭೇಟಿ ನೀಡಿ, ಕಡತಗಳ ನಿರ್ವಹಣೆ, ಪೌರ ಕಾರ್ಮಿಕರಿಗೆ ನೀಡುತ್ತಿರುವ ಮೂಲ ಸೌಕರ್ಯಗಳ ಮಾಹಿತಿ ಪಡೆದರಲ್ಲದೆ ಪೌರಕಾರ್ಮಿಕರ ಕರ್ತವ್ಯ, ಕಸ ಸಂಗ್ರಹಿಸುವ ವಾಹನಗಳ ಪರಿಶೀಲನೆ ಹಾಗೂ ಕಸ ಸಂಗ್ರಹಿಸಲು ವಾಹನಗಳನ್ನು ಸಮರ್ಪಕ ಹಂಚಿಕೆ ಮಾಡಲಾಗಿದೆಯೇ ಎಂಬುದರ ಮಾಹಿತಿ ಪಡೆದರು. ಬಳಿಕ ಪಾಲಿಕೆ ಕೇಂದ್ರ ಕಚೇರಿಗೆ ಭೇಟಿ ನೀಡಿ, ಪಾಲಿಕೆ ವಾಹನಗಳ ಸ್ಥಿತಿ ಹೇಗಿದೆ? ಬಳಸಲು ಯೋಗ್ಯವಾಗಿವೆಯೇ ಎಂಬುದನ್ನು ಪರಿಶೀಲನೆ ನಡೆಸಿದರು.

**ಕಸ ವಿಲೇವಾರಿಗೆ ಸೂಚನೆ:** ಬಳಿಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಲೋಕಾಯುಕ್ತ ಪೊಲೀಸರು, ಕರ್ನಾಟಕ ಲೋಕಾಯುಕ್ತ ಪೊಲೀಸ್ ಮಹಾ ನಿರ್ದೇಶಕರಾದ ಪ್ರಶಾಂತ್ ಕುಮಾರ್ ಠಾಕೂರ್, ಪೊಲೀಸ್ ಮಹಾ ನಿರೀಕ್ಷಕರಾದ ಸುಬ್ರಹ್ಮಣ್ಯೇಶ್ವರ ರಾವ್ ಅವರ ಸೂಚನೆ ಮೇರೆಗೆ ಬೆಳಿಗ್ಗೆ 7 ಗಂಟೆಯಿಂದ ಸಂಜೆಯವರೆಗೂ ನಗರದೆಲ್ಲೆಡೆ ಕಸ ವಿಲೇವಾರಿ ಸೇರಿದಂತೆ ನಗರಪಾಲಿಕೆ ಕೇಂದ್ರ ಕಚೇರಿ ವಾಹನ ವಿಭಾಗ ಹಾಗೂ ವಲಯ ಕಚೇರಿಗಳ ಕಾರ್ಯವೈಖರಿ ಪರಿಶೀಲನೆ ನಡೆಸಲಾಯಿತು. ಕಸ ವಿಲೇವಾರಿಯಲ್ಲಿ ಇನ್ನಷ್ಟು ಪ್ರಗತಿ ಆಗಬೇಕಿದೆ ಎಂದು ಪಾಲಿಕೆ ಅಧಿಕಾರಿ, ಪರಿಸರ ಇಂಜಿನಿಯರ್‌ಗಳಿಗೆ ಸೂಚಿಸಿದ್ದೇವೆ ಎಂದರು. ಪೌರಕಾರ್ಮಿಕರು ಸರಿಯಾದ ಸಮಯಕ್ಕೆ ಕಸ ವಿಲೇವಾರಿ ಮಾಡುತ್ತಿದ್ದಾರೆ. ಆದರೆ ಎಲ್ಲೆಂದರಲ್ಲಿ ಕಸ ಸುರಿಯುವುದು ಹೆಚ್ಚಾಗಿ, ಈ ಕುರಿತು ಸಾರ್ವಜನಿಕರಲ್ಲಿ ಅಗತ್ಯ ಅರಿವು ಮೂಡಿಸುವಂತೆ ತಿಳಿಸಿದ್ದೇವೆ. ಪಾಲಿಕೆಯ 400ಕ್ಕೂ ಹೆಚ್ಚು ವಾಹನಗಳ ಫಿಟ್‌ನೆಸ್ ಸರ್ಟಿಫಿಕೆಟ್ ಪರಿಶೀಲನೆ ನಡೆಸಿದ್ದು, ಎಲ್ಲಾ ವಾಹನಗಳು ಬಳಕೆಗೆ ಯೋಗ್ಯವಾಗಿವೆ. ಪೌರಕಾರ್ಮಿಕರಿಗೆ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ಮಾಹಿತಿ ನೀಡಿದರು. ಈ ವೇಳೆ ಲೋಕಾಯುಕ್ತ ಡಿವೈಎಸ್‌ಪಿಗಳಾದ ಕೃಷ್ಣಯ್ಯ, ಮಾಲತೀಶ್, ಪೊಲೀಸ್ ನಿರೀಕ್ಷಕರಾದ ಉಮೇಶ್, ಜಯರತ್ನ, ರೂಪಶ್ರೀ, ರವಿಕುಮಾರ್, ಮೈಸೂರು ಲೋಕಾಯುಕ್ತ ಪೊಲೀಸ್ ಠಾಣೆ ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ



# ಬಿಜೆಪಿ ಬೆಂಬಲಿಸಿದರೆ ಪ್ರಧಾನಿ ಮೋದಿ ವಿಶ್ವ ಗುರು

## ನಾರಿಶಕ್ತಿವಂದನ್ ಅಭಿನಂದನ್ ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ ಬಣ್ಣನೆ




ತಿ.ನರಸೀಪುರ ತಾಲೂಕು ಹಿಟ್ಟುವಳ್ಳಿ ಗ್ರಾಮದಲ್ಲಿ ನಾರಿ ಶಕ್ತಿ ವಂದನ್ ಅಭಿನಂದನ್ ಕಾರ್ಯಕ್ರಮದಡಿ ಆಯೋಜಿಸಲಾಗಿದ್ದ ಪ್ರಧಾನಿ ನರೇಂದ್ರ ಮೋದಿಯವರ ಭಾಷಣದ ನೇರ ಪ್ರಸಾರ ವೀಕ್ಷಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ ಮಾತನಾಡಿದರು.

ತಿ.ನರಸೀಪುರ, ಮಾ.6– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಪಕ್ಷವನ್ನು ಬೆಂಬಲಿಸಿದರೆ ಮೋದಿಯವರು ವಿಶ್ವ ಗುರುವಾಗಿ ಹೊರಹೊಮ್ಮುತ್ತಾರೆ ಎಂದು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ತಿಳಿಸಿದ್ದಾರೆ.

ತಾಲೂಕಿನ ಹಿಟ್ಟುವಳ್ಳಿ ಗ್ರಾಮದ ಶ್ರೀರಾಮಮಂದಿರ ಮುಂಭಾಗದ ಆವರಣದಲ್ಲಿ ನಾರಿಶಕ್ತಿವಂದನ್ ಅಭಿನಂದನ್ ಕಾರ್ಯ ಕ್ರಮದಲ್ಲಿ ಗ್ರಾಮದ ಮಹಿಳೆಯರು ಹಾಗೂ ಬಿಜೆಪಿ ಮುಖಂಡರೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಭಾಷಣದ ನೇರ ಪ್ರಸಾರವನ್ನು ಎಲ್ಇಡಿ ಪರದೆಯಲ್ಲಿ ವೀಕ್ಷಿಸಿ ಅವರು ಮಾತನಾಡಿದರು.

ಕಳೆದ 10 ವರ್ಷಗಳ ಹಿಂದೆ ಪ್ರಧಾನಿ ಮೋದಿಯವರು ಮೊದಲನೇ ಬಾರಿಗೆ ಸ್ವಚ್ಛ ಭಾರತ್ ಕಾರ್ಯಕ್ರಮ ಹಮ್ಮಿಕೊಂಡಿದ್ದ ವೇಳೆ ಪ್ರಧಾನಿಗಳು ಕಸ ಗುಡಿಸುವುದನ್ನು ಅನೇಕರು ಗೇಲಿ ಮಾಡಿದ್ದರು. ಆದರೆ ಸ್ವಚ್ಛ ಭಾರತ್ ಕಾರ್ಯಕ್ರಮ ಯಶಸ್ವಿಯಾಯಿತು. ನಂತರ ಮಹಿಳೆಯರಿಗಾಗುತ್ತಿದ್ದ ಮುಜುಗರವನ್ನು ತಪ್ಪಿಸಲು ಪ್ರತಿ ಮನೆಗೂ ಶೌಚಾಲಯ ನಿರ್ಮಿಸಬೇಕೆಂಬ ಮಹದಾಸೆಯಿಂದ ಕಾರ್ಯಕ್ರಮ ಜಾರಿಗೆ ತಂದಿದ್ದರಿಂದ ಇಂದು ಮಹಿಳೆಯರು ಯಾವುದೇ ಮುಜುಗರಕ್ಕೊಳಗಾಗದೇ ಗೌರವದಿಂದ ಬದುಕುತ್ತಿದ್ದಾರೆ ಎಂದರು.

**ಮೋದಿಯವರಿಗೆ ಅಮೇರಿಕಾ ವೀಸಾ ಕೊಟ್ಟಿರಲಿಲ್ಲ..!:** ಈ ಹಿಂದೆ ಭಾರತ ದೇಶವನ್ನು ಮುಂದುವರೆದ ರಾಷ್ಟ್ರಗಳು ಬಡರಾಷ್ಟ್ರ ಎನ್ನುವಂತೆ ಬಿಂಬಿಸುತ್ತಿದ್ದವು. ನರೇಂದ್ರ ಮೋದಿಯವರು ಗುಜರಾತ್ ಮುಖ್ಯಮಂತ್ರಿಯಾಗಿದ್ದ ವೇಳೆ ಅಮೆರಿಕಾ ದೇಶ ಅವರಿಗೆ ವೀಸಾ ಕೊಟ್ಟಿರಲಿಲ್ಲ. ಈಗ ಅದೇ ದೇಶ ಮೋದಿಯವರನ್ನು ರೆಡ್ ಕಾರ್ಪೆಟ್ ಹಾಕಿ ಸ್ವಾಗತಿಸುತ್ತಿದೆ. ಮೋದಿ ಪ್ರಧಾನಿಯಾದ ನಂತರ ದೇಶವನ್ನು ಹಾಗೂ ದೇಶದ ಗೌರವವನ್ನು ಯಾವ ಮಟ್ಟಕ್ಕೆ ಕೊಂಡೊಯ್ದಿದ್ದಾರೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಹಾಗಾಗಿ ಈ ಬಾರಿ ಬಿಜೆಪಿ ಬೆಂಬಲಿಸಿದರೆ ದೇಶದ ಆರ್ಥಿಕ ಪರಿಸ್ಥಿತಿ ವಿಶ್ವದಲ್ಲೇ ಮೊದಲನೇ ಸ್ಥಾನದಲ್ಲಿರುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ಉಪಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಜಿಲ್ಲಾ ಕಾರ್ಯದರ್ಶಿ ರಂಗಸಮುದ್ರ ವಾಸುದೇವ್, ವರುಣ ಕ್ಷೇತ್ರದ ಅಧ್ಯಕ್ಷ ಹದಿನಾರು ಸತೀಶ್, ಕಾರ್ಯದರ್ಶಿಗಳಾದ ಬಿದರಗೂಡು ಕುಮಾರ್, ವೆಂಕಟರಮಶೆಟ್ಟಿ, ವಿಜೇಂದ್ರ ಅಭಿಮಾನಿ ಬಳಗದ ಅಧ್ಯಕ್ಷ ಮಹೇಶ್, ಎಸ್‌ಟಿ ಮೋರ್ಚಾ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಮುದ್ದುಕೃಷ್ಣ, ಮಾಜಿ ಅಧ್ಯಕ್ಷ ನಂದೀಶ್, ಶಂಕರ್, ಗೋಪಾಲ್, ಮಾದೇಶ್, ಎಚ್.ಪಿ. ಮಹೇಶ್, ಅನಿಲ್ ಸೇರಿದಂತೆ ಮಹಿಳಾ ಸದಸ್ಯರು ಹಾಜರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ



| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಕೆಟಿಎಂ (ಕ) | 4 ಪ್ರದರ್ಶನಗಳು, |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಕಾಟೇರ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಕ್ರಾಕ್ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಗುಂಟೂರು ಖಾರಂ (ತೆ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಒಂದು ಸರಳ ಪ್ರೇಮಕಥೆ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಆಪರೇಷನ್ ವ್ಯಾಲಂಟೇನ್ (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಉಪಾಧ್ಯಕ್ಷ (ಕ) | 4 ಪ್ರದರ್ಶನಗಳು |
| **ಲಿಡೋ** | |
| ವಾರಿ–3 (ತೆ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಸಹದೇವ್ (ಹಿ) | 4 ಪ್ರದರ್ಶನಗಳು |
| **ಪ್ರಭಾ** | |
| ಛಾಯಾ (ಕ) | 2 ಪ್ರದರ್ಶನಗಳು |
| ನಮೋಭಾರತ್ (ಕ) | 2 ಪ್ರದರ್ಶನಗಳು |

# ಅನಿಮಿಯಾ ಮುಕ್ತ ಭಾರತಕ್ಕೆ ಸಮುದಾಯದ ಸಹಕಾರ ಅಗತ್ಯ



ಕಂಪಲಾಪುರದಲ್ಲಿ ಅನಿಮಿಯಾ ಮುಕ್ತ ಭಾರತ ಕುರಿತು ಕಾರ್ಯಾಗಾರ ನಡೆಯಿತು.

ಕಂಪಲಾಪುರ, ಮಾ.6– ಅನಿಮಿಯಾ (ರಕ್ತಹೀನತೆ) ದಂತಹ ಸಮಸ್ಯೆಗಳನ್ನು ಹೋಗಲಾಡಿಸಲು ಸಮುದಾಯದ ಸಹಕಾರ ತುಂಬಾ ಮುಖ್ಯ ಎಂದು ಕೆಹೆಚ್‌ಪಿಟಿ ತಾಲೂಕು ಸಂಯೋಜಕ ಸಂತೋಷ್ ತಿಳಿಸಿದರು.

ಇಲ್ಲಿನ ಗ್ರಾಪಂ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಅನಿಮಿಯಾ ಮುಕ್ತ ಭಾರತ ಕುರಿತು ಕಾರ್ಯಾಗಾರದಲ್ಲಿ ಮಾತನಾಡಿ, ದೇಹಕ್ಕೆ ಆಮ್ಲಜನಕವನ್ನು ಸರಬರಾಜು ಮಾಡಲು ರಕ್ತದಲ್ಲಿ ಹಿಮೋಗ್ಲೋಬಿನ್ ಅವಶ್ಯಕತೆ ಇದ್ದು, ಕೆಂಪುರಕ್ತಕಣಗಳು ಕಡಿಮೆಯಾದಲ್ಲಿ ಅನಿಮಿಯಾ ದಂತಹ ಸಮಸ್ಯೆಗಳು ಎದುರಾಗುತ್ತವೆ. ಇದು ಯಾವ ವಯಸ್ಸಿನವರಲ್ಲಿ ಬೇಕಾದರೂ ಕಾಣಿಸಿಕೊಳ್ಳಬಹುದು. ಚರ್ಮ ಬೆಳ್ಳಗಾಗುವುದು, ರಕ್ತದ ಕೊರತೆ, ಅತಿಯಾದ ಆಯಾಸ ಮುಂತಾದ ಸಮಸ್ಯೆಗಳಿದ್ದರೆ ತಕ್ಷಣ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿ, ಚಿಕಿತ್ಸೆ ಪಡೆಯಬೇಕು ಎಂದರು.

ಇದರ ನಿಯಂತ್ರಣಕ್ಕೆ ಸಮತೋಲನ ಹಾಗೂ ಪೌಷ್ಟಿಕ ಆಹಾರ ಸೇವನೆ ಮಾಡಬೇಕು ಎಂದರು.

ಇದೇ ಸಂದರ್ಭದಲ್ಲಿ ಗ್ರಾಪಂ ಪಿಡಿಓ ಪರಮೇಶ್, ಕಾರ್ಯದರ್ಶಿ ಸುಷ್ಮ, ಸುಮಿತ್ರ, ಅಧ್ಯಕ್ಷೆ ಜಾನಕಿ ವೆಂಕಟರಾಮ್, ಉಪಾಧ್ಯಕ್ಷೆ ಸುಮಾ, ಗ್ರಾಪಂ ಸದಸ್ಯ ಶಿವು, ಮುಖಂಡ ಪ್ರಕಾಶ್‌ಗೌಡ, ಸರ್ಕಾರಿ ಪ್ರೌಢಶಾಲೆ ಎಂಸಿಡಿಎಂಸಿ ಅಧ್ಯಕ್ಷ ಸದಾಶಿವ, ಸದಸ್ಯೆ ಶಹಜಾನ್, ಶಾಲೆಯ ಮುಖ್ಯ ಶಿಕ್ಷಕರು, ಕೆಹೆಚ್‌ಪಿಟಿ, ಗ್ರಾಪಂ ಸಿಬ್ಬಂದಿ, ಅಂಗನವಾಡಿ ಆಶಾ ಕಾರ್ಯಕರ್ತೆಯರು ಹಾಜರಿದ್ದರು.

# ಅಗ್ನಿದುರಂತದಿಂದ ಎರಡು ಮನೆಗಳಿಗೆ ಹಾನಿ

## ಎಚ್ಚೆತ್ತು ಹೊರಗೆ ಬಂದು ಜೀವ ಉಳಿಸಿಕೊಂಡರು



ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ 2 ಮನೆಗಳು ಸಂಪೂರ್ಣ ಭಸ್ಮಗೊಂಡು ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ.

ನಂಜನಗೂಡು, ಮಾ.6– ಆಕಸ್ಮಿಕ ಅಗ್ನಿ ಅನಾಹುತದಿಂದ ತಾಲೂಕಿನ ಕಲ್ಮಳ್ಳಿ ಗ್ರಾಮದಲ್ಲಿ 2 ತೊಟ್ಟಿ ಮನೆಗಳು ಸಂಪೂರ್ಣ ಭಸ್ಮಗೊಂಡಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಅದೃಷ್ಟವಶಾತ್ ಮನೆಯಲ್ಲಿದ್ದವರು ಎಚ್ಚೆತ್ತುಕೊಂಡು ಹೊರ ಬಂದು ಪ್ರಾಣ ಉಳಿಸಿಕೊಂಡಿದ್ದಾರೆ.

ಗ್ರಾಮದ ನಿವಾಸಿಗಳಾದ ಬಸವರಾಜಪ್ಪ ಹಾಗೂ ಪ್ರೇಮಮ್ಮ ಸುಬ್ಬಪ್ಪ ಎಂಬುವರ ಮನೆಗಳು ಅಕ್ಕಪಕ್ಕ ಹೊಂದಿಕೊಂಡಂತಿದ್ದು, ಸೋಮವಾರ ಮಧ್ಯರಾತ್ರಿ ಸುಮಾರು 1 ಗಂಟೆಯ ಸಮಯದಲ್ಲಿ ಕಾಣಿಸಿಕೊಂಡ ಬೆಂಕಿಯಿಂದಾಗಿ ಮನೆಯಲ್ಲಿದ್ದ ದವಸ–ಧಾನ್ಯ, ಕೃಷಿಯಂತ್ರಗಳು, ಬೆಲೆಬಾಳುವ ಒಡವೆ, ಬಟ್ಟೆಬರೆ, ಪಾತ್ರೆಗಳು, ಮನೆ ಮತ್ತು ಜಮೀನಿನ ದಾಖಲೆ ಪತ್ರಗಳು ಸೇರಿದಂತೆ ಇಡೀ ಮನೆಯೇ ಸುಟ್ಟುಕರಕಲಾಗಿದೆ.

ಇನ್ನು ಬೆಂಕಿ ಜ್ವಾಲೆ ಹರಡುತ್ತಿದ್ದಂತೆ ಎಚ್ಚೆತ್ತುಕೊಂಡ ಮನೆಯಲ್ಲಿದ್ದವರು ಹೊರಗೋಡಿ ಬಂದು ಜೀವ ಉಳಿಸಿಕೊಂಡಿದ್ದಾರೆ. ಬಳಿಕ ಸ್ಥಳೀಯರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಹೆಚ್ಚಿನ ಅನಾಹುತವಾಗುವುದನ್ನು ತಪ್ಪಿಸಿದ್ದಾರೆ. ಮಂಗಳವಾರ ಬೆಳಗ್ಗೆ ಬಿಳಿಗೆರೆ ಠಾಣೆಯ ಪೊಲೀಸರು ಸ್ಥಳಕ್ಕಾಗಮಿಸಿ ಮಹಜರು ನಡೆಸಿದ್ದು, ಈ ಸಂಬಂಧ ದೂರು ದಾಖಲಾಗಿದೆ.

ಬುಧವಾರ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಪರಿಹಾರವನ್ನು ಕೊಡಿಸುವ ಭರವಸೆಯನ್ನು ನೀಡಿದ್ದಾರೆ.

## ಡಿಆರ್‌ಸಿ ಸಿನಿಮಾಸ್

ದೂ : 4240422/4241800

| | |
|---|---|
| ಸ್ಕ್ರೀನ್ 1 | **ಚಾರಿ 111 (ತೆ):** ಬೆ.10.30ಕ್ಕೆ, **ಡ್ಯೂನ್ ಪಾರ್ಟ್ 2 (ಇಂ):** ಮ.1.05ಕ್ಕೆ, ರಾ.10.25ಕ್ಕೆ, **ಆರ್ಟಿಕಲ್ 370 (ಹಿಂ):** ಸಂ.4.15ಕ್ಕೆ, ರಾ.7.25ಕ್ಕೆ. |
| ಸ್ಕ್ರೀನ್ 2 | **ಜುಗಲ್‌ಬಂದಿ (ಕ):** ಬೆ.10.45ಕ್ಕೆ, **ಉಪಾಧ್ಯಕ್ಷ (ಕ):** ಮ.1.30ಕ್ಕೆ, **ಲಾಪತಾ ಲೇಡಿಸ್ (ಹಿಂ):** ಸಂ.4.25ಕ್ಕೆ, **ಒಂದು ಸರಳ ಪ್ರೇಮಕಥೆ (ಕ):** ರಾ.7ಕ್ಕೆ, **ಮಂಜುಮಲೆ (ಮ):** ರಾ.10ಕ್ಕೆ. |
| ಸ್ಕ್ರೀನ್ 3 | **ಆರ್ಟಿಕಲ್ 370 (ಹಿಂ):** ಬೆ.10.40ಕ್ಕೆ, ರಾ.9.45ಕ್ಕೆ, **ಆಪರೇಷನ್ ವ್ಯಾಲೆಂಟೈನ್ (ತೆ):** ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ. |
| ಸ್ಕ್ರೀನ್ 4 | |

## ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | **ಆಪರೇಷನ್ ವ್ಯಾಲೆಂಟೈನ್ (ತೆ):** ಬೆ.9.55ಕ್ಕೆ, **ಲಾಪತಾ ಲೇಡಿಸ್ (ಹಿಂ):** ಮ.12.45ಕ್ಕೆ, **ಡ್ಯೂನ್ ಪಾರ್ಟ್ 2 (ಇಂ):** ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ. |
| ಸ್ಕ್ರೀನ್ 2 | **ಡ್ಯೂನ್ ಪಾರ್ಟ್ 2 (ಇಂ):** ಬೆ.9.50ಕ್ಕೆ, ಮ.1.20ಕ್ಕೆ, **ಕ್ರೀಂ (ಕ):** ಸಂ.4.50ಕ್ಕೆ, **ಆಪರೇಷನ್ ವ್ಯಾಲೆಂಟೈನ್ (ತೆ):** ರಾ.7.25ಕ್ಕೆ, **ಮಂಜುಮ್ಮೆಲ್ ಬಾಯ್ಸ್ (ಮ):** ರಾ.10.20ಕ್ಕೆ. |
| ಸ್ಕ್ರೀನ್ 3 | **ಲಾಪತಾ ಲೇಡಿಸ್ (ಹಿಂ):** ಬೆ.10ಕ್ಕೆ, ರಾ.7.25ಕ್ಕೆ, **ಆರ್ಟಿಕಲ್ 370 (ಹಿಂ):** ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ. |
| ಸ್ಕ್ರೀನ್ 4 | **ಆಪರೇಷನ್ ವ್ಯಾಲೆಂಟೈನ್ (ತೆ):** ಮ.12ಕ್ಕೆ, **ಉಪಾಧ್ಯಕ್ಷ (ಕ):** ಮ.3.05ಕ್ಕೆ, **ಒಂದು ಸರಳ ಪ್ರೇಮಕಥೆ (ಕ):** ಸಂ.6.20ಕ್ಕೆ. |

## ಮೈಸೂರು ವಿಷನ್ ಸಿನಿಮಾ

ದೂ : 0821–2973519

| | |
|---|---|
| ಸ್ಕ್ರೀನ್ 1 | **ಪಾರ್ಕಿಂಗ್ (ಕ):** ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮಕಥೆ (ಕ):** ಸಂ.6.35ಕ್ಕೆ, **ಅನ್ನಪೂರ್ಣಿ (ತ):** ರಾ.9.15ಕ್ಕೆ |
| ಸ್ಕ್ರೀನ್ 2 | **ಅನಿಮಲ್ (ಹಿಂ):** ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಮ.1.45ಕ್ಕೆ. |
| ಸ್ಕ್ರೀನ್ 3 | **ಸ್ಯಾಮ್ ಬಹದ್ದೂರ್ (ಹಿಂ):** ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ):** ಮ.1.05ಕ್ಕೆ, ರಾ.7.45ಕ್ಕೆ |
| ಸ್ಕ್ರೀನ್ 4 | **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.45ಕ್ಕೆ, **ಅನಿಮಲ್ (ಹಿಂ):** ಮ.2.40ಕ್ಕೆ, **ನೆಪೋಲಿಯನ್ (ಇಂ):** ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ರಾ.9.30ಕ್ಕೆ. |

## ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

**ಆರ್ಟಿಕಲ್ 370 (ಹಿಂ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ಡ್ಯೂನ್ ಪಾರ್ಟ್ 2 (ಇಂ):** ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ಡೆಮೋನ್ ಸ್ಲೇಯರ್ (ಜ):** ಸಂ.4.30ಕ್ಕೆ, **ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ):** ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, **ಲಾಪತಾ ಲೇಡಿಸ್ (ಹಿಂ):** ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, **ಮಂಜುಮ್ಮೆಲ್ ಬಾಯ್ಸ್ (ಮ):** ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, **ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ):** ಬೆ.11.55ಕ್ಕೆ, **ಕ್ರೀಂ (ಕ):** ಸಂ.6.55ಕ್ಕೆ, **ಪ್ರೇಮಲು (ಮ):** ರಾ.10.20ಕ್ಕೆ, **ಜೋಶುವಾ (ತ):** ಮ.1.20ಕ್ಕೆ, ಸಂ.6.55ಕ್ಕೆ, **ಭ್ರಮಯುಗಂ (ಮ):** ರಾ.9.45ಕ್ಕೆ, **ವಾರನಂ ಆಯಿರಂ (ತ):** ಮ.3.40ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಒಂಟಿಸಲಗ ಪುಂಡಾಟ: ಭಯಭೀತರಾದ ಗ್ರಾಮಸ್ಥರು

ಮಲ್ಕುಂಡಿ, ಮಾ.6– ಬೆಳ್ಳಂ ಬೆಳಗ್ಗೆ ರಸ್ತೆ ಮಧ್ಯೆ ಒಂಟಿಸಲಗವೊಂದು ನಡೆಸುತ್ತಿದ್ದ ಪುಂಡಾಟವನ್ನು ಕಂಡ ಗ್ರಾಮಸ್ಥರು ಭಯಭೀತರಾಗಿರುವ ಘಟನೆ ಸಮೀಪದ ಕೆಲ್ಲೂಪುರ ಗ್ರಾಮದಲ್ಲಿ ವರದಿಯಾಗಿದೆ.

ಕಾಡಿನಿಂದ ಬಂದ ಒಂಟಿಸಲಗವೊಂದು ರಸ್ತೆಯಲ್ಲಿ ಓಡಾಡುತ್ತಿರುವುದನ್ನು ನೋಡಿದ ಗ್ರಾಮಸ್ಥರು ಕಿರುಚಾಡಿದ್ದಾರೆ. ಕೆಲ್ಲೂಪುರ ಗ್ರಾಮದಿಂದ ರೈತರು ಮಲ್ಲಹಳ್ಳಿ ಗ್ರಾಮಕ್ಕೆ ಹಾಲು ಹಾಕಲು ಬರುತ್ತಿದ್ದ ವೇಳೆ ಒಂಟಿಸಲಗ ರಸ್ತೆಯಲ್ಲಿ ಓಡಾಡುತ್ತ ಸೊಂಡಿಲನ್ನು ಅತ್ತಿಂದಿತ್ತ ಜೋರಾಗಿ ಆಡಿಸುತ್ತಾ ಪುಂಡಾಟ ನಡೆಸುತ್ತಿತ್ತು. ಇದನ್ನು ಕಂಡ ರೈತರು ಗಾಬರಿಗೊಂಡು ತಕ್ಷಣ ಅರಣ್ಯ ಇಲಾಖೆಗೆ ತಿಳಿಸಿದ್ದಾರೆ. ಅರಣ್ಯಾಧಿಕಾರಿಗಳು ಸ್ಥಳಕ್ಕೆ ಬರುವಷ್ಟರಲ್ಲಿ ಜನರೇ ಶಿಳ್ಳೆ, ತಮಟೆ ಶಬ್ದ ಮಾಡಿ ಒಂಟಿ ಸಲಗವನ್ನು ಕಾಡಿನತ್ತ ಓಡಿಸಿದ್ದಾರೆ. ಗ್ರಾಮದ ಮುಖಂಡ ಸುರೇಶ್ ಮಾತನಾಡಿ, ಬೇಸಿಗೆಯಾದ್ದರಿಂದ ಕಾಡಿನಲ್ಲಿ ಆಹಾರವಿಲ್ಲದೇ ನಾಡಿನತ್ತ ಬರುತ್ತಿವೆ. ಇದರಿಂದ ಗ್ರಾಮದ ಜನರು ಓಡಾಡಲು ಭಯಭೀತರಾಗಿದ್ದಾರೆ. ರೈತರು ಕಷ್ಟ ಪಟ್ಟು ಬೆಳೆದ ಫಸಲುಗಳನ್ನು ನಾಶ ಮಾಡುವುದಕ್ಕೆ ಅವಕಾಶ ನೀಡದೆ ಅರಣ್ಯಾಧಿಕಾರಿಗಳು ಕಾಡಾನೆ ಹಾವಳಿಯನ್ನು ತಪ್ಪಿಸಲು ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.

# ಆದಿಚುಂಚನಗಿರಿ ವಿದ್ಯಾಸಂಸ್ಥೆಯಿಂದ ವಿದ್ಯಾರ್ಥಿನಿಗೆ ಅಭಿನಂದನೆ



ಸ್ನಾತಕೋತ್ತರ ಪದವಿಯಲ್ಲಿ ನಗದು ಬಹುಮಾನ ಪಡೆದ ವಿದ್ಯಾರ್ಥಿನಿ ಪೂರ್ಣಿಮಾ ಅವರನ್ನು ಶ್ರೀ ಆದಿಚುಂಚನಗಿರಿ ವಿದ್ಯಾಸಂಸ್ಥೆಯ ಪ್ರಥಮ ದರ್ಜೆ ಕಾಲೇಜು ವತಿಯಿಂದ ಅಭಿನಂದಿಸಲಾಯಿತು.

ಹೆಚ್.ಡಿ.ಕೋಟೆ, ಮಾ.6– ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೆಚ್.ಡಿ. ಕೋಟೆ ಎಂದಾಕ್ಷಣ 1990ರ ದಶಕದಲ್ಲಿ ತಾತ್ಸಾರದ ಮನೋಭಾವವಿತ್ತು. ಆದರೆ ಈಗ ತಾಲೂಕು ಶೈಕ್ಷಣಿಕ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸುತ್ತಿದೆ ಎಂದು ಶ್ರೀ ಆದಿಚುಂಚನಗಿರಿ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಕೆ.ಪಿ. ಬಸವೇಗೌಡ ತಿಳಿಸಿದರು.

ಪಟ್ಟಣದ ಶ್ರೀ ಆದಿಚುಂಚನಗಿರಿ ವಿದ್ಯಾಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಮೈಸೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ಪದವಿಯಲ್ಲಿ ನಗದು ಬಹುಮಾನ ಹಾಗೂ ಪ್ರಶಸ್ತಿ ಪಡೆದ ಮಾಗುಡಿಲು ಗ್ರಾಮದ ವಿದ್ಯಾರ್ಥಿನಿ ಎಂ.ಎನ್. ಪೂರ್ಣಿಮಾ ಅವರನ್ನು ವಿದ್ಯಾಸಂಸ್ಥೆ ವತಿಯಿಂದ ಅಭಿನಂದಿಸಿ, ಮಾತನಾಡಿದ ಅವರು, ಆದಿಚುಂಚನಗಿರಿ ವಿದ್ಯಾಸಂಸ್ಥೆ ಹಾಗೂ ಇನ್ನಿತರ ಖಾಸಗಿ ಸಂಸ್ಥೆಗಳ ಸಹಕಾರದಿಂದ ಇಡೀ ಜಿಲ್ಲೆಯೇ ತಿರುಗಿ ನೋಡುವಂತೆ ತಾಲೂಕು ಬದಲಾಗಿದೆ' ಎಂದು ಸಂತಸ ವ್ಯಕ್ತಪಡಿಸಿದರು.

ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಮೈಸೂರಿನ ವಿದ್ಯಾರ್ಥಿಗಳು ಮಾಡಲಾಗದ ಸಾಧನೆಯನ್ನು ಮಾಡುತ್ತಿದ್ದಾರೆ, ಅಲ್ಲದೇ ಹಲವು ವರ್ಷಗಳ ಕಾಲ ಚಿನ್ನದ ಪದಕ ಪಡೆದ ಹಿರಿಮೆಯನ್ನು ಹೊಂದಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್. ವೆಂಕಟೇಶ್ ಮಾತನಾಡಿ, ಪದವಿ ಕಾಲೇಜು 2002ರಲ್ಲಿ ಆರಂಭವಾದಾಗ 22 ವಿದ್ಯಾರ್ಥಿಗಳು ಸೇರ್ಪಡೆಗೊಂಡಿದ್ದರು. ಪ್ರಸ್ತುತ 550ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಇದುವರೆಗೂ 8500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪದವಿ ಪಡೆದಿದ್ದಾರೆ' ಎಂದರು.

ಇದೇ ಸಂದರ್ಭದಲ್ಲಿ ಮಾಗುಡಿಲು ಗ್ರಾಮದ ಎಂ.ಎನ್. ಪೂರ್ಣಿಮಾ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಚಂದ್ರೇಗೌಡ, ಮುಖ್ಯೋಪಾಧ್ಯಾಯಿನಿ ನಂದಿನಿ, ಪ್ರಾಂಶುಪಾಲರಾದ ಎ.ಸಿ. ಭೈರಪ್ಪ, ರವಿಗೌಡ, ಸುಬ್ರಹ್ಮಣ್ಯ, ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್‌ಗೌಡ, ರಾಜೇಶ್, ಚನ್ನಕೇಶವ, ಕೈಸರ್ ಪಾಶ, ರವಿ, ಮಂಜು, ಸಿದ್ದೇಗೌಡ, ಪ್ರಕಾಶ್ ನಾಯಕ, ಕಾವ್ಯಬಾಯಿ, ಚೈತ್ರ, ಅಮೂಲ್ಯ, ಚಂದನ, ಪ್ರೀತಿ, ಅವಿನಾ ಇನ್ನು ಮುಂತಾದವರು ಇದ್ದರು.

# ಹುಣಸೂರಲ್ಲಿ ಶಾಸಕರಿಂದ 4.65 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಹುಣಸೂರಿನ ಬಜಾರ್ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು. ನಗರಸಭಾ ಸದಸ್ಯರಾದ ಕೃಷ್ಣರಾಜ ಗುಪ್ತ, ಮಾಲಿಕ್ ಪಾಷ, ಸಿರಾಜ್, ಹಿರಿಯ ಮುಖಂಡ ಹಜರತ್ ಜಾನ್ ಇತರರಿದ್ದಾರೆ.

ಹುಣಸೂರು, ಮಾ.6– ನಗರದ ವಿವಿಧ ವಾರ್ಡ್‌ಗಳಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಯಡಿ 4.65 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ.ಡಿ. ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು.

70 ಲಕ್ಷ ರೂ.ವೆಚ್ಚದಡಿ ನಗರದ ಬಜಾರ್ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲೂಕಿನಾದ್ಯಂತ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಿ ಕಾಮಗಾರಿಗಳನ್ನು ಗುರುತಿಸಲಾಗಿದೆ. ನಗರ ವ್ಯಾಪ್ತಿಯಲ್ಲಿ ಬಹು ವರ್ಷಗಳಿಂದ ಬೇಡಿಕೆಯಿದ್ದ ಮುಖ್ಯರಸ್ತೆಗಳ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಗುಣಮಟ್ಟದ ಕಾಮಗಾರಿ ಕೈಗೊಳ್ಳಲು ಸೂಚಿಸಲಾಗಿದ್ದು, ನಾಗರಿಕರು ಈ ಬಗ್ಗೆ ಗಮನವಹಿಸಬೇಕು ಎಂದರು.

ನಗರಸಭಾ ಸದಸ್ಯರಾದ ಕೃಷ್ಣರಾಜಗುಪ್ತ, ಸಿರಾಜ್, ಮಾಲಿಕ್ ಪಾಷಾ, ಮಾಜಿ ಪುರಸಭಾ ಅಧ್ಯಕ್ಷ ಹಜರತ್ ಜಾನ್ ಸೇರಿದಂತೆ ನಾಗರಿಕರು ಹಾಜರಿದ್ದರು.

**ಕಾಮಗಾರಿಗಳ ವಿವರ:** ಬಿಳಿಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಾಮಗಾರಿಗೆ 150 ಲಕ್ಷ ರೂ.ಗಳು, ನಗರದ ಎನ್‌ಎಸ್ ತಿಟ್ಟು ಬಡಾವಣೆಯ ಅಲ್ಪಸಂಖ್ಯಾತ ಕಾಲೋನಿಯ ರಸ್ತೆ ಅಭಿವೃದ್ಧಿಗೆ 30 ಲಕ್ಷ ರೂ., ರಜಾಕ್ ಮೊಹಲ್ಲಾ ರಸ್ತೆ ಅಭಿವೃದ್ಧಿಗಾಗಿ 50 ಲಕ್ಷ ರೂ., ಬಜಾರ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ 70 ಲಕ್ಷ ರೂ., ನಿಮಿಷಾಂಬ ಕಲ್ಯಾಣ ಮಂಟಪದ ಮುಂಭಾಗದ ಅಲ್ಪಸಂಖ್ಯಾತ ಕಾಲೋನಿಯ ಅಭಿವೃದ್ಧಿಗಾಗಿ 10 ಲಕ್ಷ ರೂ., ಮಾಧವ ಪ್ರೌಢಶಾಲೆ ಬಳಿಯ ಅಲ್ಪಸಂಖ್ಯಾತರ ಕಾಲೋನಿಗೆ 10 ಲಕ್ಷ ರೂ., ವಿ.ಪಿ.ಬೋರೆ ಬಡಾವಣೆಯ ಅಲ್ಪಸಂಖ್ಯಾತರು ವಾಸಿಸುವ ಪ್ರದೇಶಗಳ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗಾಗಿ 10 ಲಕ್ಷ ರೂ., ಹೋಲಿ ಫ್ಯಾಮಿಲಿ ಸ್ಕೂಲ್ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ 60 ಲಕ್ಷ ರೂ., ತಾಲೂಕಿನ ರತ್ನಪುರಿಯ ಸಂತೆಕೆರೆ ಕೋಡಿ ಗ್ರಾಮದ ಅಲ್ಪಸಂಖ್ಯಾತ ಕಾಲೋನಿಯ ರಸ್ತೆ ಅಭಿವೃದ್ಧಿಗಾಗಿ 10 ಲಕ್ಷರೂ., ರತ್ನಪುರಿಯ ಅಲ್ಪಸಂಖ್ಯಾತ ಕಾಲೋನಿಗಳಿಗೆ 10 ಲಕ್ಷ ರೂ., ಬಲ್ಲೇನಹಳ್ಳಿ ಗ್ರಾಮದ ಅಲ್ಪಸಂಖ್ಯಾತ ಕಾಲೋನಿಗಳ ರಸ್ತೆ ಅಭಿವೃದ್ಧಿಗಾಗಿ 25 ಲಕ್ಷ ರೂ., ಗಾವಡಗೆರೆ ಮತ್ತು ಬೋರೆಗೌಡನಕೊಪ್ಪಲು ಗ್ರಾಮದ ಸಿಸಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗಾಗಿ 5 ಲಕ್ಷ ರೂ.ಗಳನ್ನು ಮೀಸಲಿಡಲಾಗಿದೆ.




ಸರಗೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ನಾಲ್ಕು ವರ್ಷದ ಪದವಿ ಕೋರ್ಸ್‌ನ ನಿರ್ಧಾರ ಘೋಷಿಸುವಲ್ಲಿನ ವಿಳಂಬ ಹಾಗೂ ಅಪ್ರಜಾತಾಂತ್ರಿಕವಾಗಿ ಹೇರಿದ ನಾಲ್ಕು ವರ್ಷದ ಪದವಿಯನ್ನು ಹಿಂಪಡೆಯಬೇಕೆಂದು ಆಗ್ರಹಿಸಿ ಎಐಡಿಎಸ್‌ಓ ಸಂಘಟನೆಯ ನೇತೃತ್ವದಲ್ಲಿ ಪದವಿ ವಿದ್ಯಾರ್ಥಿಗಳು ಪ್ರತಿಭಟಿಸಿದರು.

# ತೋಟದ ಕೆಲಸಗಾರ ನಾಪತ್ತೆ



ನಂಜನಗೂಡು, ಮಾ.6– ನಂಜನಗೂಡು ತಾಲೂಕಿನ ಹೆಬ್ಯಾ ಗ್ರಾಮದ ತೋಟವೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಕೇಶವೇಗೌಡ(50) ಮಾ.1 ರಿಂದ ಕಾಣೆಯಾಗಿದ್ದಾರೆ.

ಚಹರೆ 5.10 ಅಡಿ ಎತ್ತರ ಗೋಧಿ ಬಣ್ಣ, ತಲೆಕೂದಲು ಇರುವುದಿಲ್ಲ. ಸುಳಿವು ಸಿಕ್ಕವರು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

# ಗ್ಯಾರಂಟಿ ಕೊಟ್ಟರೂ ಖಜಾನೆ ಖಾಲಿಯಾಗಿಲ್ಲ, ರಾಜ್ಯ ದಿವಾಳಿಯಾಗಿಲ್ಲ

## ಮನ್ನೇಹುಂಡಿಯಲ್ಲಿ ನೂತನ ಪಶು ಚಿಕಿತ್ಸಾಲಯ ಉದ್ಘಾಟಿಸಿದ ಯತೀಂದ್ರ



ತಿ.ನರಸೀಪುರ ತಾಲೂಕು ವರುಣ ಕ್ಷೇತ್ರ ವ್ಯಾಪ್ತಿಯ ಮನ್ನೇಹುಂಡಿ ಗ್ರಾಮದಲ್ಲಿ ನೂತನ ಪಶು ಚಿಕಿತ್ಸಾಲಯವನ್ನು ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಿದರು.

ತಿ.ನರಸೀಪುರ, ಮಾ.6– ವಿರೋಧ ಪಕ್ಷಗಳ ಟೀಕೆಯ ನಡುವೆಯೂ ಕಾಂಗ್ರೆಸ್ ಸರ್ಕಾರ ಚುನಾವಣಾ ಪೂರ್ವದಲ್ಲಿ ನೀಡಿದ್ದ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದರೂ ವಿರೋಧ ಪಕ್ಷಗಳ ಆರೋಪದಂತೆ ಖಜಾನೆ ಖಾಲಿಯಾಗಿಲ್ಲ, ರಾಜ್ಯ ದಿವಾಳಿಯೂ ಆಗಿಲ್ಲ ಎಂದು ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.

ತಾಲೂಕಿನ ಮನ್ನೇಹುಂಡಿ ಗ್ರಾಮದಲ್ಲಿ ಆರಂಭವಾಗಿರುವ ನೂತನ ಪಶು ಚಿಕಿತ್ಸಾಲಯವನ್ನು ಗೋವುಗಳಿಗೆ ಪೂಜೆ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ. ಚುನಾವಣಾ ಪೂರ್ವದಲ್ಲಿ ಜನತೆಗೆ ನೀಡಿದ್ದ 5 ಗ್ಯಾರಂಟಿಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದೆ. 58 ಸಾವಿರ ಕೋಟಿ ವೆಚ್ಚದ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದರೆ ಸರ್ಕಾರದ ಖಜಾನೆ ಖಾಲಿಯಾಗಿ ರಾಜ್ಯ ದಿವಾಳಿಯಾಗುತ್ತದೆ ಎಂಬ ವಿರೋಧ ಪಕ್ಷದವರ ಆರೋಪ ಮತ್ತು ಟೀಕೆಯನ್ನು ಮೀರಿ ಎಲ್ಲಾ 5 ಗ್ಯಾರಂಟಿಗಳನ್ನು ಜಾರಿ ಮಾಡಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯರವರು ಬಜೆಟ್ ಮಂಡಿಸಬೇಕಾದರೆ ಕರ್ನಾಟಕ ದಿವಾಳಿಯಾಗಿಲ್ಲ ಎಂದು ತೋರಿಸಿದ್ದಾರೆ ಎಂದು ಅವರು ಹೇಳಿದರು.

ಕಾಂಗ್ರೆಸ್ ಸರ್ಕಾರ ಈ ಹಿಂದೆ ಅಧಿಕಾರದಲ್ಲಿದ್ದ ವೇಳೆ ಅನುಗ್ರಹ ಯೋಜನೆ ಜಾರಿಗೆ ತಂದಿತ್ತು. ರೈತರು ಕೃಷಿಯನ್ನು ಮಾತ್ರವೇ ನಂಬಿ ಜೀವನ ಮಾಡಬಾರದು, ಉಪಕಸುಬುಗಳನ್ನು ಸಹ ಮಾಡಬೇಕು ಎಂಬ ಉದ್ದೇಶ ಹೊಂದಲಾಗಿತ್ತು. ಹೈನುಗಾರಿಕೆಯಡಿ ಕುರಿ, ಹಸು ಸಾಕಣೆ ಮಾಡಲು ಯೋಜನೆ ರೂಪಿಸಲಾಗಿತ್ತು. ಜಾನುವಾರುಗಳು ಆಕಸ್ಮಿಕವಾಗಿ ಸತ್ತರೆ ಅವರಿಗೆ ಪರಿಹಾರ ನೀಡಲು ಅನುಗ್ರಹ ಯೋಜನೆ ಜಾರಿಯಾಗಿತ್ತು. ಬಿಜೆಪಿ ಸರ್ಕಾರ ಬಂದ ವೇಳೆ ಅದನ್ನು ನಿಲ್ಲಿಸಿತ್ತು. ಈಗ ಮತ್ತೆ ಯೋಜನೆ ಜಾರಿಗೆ ತಂದಿದ್ದೇವೆ. ಹಸು ಆಕಸ್ಮಿಕವಾಗಿ ಸತ್ತರೆ 10 ಸಾವಿರ, ಕುರಿ ಸತ್ತರೆ 5 ಸಾವಿರ ರೂ.ಗಳ ಪರಿಹಾರ ಕೊಡಲಾಗುತ್ತಿದೆ ಎಂದು ಅವರು ತಿಳಿಸಿದರು.

**20ರಲ್ಲಿ 3 ವರುಣ ಕ್ಷೇತ್ರಕ್ಕೆ!:** ರಾಜ್ಯಕ್ಕೆ ಹೊಸದಾಗಿ 20 ಪಶುಚಿಕಿತ್ಸಾಲಯ ಮಂಜೂರಾಗಿದೆ. ಅದರಲ್ಲಿ ವರುಣ ಕ್ಷೇತ್ರ ವ್ಯಾಪ್ತಿಯ ಕೆಂಪಿಸಿದ್ದನಹುಂಡಿ, ಉತ್ತನಹಳ್ಳಿ ಹಾಗೂ ಮನ್ನೇಹುಂಡಿ ಗ್ರಾಮಕ್ಕೆ ಸಚಿವ ವೆಂಕಟೇಶ್ ರವರು ಮಂಜೂರು ಮಾಡಿಕೊಟ್ಟಿದ್ದಾರೆ. ಪಶು ಚಿಕಿತ್ಸಾಲಯ ಮಂಜೂರಾಗಿರುವ ವಿಷಯ ತಿಳಿಸಿ ನಮ್ಮಿಂದ ಪಟ್ಟಿ ಪಡೆದು ಮಂಜೂರು ಮಾಡಿಕೊಟ್ಟ ಅವರಿಗೆ ಕೃತಜ್ಞತೆ ಸಲ್ಲಿಸಬೇಕಿದೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು, ಸದಸ್ಯ ತುಂಬಲಾ ಪ್ರಕಾಶ್, ತಾಪಂ ಮಾಜಿ ಉಪಾಧ್ಯಕ್ಷ ಬಿ. ಮರಯ್ಯ ನಾಗರಾಜು, ಎಲ್.ಮಂಜುನಾಥ್, ಕಿರಗಸೂರು ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ವರುಣ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಕಾಂಗ್ರೆಸ್ ಪದವೀಧರರ ಜಿಲ್ಲಾಧ್ಯಕ್ಷ ಎಂ.ರಮೇಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಮಾಜಿ ಅಧ್ಯಕ್ಷ ತುಂಬಲಾ ಬಾಬು, ಎಪಿಎಂಸಿ ಮಾಜಿ ಅಧ್ಯಕ್ಷ ಎನ್. ಅನಿಲ್‌ಕುಮಾರ್, ಡೈರಿ ಉಪಾಧ್ಯಕ್ಷ ಏಳುಮಲೆ ಮಂಜು, ಗ್ರಾಪಂ ಸದಸ್ಯ ಕಾಮಿನಿ ರಾಜಶೇಖರ್, ಗ್ರಾಪಂ ಮಾಜಿ ಅಧ್ಯಕ್ಷ ಅಶ್ವಿನ್, ಕಾಂಗ್ರೆಸ್ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್, ಹುಣಸೂರು ಬಸವಣ್ಣ, ಪಶು ಇಲಾಖೆಯ ಜಿಲ್ಲಾ ಉಪನಿರ್ದೇಶಕ ಡಾ.ನಾಗರಾಜು, ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಡಾ.ಲಿಂಗರಾಜು, ಜಾನುವಾರು ಅಭಿವೃದ್ಧಿ ಅಧಿಕಾರಿ ಡಿ.ಶಿವಣ್ಣ, ಹಿರಿಯ ಪಶು ವೈದ್ಯಕೀಯ ಪರೀಕ್ಷಕ ಡಿ.ಪ್ರಕಾಶ್, ಶಿವಮಲ್ಲಪ್ಪ ಎಸ್.ಮಹದೇವು, ಪಾಪಣ್ಣ, ಬಸವರಾಜು, ರಾಘವೇಂದ್ರ, ಜಯಮ್ಮ, ನಂಜುಂಡಸ್ವಾಮಿ, ಬಿಇಓ ಶೋಭ, ತಾಪಂ ಇಓ ಚಂದ್ರು, ಪಿಡಿಓ ಧರಣೇಶ್ ಮತ್ತಿತರರಿದ್ದರು.

## ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



**ಶ್ರೀ ಪೈಲ್ವಾನ್ ಕೆ.ಪುಟ್ಟಸ್ವಾಮಿ ರವರು**
ಬಿಲ್ಡಿಂಗ್ ಕಂಟ್ರಾಕ್ಟರ್

ಇವರು ದಿನಾಂಕ 25-02-2024ನೇ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 07-03-2024 ಗುರುವಾರ ಮಧ್ಯಾಹ್ನ 12.00 ಗಂಟೆಗೆ ನಮ್ಮ ಸ್ವಗೃಹ #2986, 3ನೇ ಕ್ರಾಸ್, ಕುಕ್ಕರಹಳ್ಳಿ, ಸರಸ್ವತಿಪುರಂ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ವಿಜಯರವರು ಮತ್ತು ಮಕ್ಕಳು ಶ್ರೀ ಸಿ ಕುಮಾರ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯ ಮತ್ತು ಶ್ರೀ ಕೆ.ಅಂದಾನಯ್ಯ, ಸಹಾಯಕ ಕುಲಸಚಿವರು ನಿವೃತ್ತಿ ಮೈ.ವಿ.ವಿ.ಮೈಸೂರು ಮತ್ತು ಕುಟುಂಬವರ್ಗ, ಕುಕ್ಕರಹಳ್ಳಿ, ಸರಸ್ವತಿಪುರಂ, ಮೈಸೂರು


## 1ನೇ ವರ್ಷದ ಪುಣ್ಯಸ್ಮರಣೆ



**ಎನ್.ರವಿ**

ನಿಮ್ಮ ಆತ್ಮಕ್ಕೆ ಶಾಂತಿ ಕೋರುವ ತಂದೆ ನಾರಾಯಣ, ತಾಯಿ ರೇವತಿ, ಶ್ವೇತ, ಮದನ್, ಪೂರ್ಣಿಮ, ಹರೀಶ್.ಆರ್

## ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



**ಶ್ರೀ ರಾಮಚಂದ್ರೇಗೌಡರವರು**

ಇವರು ದಿನಾಂಕ 26-02-2024ನೇ ಸೋಮವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 07-03-2024 ಗುರುವಾರ ಬೆಳಗ್ಗೆ 10.00 ಗಂಟೆಗೆ ನಮ್ಮ ಸ್ವಗೃಹ #182, ಹುಯಿಲಾಳು ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತರು:** ಪತ್ನಿ ಶ್ರೀಮತಿ ದೇವಮ್ಮ, ಹೆಣ್ಣುಮಕ್ಕಳು, ಅಳಿಯಂದಿರು, ಲೇಟ್ ರಾಮೇಗೌಡರ ಕುಟುಂಬದವರು

**ಹರಿಕಥೆ : ಶಿವಕುಮಾರ್ ಬಂದನಾಲು | ಭೋಜನ: ಮಧ್ಯಾಹ್ನ 1.00 ಗಂಟೆಗೆ**

## 3ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಯಲಕಪ್ಪಾಚಾರ್‌ರವರ ಮೊಮ್ಮಗಳು
**ಗೋಮ ಸುಂದರರಾಜನ್**
ನಿಧನ : 07.03.2021
W/o ಸುಂದರರಾಜನ್ ಕೆ. ಕಲ್ಪಕ್ಕಮ್, Atomic energy.
ನಿಮ್ಮ ಸವಿನೆನಪು
ನಮ್ಮ ಹೃದಯಗಳಲ್ಲಿ ಸದಾ ಅಮರ
ಸುಂದರರಾಜನ್, ಲಿವಿಥಾ, ಯಶ್ವಂಥ್ & ಕುಟುಂಬವರ್ಗದವರು

## 8ನೇ ವರ್ಷದ ಸವಿನೆನಪು



**ಕೆ.ರಾಜೇಶ್** (ಕಂಚ)

ದುಃಖತಪ್ತರು: ತಾಯಿ ಲಕ್ಷ್ಮೀ, ತಂದೆ ಕುಮಾರ, ತಂಗಿ ರಾಧಿಕ ಮತ್ತು ಚೇತನ ರಾಜ್, ಮಾನ್ಯ, ಗೌರವ್ ಮರಿಗೌಡರ ಕುಟುಂಬವರ್ಗ, ಮಾಕನಹುಂಡಿ.





## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷೀಧಾರರಾದ ಶ್ರೀ ಆರ್.ಆರ್. ಮೋಹಕ್ ಬಿನ್ ಶ್ರೀ ರಾಜಶೇಖರ ಮೂರ್ತಿ, ಚಾಮಲ್ 2ನೇ ಕಾಸ್, ಚಾಮರಾಜನಗರ ಟೌನ್ ರವರು ದಿನಾಂಕ 31-01-2024 ರಂದು ಚಾಮರಾಜನಗರ ಡಬಲ್ ರೋಡ್ ನಲ್ಲಿ ಹೋಗುತ್ತಿರುವಾಗ ದಿನಾಂಕ 31-5-2001 ಶ್ರೀ ಬಿ. ಬಸವಣ್ಣನವರು ಶ್ರೀ ಟಿ. ಶಿವಣ್ಣ ನವರಿಗೆ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೋಗಾದಿ ಗ್ರಾಮದ ಸರ್ವೆ ನಂ. 130/1ಎ20 ವಿಸ್ತೀರ್ಣ 5 ಗುಂಟೆ ಸ್ವತ್ತನ್ನು ಬರೆದುಕೊಟ್ಟ ಕ್ರಯಪತ್ರದ ಮೂಲಪ್ರತಿ ಕಳೆದುಕೊಂಡಿದ್ದಾರೆ. ನನ್ನ ಕಕ್ಷೀದಾರರು ಇದರ ಬಗ್ಗೆ ಪಟ್ಟಣ ಪೋಲೀಸ್ ಠಾಣೆ, ಚಾಮರಾಜನಗರ ಕ್ಕೆ 1-02-2024 ರಂದು ದೂರು ಸಲ್ಲಿಸಿರುತ್ತಾರೆ. ಸಾರ್ವಜನಿಕರು ಈ ಪತ್ರವನ್ನು ಯಾರಾದರೂ ಕಂಡಲ್ಲಿ ಈ ಕೆಳಕಂಡ ನವರಿಗೆ ತಿಳಿಸುವುದು.

ಸಹಿ/– ಬಿ.ಎಂ. ಶಿವಸ್ವಾಮಿ, ವಕೀಲರು
#1127/2ಎ, 1ನೇ ಕ್ರಾಸ್, ವಾಣೀವಿಲಾಸ ರಸ್ತೆ, (ಆರ್‌ಟಿಓ ಹಿಂಭಾಗ)
ಚಾಮರಾಜಪುರಂ, ಮೈಸೂರು–570005
ಮೊ.ನಂ. 9448505433

ದಿನಾಂಕ: 02–03–2024
ಸ್ಥಳ: ಮೈಸೂರು





## ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ ರಸ್ತೆ, ಮೈಸೂರು – 570005,
ದೂರವಾಣಿ/ಫ್ಯಾಕ್ಸ್: 0821–2420624

ಸಂಖ್ಯೆ: ಮೈನಪ್ರಾ/ಅಅ/ಪಿಬಿ/ಟಿಎನ್/14/2023–24 ದಿನಾಂಕ: 4.03.2024

**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ**

(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ರೂ.1.80 ರಿಂದ 160.00 ಲಕ್ಷಗಳ ಅಂದಾಜು ಮೊತ್ತದ ಒಟ್ಟು 20 ಸಂಖ್ಯೆ ಕಾಮಗಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕ್ರಮ ಸಂಖ್ಯೆ 01 ರಿಂದ 20 ರವರೆಗಿನ ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿ: 06.03.2024 ರಿಂದ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ದಿ: 13.03.2024ರ ಸಂಜೆ 4.00 ಗಂಟೆಯವರೆಗೆ ಸಮಯವನ್ನು ನಿಗಧಿಪಡಿಸಿದ್ದು, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ಕ್ರಮವಾಗಿ ದಿ: 14.03.2024 ರ ಸಂಜೆ 4.30ರ ನಂತರ ತೆರೆಯಲಾಗುವುದು. ಅರ್ಹ ನೋಂದಾಯಿತ ಸಿವಿಲ್ ಮತ್ತು ವಿದ್ಯುತ್ ಗುತ್ತಿಗೆದಾರರು ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://KPPP.karnataka.gov.in ಮುಖಾಂತರ ನಿಯಮಾವಳಿಯಂತೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ 0821–2420624 ರಿಂದ ಹಾಗೂ ಪ್ರಾಧಿಕಾರದ ವೆಬ್‌ಸೈಟ್ www.mudamysore.gov.in ನಲ್ಲಿ ಪ್ರಕಟಣೆಯ ಮಾಹಿತಿಯನ್ನು ಪಡೆಯಬಹುದು.

**ಟಿಪ್ಪಣಿ:** ಟೆಂಡರ್ ಸಲ್ಲಿಸುವ ದಿನಾಂಕಗಳು ಬದಲಾಣೆ ಇದ್ದಲ್ಲಿ ಇ–ಪ್ರೊಕ್ಯೂರ್ ಮೆಂಟ್ ಮುಖಾಂತರ ಇರುವ ದಿನಾಂಕಗಳನ್ನೆ ಪರಿಗಣಿಸುವುದು, ಮತ್ತೆ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/– ಅಧೀಕ್ಷಕ ಅಭಿಯಂತರರು







## ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಪಿ & ಎಸ್.ಸಿ. ಸಂಖ್ಯೆ: 6/2024

ಅರ್ಜಿದಾರರುಗಳು: ಪಿ. ರಾಜು ಬಿನ್ ಎಸ್. ಪುಟ್ಟಯ್ಯ, ವಯಸ್ಸು ಸುಮಾರು 48 ವರ್ಷ ವಾಸ: ವೀರದೇವನಪುರ ಗ್ರಾಮ, ಚಿನ್ನದಗುಡಿ ಹುಂಡಿ ಅಂಚೆ, ಕಸಬಾ ಹೋಬಳಿ, ನಂಜನಗೂಡು ತಾಲ್ಲೂಕು.

ವಿರುದ್ಧ

ಎದುರುದಾರರು: ಇಲ್ಲ

### ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ತಂದೆಯ ತಂಗಿಯವರಾದ ಮಾದಮ್ಮ ಉರುಫ್ ಚಿನ್ನಮ್ಮ ಕೋಂ ಸಣ್ಣಮಾದಯ್ಯ ರವರು ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ವೀರದೇವನಪುರ ಗ್ರಾಮದಲ್ಲಿ ದಿನಾಂಕ 19–01–2016 ರಂದು ಮರಣ ಹೊಂದಿರುತ್ತಾರೆ. ಅವರ ಜೀವಿತ ಕಾಲದಲ್ಲಿ ದಿನಾಂಕ 04–06–2012 ರಂದು ಈ ಕೆಳಗಿನ ಷೆಡ್ಯೂಲ್ ಸ್ವತ್ತುಗಳನ್ನು ಅರ್ಜಿದಾರರ ಪರವಾಗಿ ವಿಲ್ ಮಾಡಿರುತ್ತಾರೆ. ಇದೀಗ ಮೇಲ್ಕಂಡ ಅರ್ಜಿದಾರರು ಖಾತೆ ವಗೈರೆಗಳಿಗಾಗಿ ಪ್ರೋಬೇಟ್ ಪಡೆಯಲು ಈ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಸಂಬಂಧ ಯಾವುದೇ ತಂಟೆ ತಕರಾರು ಇದ್ದಲ್ಲಿ ದಿನಾಂಕ 18–3–24 ರಂದು ಬೆಳಿಗ್ಗೆ 11.00 ಗಂಟೆಗೆ ಈ ಘನ ನ್ಯಾಯಾಲಯದಲ್ಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ತಕರಾರು ಏನು ಇಲ್ಲವೆಂದು ತಿಳಿದು ಏಕಪಕ್ಷೀಯ ಆದೇಶವನ್ನು ಮಾಡುತ್ತದೆ ಎಂದು ತಿಳಿಯತಕ್ಕದ್ದು.

ಷೆಡ್ಯೂಲ್

ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ವೀರದೇವನಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ. 119/6ಬಿ ರ ವಿಸ್ತೀರ್ಣ 0.06 ಗುಂಟೆ, ಸರ್ವೆ ನಂ. 119/6ಎ ರ ವಿಸ್ತೀರ್ಣ 0.18 ಗುಂಟೆ ಪೈಕಿ 0.10 ಗುಂಟೆ ಜಮೀನು ಮತ್ತು ಸರ್ವೆ ನಂ. 119/6ಸಿ2 ರಲ್ಲಿ 0.05 ಗುಂಟೆ ಜುಮ್ಲಾ 0.21 ಗುಂಟೆ ಜಮೀನಿಗೆ ಚಕ್ಕುಬಂದಿ:–

ಪೂರ್ವಕ್ಕೆ: ಚೌಡಯ್ಯ ಮಣಿಯಮ್ಮ ರವರ ಜಮೀನು ; ಪಶ್ಚಿಮಕ್ಕೆ: ರಂಗಯ್ಯ ರವರ ಜಮೀನು ; ಉತ್ತರಕ್ಕೆ: ಮಣಿಯಮ್ಮ ರವರ ಜಮೀನು ; ದಕ್ಷಿಣಕ್ಕೆ: ಚೌಡಯ್ಯರವರ ಜಮೀನು.

ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ,
ಸಹಿ/– ಮುಖ್ಯ ಆಡಳಿತಾಧಿಕಾರಿಗಳು
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು

ಸಹಿ/– ಎಂ. ಮಹದೇವಸ್ವಾಮಿ
ಅರ್ಜಿದಾರರ ಪರ ವಕೀಲರು
ದಿನಾಂಕ: 22–2–2024, ಮೈಸೂರು

## ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
**ಸಾಮಾಜಿಕ ಅರಣ್ಯ ವಿಭಾಗ, ಮೈಸೂರು**
"ಅರಣ್ಯ ಭವನ"ಅಶೋಕಪುರಂ, ಮೈಸೂರು.
Ph/Fax: 0821–2484606 Email: dcfsfmys@yahoo.com
ಕ್ರಸಂ:ಬಿ1/ಬಿಯುಡಿ/ಹೊ.ಗು/ಇ.ಟೆಂಡರ್/ಸಿಆರ್./2023–24 ದಿ: 27.2.2024

**ಇ–ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೈಸೂರು ಸಾಮಾಜಿಕ ಅರಣ್ಯ ವಿಭಾಗ ಹಾಗೂ ವಿಭಾಗ ವ್ಯಾಪ್ತಿಯ ವಲಯಗಳಲ್ಲಿ 2406–101–0826–16– ಸಾಮಾಜಿಕ ಅರಣ್ಯ– 034 ಗುತ್ತಿಗೆ / ಹೊರಗುತ್ತಿಗೆ ಲೆಕ್ಕ ಶೀರ್ಷಿಕೆಯಡಿ ಮಾನವ ಸಂಪನ್ಮೂಲ ಸೇವೆಯನ್ನು ದಿ: 01.4.2024 ರಿಂದ 31.03.2025 ರವರೆಗೆ (12 ತಿಂಗಳ ಅವಧಿಗೆ) ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಮೈಸೂರುರವರ ಕಛೇರಿ, ಹಾಗೂ ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಗೊಳಪಡುವ ಮೈಸೂರು/ನಂಜನಗೂಡು/ಟಿ.ನರಸಿಪುರ/ಪಿರಿಯಾಪಟ್ಟಣ/ಹುಣಸೂರು/ಹೆಚ್.ಡಿ.ಕೋಟೆ ಹಾಗೂ ಕೆ.ಆರ್.ನಗರ ವಲಯ ಅರಣ್ಯಾಧಿಕಾರಿಗಳ ಕಛೇರಿಗಳು ಸೇರಿದಂತೆ 11 ಮಂದಿ ಗಣಕಯಂತ್ರ ನಿರ್ವಾಹಕರು (ಡಾಟ ಎಂಟ್ರಿ ಆಪರೇಟರ್) 2 ಮಂದಿ ಲಿಪಿಕ ಸಹಾಯಕರು, 2 ಮಂದಿ ವಾಹನ ಚಾಲಕರು, 8 ಮಂದಿ ಕಾವಲುಗಾರ 1 ಸಂಖ್ಯೆ ಶುಚಿಗಾರರು ಸೇರಿದಂತೆ ಒಟ್ಟಾರೆ 24 ಮಂದಿ ನೌಕರರನ್ನು ಹೊರಸಂಪನ್ಮೂಲ ಗುತ್ತಿಗೆದಾರರು/ಸಂಸ್ಥೆಯವರಿಂದ ಪಡೆಯಲು ಅರ್ಹಗುತ್ತಿಗೆದಾರರು/ಸಂಸ್ಥೆಯಿಂದ ನಿಬಂಧನೆಗಳನ್ನೊಳಗೊಂಡಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://Kppp.karnataka.gov.in ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ಸ್ವೀಕರಿಸಲು ಮೊದಲನೇ ದಿ: 18.3.2024 ರ ಸಂಜೆ 4.00 ಘಂಟೆಯವರೆಗೆ ಕಡೆಯ ದಿನಾಂಕವಾಗಿರುತ್ತದೆ. ಸದರಿ ಇ–ಟೆಂಡರನ್ನು ದಿ: 19.3.2024 ರಂದು ಅಪರಾಹ್ನ 4.15 ಘಂಟೆಗೆ ತೆರೆಯಲಾಗುವುದು. ಮೇಲ್ಕಂಡ ದಿನದಂದು ಸದರಿ ಇ–ಟೆಂಡರ್‌ನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಹೊರಗುತ್ತಿಗೆ ಸಂಬಂಧ ಎರಡನೇ ಬಾರಿಗೆ ಇ–ಟೆಂಡರ್ ಸ್ವೀಕರಿಸಲು ದಿ: 25.3.2024ರ ಸಂಜೆ 4.00 ಘಂಟೆಯವರೆಗೆ ಕಡೆಯ ದಿನಾಂಕವಾಗಿದ್ದು ಮರು ಟೆಂಡರ್ ಸಂಬಂಧ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.ಇತರೆ ಹೆಚ್ಚಿನ ಮಾಹಿತಿಗಳನ್ನು http://Kppp.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಸದರಿ ಕಛೇರಿಯಿಂದ ಕರ್ತವ್ಯ ದಿನಗಳಂದು ಕೆಲಸದ ಅವಧಿಯಲ್ಲಿ ಪಡೆಯಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

DIPR/DDMYS/KSMCA/1263/2023-24



## ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ನಿಯಮಿತ

ಕೇಂದ್ರ ಕಛೇರಿ : ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು – 570001.
ಶಾಖೆಗಳು : ಬೆಂಗಳೂರು, ಅರಸೀಕೆರೆ, ಯಲಹಂಕ ಮತ್ತು ಮೈಸೂರು ರೈಲ್ವೆ ಕಾರ್ಯಗಾರ
ಫೋನ್ ನಂ : 0821–4266660 ಮೊ.ನಂ : 8147169071

**ಠೇವಣಿದಾರರುಗಳಿಗೆ ಸಂತಸದ ಸುದ್ದಿ ನಿಮ್ಮ ಠೇವಣಿಗಳಿಗೆ ಹೆಚ್ಚಿನ ಬಡ್ಡಿ ದರಗಳನ್ನು ಪಡೆಯಿರಿ.**

**ಅವಧಿ ಠೇವಣಿ (FD)**

| ಕ್ರ ಸಂ. | ವಿವರಗಳು | ಸಾಮಾನ್ಯ ನಾಗರೀಕರಿಗೆ/ ಅಂಗವಿಕಲರಿಗೆ/ಟ್ರಸ್ಟ್‌ಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ | ಹಿರಿಯ ನಾಗರಿಕರಿಗೆ |
|---|---|---|---|
| 1. | 31 ದಿನಗಳಿಂದ 90 ದಿನಗಳವರೆಗೆ | 4.25% | 4.75% |
| 2. | 91 ದಿನಗಳಿಂದ 180 ದಿನಗಳವರೆಗೆ | 4.75% | 5.25% |
| 3. | 181 ದಿನಗಳಿಂದ 364 ದಿನಗಳವರೆಗೆ | 5.75% | 6.25% |
| 4. | 365 ದಿನಗಳಿಗೆ | 8.00% | 8.50% |
| 5 | 1 ವರ್ಷ 1 ತಿಂಗಳ ಮೇಲ್ಪಟ್ಟು 3 ವರ್ಷದವರೆಗೆ | 7.50% | 8.00% |
| 6 | 3 ವರ್ಷ 1 ತಿಂಗಳ ಮೇಲ್ಪಟ್ಟು 5 ವರ್ಷದವರೆಗೆ | 7.75% | 8.25% |

ಸಹಿ/–ಮುಖ್ಯ ಕಾರ್ಯನಿರ್ವಹಣಾಧಿಕಾರಿ

